# ಅಧ್ಯಾಯ ೧

## ಹದಿಹರೆಯ: ಒಂದು ಸಮಾಜೋ-ಸಾಂಸ್ಕೃತಿಕ ನಿರ್ಮಿತಿ

**ಸಾರಾಂಶ:**

ಹದಿಹರೆಯ ಎನ್ನುವುದು ಸಾಂಸ್ಕೃತಿಕ-ಸಾಂದರ್ಭಿಕ-ಬೆಳವಣಿಗೆಯ ಚೌಕಟ್ಟಿನಲ್ಲಿ ವಿಕಸಿತಗೊಳ್ಳುವ ಒಂದು ಸಮಾಜೋ-ಸಾಂಸ್ಕೃತಿಕ ನಿರ್ಮಿತಿಯಾಗಿದೆ. ಹದಿಹರೆಯವು ಪಾಂಡಿತ್ಯಪೂರ್ಣ ಆಸಕ್ತಿಯ ವಿಷಯವಾಗಿ ವಿಕಾಸಗೊಂಡಿರುವ ನಿಟ್ಟಿನ ಒಂದು ಕಿರು ನೋಟದೊಂದಿಗೆ ಈ ಅಧ್ಯಾಯವು ಪ್ರಾರಂಭವಾಗುತ್ತದೆ. ನಂತರ ಹದಿಹರೆಯದ ಬಗೆಗಿನ ಪಾಶ್ಚಾತ್ಯ ದೃಷ್ಟಿಕೋನವನ್ನು ವಿವರಿಸಲಾಗಿದೆ. ನಂತರದ ವಿಭಾಗವು ಸಂಸ್ಕೃತಿಗಳಾದ್ಯಂತ ಈ ಬೆಳವಣಿಗೆಯ ಹಂತಗಳ ವಿವಿಧ ಅರ್ಥ ಮತ್ತು ವ್ಯಾಖ್ಯಾನಗಳ ಉದಾಹರಣೆಗಳೊಂದಿಗೆ ಹದಿಹರೆಯದಲ್ಲಿ ವಿಭಿನ್ನ ಸಾಂಸ್ಕೃತಿಕ ಪರಿವರ್ತನೀಯತೆಯ ಒಂದು ಪಕ್ಷಿನೋಟವನ್ನು ನೀಡುತ್ತದೆ. ಇದರ ತರುವಾಯ ಸ್ವಾಯತ್ತತೆ, ಅಧಿಕಾರ, ಮತ್ತು ವ್ಯಕ್ತಿಗಳ ನಡುವಿನ ಪಾರಸ್ಪರಿಕ ಭಿನ್ನಾಭಿಪ್ರಾಯಗಳ ಪ್ರಮುಖ ಅಂಶಗಳನ್ನು ಎತ್ತಿ ತೋರಿಸಲು ಪೋಷಕ-ಹದಿಹರೆಯದವರ ಸಂಬಂಧವನ್ನು ಕೇಂದ್ರೀಕರಿಸಿ ಹದಿಹರೆಯದ ಸಾಮಾಜೀಕರಣವನ್ನು ಕುರಿತ ಚರ್ಚೆಯನ್ನು ಮುಂದಿಡಲಾಗಿದೆ. ನಂತರದ ವಿಭಾಗದಲ್ಲಿ ಹದಿಹರೆಯದವರನ್ನು ಸಾಮಾಜಿಕ ಬದಲಾವಣೆ ಮತ್ತು ಜಾಗತೀಕರಣದ ಸಂದರ್ಭದಲ್ಲಿ ಚಿತ್ರಿಸಲಾಗಿದ್ದು, ತರುವಾಯ ಭಾರತೀಯ-ಹಿಂದೂ ಲೋಕದೃಷ್ಟಿಯಲ್ಲಿ ಮತ್ತು ಸಮಕಾಲೀನ ಭಾರತೀಯ ಸಂದರ್ಭದಲ್ಲಿ ಹದಿಹರೆಯವನ್ನು ಹೇಗೆ ರೂಪಿಸಲಾಗಿದೆ ಎನ್ನುವುದನ್ನು ಚರ್ಚಿಸಲಾಗಿದೆ, ಮತ್ತು ಗುಜರಾತ್‌ನ ಬರೋಡ(ವಡೋದರ)ದಲ್ಲಿರುವ ನಗರ ಮಧ್ಯಮವರ್ಗದ ಚಿತ್ರಣ ಇದರ ಮುಂದುವರೆದ ಭಾಗವಾಗಿದೆ.

### ಒಂದು ಪಾಂಡಿತ್ಯಪೂರ್ಣ ಅಧ್ಯಯನ ವಿಷಯವಾಗಿ ಹದಿಹರೆಯವನ್ನು ಕುರಿತು ಒಂದು ಇಣುಕುನೋಟ

ಹದಿಹರೆಯ ಅಥವಾ 'ಅಡೋಲೊಸೆನ್ಸ್' ಎಂಬ ಪದವು ಅಡೊಲೊಸಿಯರ್ ಅಂದರೆ ಪ್ರೌಢಾವಸ್ಥೆಯನ್ನು ತಲುಪುವುದು ಎನ್ನುವ ಅರ್ಥವನ್ನು ಕೊಡುವ ಲ್ಯಾಟಿನ್ ಮೂಲ ಪದದಿಂದ ವ್ಯುತ್ಪನ್ನಗೊಂಡಿದೆ (ಮುಸ್ ಮತ್ತು ಪೋರ್ಟನ್ ೧೯೯೦). ಪಶ್ಚಿಮದಲ್ಲಿ ಹದಿಹರೆಯದ ವೈಜ್ಞಾನಿಕ ಅಧ್ಯಯನವನ್ನು ಜಿ. ಸ್ಟಾನ್ಲಿ ಹಾಲ್ ಅವರ ಎರಡು ಸಂಪುಟದ "ಅಡೋಲೊಸೆನ್ಸ್" ಎನ್ನುವ ಕೃತಿಯು ಪ್ರಕಟಗೊಂಡ ಒಂದು ಶತಮಾನದ ಹಿಂದೆ ಗುರುತಿಸಬಹುದಾಗಿದ್ದು, "ಕ್ಷೋಭೆ ಹಾಗೂ ಒತ್ತಡ" ("storm and stress") ಎಂಬ ಗುಣವಾಚಕವು ಅದರ ಪ್ರಬಲ ಹಾಗೂ ಚಿರಕಾಲೀನ ಪ್ರಮುಖ ಅಂಶವೆನಿಸಿದೆ. ಫ್ರಾಯ್ಡ್ನ ಮನೋವಿಶ್ಲೇಷಣಾ ಸಿದ್ಧಾಂತ ಮತ್ತು ಎರಿಕ್‌ಸನ್‌ರವರ ಮನಸ್ಸಾಮಾಜಿಕ ಸಿದ್ಧಾಂತಗಳಂತಹ ಮಾನವ ಬೆಳವಣಿಗೆಯ ಅತ್ಯುತ್ತಮ ಸಿದ್ಧಾಂತಗಳು ಇದರ ರಚನೆಗೆ ನೀಡುವ ಬೆಂಬಲದೊಂದಿಗೆ ಹಲವು ದಶಕಗಳ ಕಾಲ ಹದಿಹರೆಯವನ್ನು ಕುರಿತಾದ ಪಾಶ್ಚಾತ್ಯ ಪಾಂಡಿತ್ಯವು ಇದನ್ನು ಆಧರಿಸಿ ನೆಲೆಗೊಂಡಿತ್ತು. ಹಾಗಾಗಿ ಹದಿಹರೆಯ ಎನ್ನುವುದು ಒಂದು ಸಂಕಷ್ಟದ ಕಾಲ ಎನ್ನುವ ಭಾವವು ಮುಂದುವರೆದಿದ್ದು, ಭಾವನಾತ್ಮಕ ತಳಮಳ, ಸ್ವಾಯತ್ತತೆಯ ಹಪಹಪಿ, ಮತ್ತು ಅಸ್ಮಿತೆಯ ತಡಕಾಟದಂತಹ ವಿಷಯಗಳನ್ನು ಎತ್ತಿ ತೋರಿಸಿದೆ. ಸಮಾಜ ವಿಜ್ಞಾನದಲ್ಲಿ ಬಹಳಷ್ಟು ಮಟ್ಟಿಗೆ ತನ್ನ ಪ್ರಾಧಾನ್ಯವನ್ನು ಹೊಂದಿದ್ದ ಪಾಶ್ಚಾತ್ಯ ದೃಷ್ಟಿಕೋನಕ್ಕನುಗುಣವಾಗಿ ಮತ್ತು ಪಶ್ಚಿಮೇತರ ಅಥವಾ ಭಾರತೀಯ ದೃಷ್ಟಿಕೋನಕ್ಕೆ ಸಂಬಂಧಿಸಿದ ಸಾಂಸ್ಕೃತಿಕವಾಗಿ ಸಂಗತವಾಗಿರುವ ಸಾಕಷ್ಟು ವಿದ್ವತ್‌ಪೂರ್ಣ ಸಂಪನ್ಮೂಲಗಳ ಕೊರತೆಯಿಂದಾಗಿ ಹದಿಹರೆಯದ ಬಗೆಗಿನ ಈ ಅಭಿಪ್ರಾಯವು ಸಾರ್ವತ್ರಿಕ ಹಾಗೂ ಏಕರೂಪವಾಗಿದ್ದು, ಜಗತ್ತಿನೆಲ್ಲೆಡೆ ಹದಿಹರೆಯದವರಿಗೆ ಅನ್ವಯವಾಗುವಂತಹುದು ಎಂದು ಪರಿಗಣಿಸಲಾಯಿತು. ಹದಿಹರೆಯದ ಬದುಕಿನ ವಾಸ್ತವಾಂಶಗಳು ಮತ್ತು ಅದನ್ನು

ಕುರಿತ ವ್ಯಾಖ್ಯಾನದಲ್ಲಿ ಸಂಸ್ಕೃತಿಯು ಒಂದು ಮಹತ್ವದ ಮಧ್ಯವರ್ತಿ ಅಥವಾ ಮೂಲಾಧಾರವೆನ್ನುವ ಕಲ್ಪನೆಯು ಬಹುಮಟ್ಟಿಗೆ ಅನುಪಸ್ಥಿತವಾಗಿತ್ತು.

ಹದಿಹರೆಯವನ್ನು ಕುರಿತ ಅಧ್ಯಯನದಲ್ಲಿ ಸಂಸ್ಕೃತಿಯನ್ನು ಒಳಗೊಳ್ಳಲು ಮೊದಲಿಗೆ ಪ್ರಾರಂಭವಾದದ್ದು ಸಾಂಸ್ಕೃತಿಕ ಮಾನವ ಶಾಸ್ತ್ರದಲ್ಲಿ. ಹದಿಹರೆಯವನ್ನು ಕೇಂದ್ರೀಕರಿಸಿದ ಮಾರ್ಗರೆಟ್ ಮೀಡ್ ಅವರ *ಕಮಿಂಗ್ ಆಫ್ ಏಜ್ ಇನ್ ಸಮೋವಾ* (೧೯೨೮) ಕೃತಿಯಲ್ಲಿ ಈ ಬೆಳವಣಿಗೆಯ ಅವಧಿಯ ಬಗೆಗಿನ "ಸ್ವೀಕೃತ" ದೃಷ್ಟಿಕೋನದ ನಿಟ್ಟಿನ ಮಹತ್ವದ ಸವಾಲುಗಳನ್ನು ಮಂಡಿಸಲಾಯಿತು. ಉದಾಹರಣೆಗೆ, ಪಾಶ್ಚಾತ್ಯ ಸಮಾಜಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಮಕ್ಕಳ ಮತ್ತು ಪ್ರೌಢ ಜಗತ್ತಿನ ನಡುವೆ ಇದ್ದಕ್ಕಿದ್ದಂತೆ ಘಟಿಸುವ ಬದಲಾಗಿ ನಿರಂತರವಾಗಿ ಕಂಡುಬರುವ ಬೆಳವಣಿಗೆಯ ಸ್ವರೂಪ ಮತ್ತು ಅವೆರಡು ಸ್ಥಿತಿಗಳ ನಡುವಿನ ಅಲ್ಪತಮ ವ್ಯತ್ಯಾಸ. ಮೀಡ್‌ನ ಅಧ್ಯಯನದ ನಂತರ ಹದಿಹರೆಯದ ಕುರಿತಾದ ಮಾನವಶಾಸ್ತ್ರೀಯ ಆಸಕ್ತಿಯನ್ನು ಆಗೊಮ್ಮೆ ಈಗೊಮ್ಮೆ ಮಾತ್ರ ನಾವು ಕಾಣುತ್ತೇವೆ (ಶ್ಲೀಗಲ್ ೨೦೦೧). ಅದೇನೆ ಇರಲಿ, ಹದಿಹರೆಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಂಸ್ಕೃತಿಯನ್ನು ಒಳಗೊಳ್ಳುವುದಕ್ಕೆ ಇದು ತನ್ನ ಕೊಡುಗೆಯನ್ನಂತೂ ಸಲ್ಲಿಸಿದೆ. ವಿಭಿನ್ನ ಸಾಂಸ್ಕೃತಿಕ ಮನಶ್ಶಾಸ್ತ್ರದ ಪ್ರವೇಶವು ಹದಿಹರೆಯದಲ್ಲಿನ ಸಾಂಸ್ಕೃತಿಕ ವ್ಯತ್ಯಾಸಗಳು ಮತ್ತು ಸಾರ್ವತ್ರಿಕತೆಗೆ ಮತ್ತಷ್ಟು ಉತ್ತೇಜನವನ್ನು ನೀಡಿದರೆ, ಸಾಂಸ್ಕೃತಿಕ ಮನಶ್ಶಾಸ್ತ್ರವು ಮಾನವ ಬೆಳವಣಿಗೆ ಹಾಗೂ ವರ್ತನೆಯ ಅಧ್ಯಯನದಲ್ಲಿ ಸಂಸ್ಕೃತಿಯನ್ನು ಕೇಂದ್ರಸ್ಥಾನಕ್ಕೆ ತಂದಿತು. ಹೀಗೆ ಹದಿಹರೆಯ ಎಂಬ ಕಲ್ಪನೆಯು ಒಂದು ಸಾಂಸ್ಕೃತಿಕ ನಿರ್ಮಿತಿ ಎಂಬುದು ಸ್ವೀಕೃತಗೊಳ್ಳತೊಡಗಿತು. ಮಾನವ ಬೆಳವಣಿಗೆ ಎನ್ನುವುದು ಸಂಸ್ಕೃತಿ ಮತ್ತು ಸಂದರ್ಭಗಳ ನಡುವಿನ ಪರಸ್ಪರ ಕ್ರಿಯೆಗಳನ್ನು ಒಳಗೊಂಡಿದೆ ಎನ್ನುವ ವರ್ತಮಾನದ ವೈಜ್ಞಾನಿಕ ಅನಿವಾರ್ಯತೆಯಿಂದಾಗಿ ಹದಿಹರೆಯವನ್ನೂ ಕೂಡ ಸಾಂದರ್ಭಿಕ ದೃಷ್ಟಿಕೋನದ ಮಿತಿಯೊಳಗೆ ಅಧ್ಯಯನ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ, ಕಿರು ಸಿದ್ಧಾಂತಗಳು ಮತ್ತು ಅನ್ವಯಿಕ ಅಭಿವೃದ್ಧಿಶೀಲ ವೈಜ್ಞಾನಿಕ ದೃಷ್ಟಿಕೋನದತ್ತ ಗಮನವನ್ನು ಕೇಂದ್ರೀಕರಿಸುವುದರೊಂದಿಗೆ, ಮಾನವ ಬೆಳವಣಿಗೆಯಲ್ಲಿ ನಿರಂತರತೆ ಹಾಗೂ ಸುನಮ್ಯತೆ(plasticity)ಯನ್ನು ಕೇಂದ್ರೀಕರಿಸಿದ ಒಂದು ಸಾಂದರ್ಭಿಕ ಚೌಕಟ್ಟಿಗೆ, ಉದಾಹರಣೆಗೆ, ಲರ್ನರ್‌ನ ಅಭಿವೃದ್ಧಿಶೀಲ-ಸಾಂದರ್ಭಿಕ ಚೌಕಟ್ಟಿಗೆ ಮಹತ್ವವನ್ನು ನೀಡಲಾಗಿದೆ (ಸ್ಟೀನ್‌ಬರ್ಗ್ ಮತ್ತು ಮೊರಿಸ್ ೨೦೦೧). ಹದಿಹರೆಯದವರು ನಿರ್ವಹಿಸಬೇಕಾದ ಸಮಸ್ಯೆಗಳು ಎಂದು ಪರಿಗಣಿಸುವ ನಿಟ್ಟಿನ ಕೊರತೆ ಅಥವಾ ಸಮಸ್ಯಾ-ಸೂಚಕ ದೃಷ್ಟಿಕೋನದಿಂದ ನಿರ್ಗಮಿಸುವ ನಿಟ್ಟಿನಲ್ಲಿ, ಧನಾತ್ಮಕ ಯುವ ಅಭಿವೃದ್ಧಿ (PYD – Positive Youth Development) ಚೌಕಟ್ಟು; ಯುವಜನಾಂಗವನ್ನು, ಅಭಿವೃದ್ಧಿಪಡಿಸಬೇಕಾದ ಸಂಪನ್ಮೂಲವೆಂದು ಪರಿಗಣಿಸುತ್ತದೆ (ರೋಥ್ ಮತ್ತು ಬ್ರೂಕ್ಸ್-ಗನ್ ೨೦೦೩). ಈ ದೃಷ್ಟಿಕೋನವು ಅತ್ಯುತ್ತಮ ಕಾರ್ಯಶೀಲತೆ ಮತ್ತು ಉನ್ನತಿಶೀಲತೆಯ ಸೂಚಕಗಳತ್ತ ಗಮನಹರಿಸುತ್ತದೆ ಮತ್ತು ತನ್ನ ಅಭಿವೃದ್ಧಿಯನ್ನು ಪ್ರಭಾವಿಸುವ ನಿಟ್ಟಿನ ಹದಿಹರೆಯದವರ ಸಾಮರ್ಥ್ಯವನ್ನು ಎತ್ತಿ ತೋರಿಸಲು ಕರ್ತೃತ್ವದ ಪರಿಕಲ್ಪನೆಗೆ ಹಾಗೂ ಅದು ವಹಿಸುವ ಪಾತ್ರಕ್ಕೆ ಮಹತ್ವವನ್ನು ನೀಡುತ್ತದೆ. ಬದಲಾಗುತ್ತಿರುವ ಜಗತ್ತಿನ ಸಂಕೀರ್ಣತೆಗಳನ್ನು ನಿರ್ವಹಿಸಲು ಬೇಕಾದ ಜ್ಞಾನ, ಕೌಶಲ, ಮತ್ತು ಮೌಲ್ಯಗಳನ್ನು ಬೆಳೆಸಿಕೊಳ್ಳುವ ಪ್ರಜ್ಞಾಪೂರ್ವಕ ಕರ್ತೃತ್ವ ಶಕ್ತಿಗಳಾಗಿ ಯುವಜನರನ್ನು ಪರಿಗಣಿಸಲಾಗುತ್ತದೆ (ಲರ್ನರ್ ೨೦೦೮; ಲಾರ್ಸನ್ ಮತ್ತು ಟ್ರಾನ್ ೨೦೧೪). ಕಳೆದ ದಶಕದಲ್ಲಿ ವೈವಿಧ್ಯತೆ ಹಾಗೂ ಜನಾಂಗೀಯ ಗುಂಪುಗಳ ಅಧ್ಯಯನವೂ ಕೂಡ ಸಾಕಷ್ಟು ಗಮನವನ್ನು ಸೆಳೆದಿದೆ (ಲರ್ನರ್ ಮತ್ತು ಸ್ಟೀನ್‌ಬರ್ಗ್ ೨೦೦೪).

ಭಾರತದಲ್ಲಿ ಹದಿಹರೆಯವನ್ನು ಕುರಿತಾದ ವೈಜ್ಞಾನಿಕ ಅಧ್ಯಯನದ ಆಸಕ್ತಿಯು ಸರಿಸುಮಾರಾಗಿ ಇಲ್ಲಿ ಮನಶ್ಶಾಸ್ತ್ರವು ಸ್ವದೇಶೀಕರಣಗೊಳ್ಳುವ ಚಳುವಳಿಗೆ ಸಮಾನಂತರವಾಗಿ ಬೆಳೆಯಿತು ಎಂದು ಹೇಳಬಹುದಾಗಿದ್ದು, ಪಾಶ್ಚಾತ್ಯ ಮನಶ್ಶಾಸ್ತ್ರದ ಪ್ರಾಬಲ್ಯವನ್ನು ಗುರುತಿಸಿದ ಅದು, "ಸ್ವೀಕೃತ" ದೃಷ್ಟಿಕೋನಗಳನ್ನು ಪ್ರಶ್ನಿಸಿತಲ್ಲದೆ, ಸಾಂಸ್ಕೃತಿಕವಾಗಿ ಬೇರೂರಿದ ಮಾನವಾಭಿವೃದ್ಧಿಯ ಗ್ರಹಿಕೆಗಳನ್ನು ಕಂಡುಕೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನವನ್ನು

ಕೈಗೊಂಡಿತು (ಸಿನ್ಹಾ ೧೯೮೬). ವಾರಣಾಸಿಯ ನೇಯ್ಗೆ ಸಮುದಾಯದ ಮಕ್ಕಳ ಸಾಮಾಜೀಕರಣ (ಆನಂದಲಕ್ಷ್ಮಿ ಮತ್ತು ಬಜಾಜ್ ೧೯೮೧) ಮತ್ತು ಗುಜರಾತಿನ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡತನದ ಹಿನ್ನೆಲೆಯಲ್ಲಿ ಮಕ್ಕಳ ಸಾಮಾಜೀಕರಣದ (ಸರಸ್ವತಿ ಮತ್ತು ದತ್ತ ೧೯೮೮) ಸಂಶೋಧನೆಯಂತಹ ಮಾರ್ಗಪ್ರವರ್ತಕ ಸಂಶೋಧನೆಗಳು ಬಾಲ್ಯಾವಸ್ಥೆ ಮತ್ತು ಹದಿಹರೆಯವನ್ನು ಪರಿಸರ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ಅರ್ಥಮಾಡಿಕೊಳ್ಳುವ ವೇದಿಕೆಯೊಂದನ್ನು ರೂಪಿಸಿತು. ಈ ಅಧ್ಯಯನಗಳು, ಹದಿಹರೆಯದ ಬೆಳವಣಿಗೆಯನ್ನು ಪರಿಸರಕ್ಕೆ ಸಂಬಂಧಿಸಿ ಅರ್ಥ ಮಾಡಿಕೊಳ್ಳಲು ಮತ್ತು ಲಿಂಗ ಬೇಧಗಳನ್ನೂ ಒಳಗೊಂಡಂತೆ, ಸಾಮಾಜೀಕರಣದ ಗುರಿಗಳು ಹಾಗೂ ಆಚರಣೆಗಳಲ್ಲಿನ ಸಾಂಸ್ಕೃತಿಕ ವ್ಯತ್ಯಯಗಳನ್ನು ಎತ್ತಿತೋರಿಸುವಲ್ಲಿ ಮಹತ್ವದ ಕೊಡುಗೆಯನ್ನು ಪ್ರತಿನಿಧಿಸುತ್ತವೆ. ನಂತರ, ಹದಿಹರೆಯವನ್ನು ಕುರಿತ ಸಂಶೋಧನೆ ಹಾಗೂ ಬರಹಗಳು ಭಾರತದಲ್ಲಿನ ಹದಿಹರೆಯದ ಬಗೆಗಿನ ಮಿಥ್ಯೆಗೆ ಎದುರಾಗಿ(versus) ವಾಸ್ತವದ ಕುರಿತು ಗಮನಹರಿಸಿದವು (ಸರಸ್ವತಿ ೧೯೯೯). ಇವು ಸಂಸ್ಕೃತಿಯೊಳಗಿನ ಪರಿವರ್ತನೀಯತೆಗಳನ್ನು ಒಳಗೊಂಡಂತೆ, ಅದರಲ್ಲೂ ವಿಶೇಷವಾಗಿ ಸಾಮಾಜಿಕ ವರ್ಗ ಮತ್ತು ಲಿಂಗಕ್ಕೆ ಸಂಬಂಧಿಸಿದಂತೆ ಈ ಹಂತವನ್ನು ಹೇಗೆ ಅರ್ಥ ಮಾಡಿಕೊಳ್ಳಲಾಗಿದೆ ಮತ್ತು ಬದುಕಲಾಗುತ್ತಿದೆ ಎನ್ನುವುದರ ಕುರಿತು, ಸ್ಥಳೀಯ ವಿವರಣೆಗಳನ್ನು ಮುಂದಿಟ್ಟವು (ವರ್ಮ ಮತ್ತು ಸರಸ್ವತಿ ೨೦೦೨; ಲಾರ್ಸನ್ ಮತ್ತಿತರರು ೨೦೦೧). ಭಾರತದಲ್ಲಿ ಒಂದು ವಿಶಿಷ್ಟ ಹಂತವಾಗಿ ಹದಿಯರೆಯದ ಅಸ್ತಿತ್ವದ ಬಗ್ಗೆ ಸರಸ್ವತಿಯವರು (೧೯೯೯) ಸಂಬದ್ಧ ಪ್ರಶ್ನೆಗಳನ್ನು ಎತ್ತಿದ್ದಾರೆ. ಇದರಲ್ಲಿ ಅವರು ಸಾಮಾಜಿಕ ವರ್ಗ ಹಾಗೂ ಲಿಂಗ ವ್ಯತ್ಯಾಸಗಳನ್ನು ಗಮನಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾ ಈ ಹಂತದ ವಿಶಿಷ್ಟತೆಯು ಉನ್ನತ ಸಾಮಾಜಿಕ ವರ್ಗಗಳ ಸಂದರ್ಭಗಳಲ್ಲಿ ಹೆಚ್ಚಾಗಿ ಗೋಚರಿಸುತ್ತದೆ ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಆಧುನಿಕ ಜೀವನ ವಿಧಾನಗಳು, ಪರ್ಯಾಯ ಜೀವನಶೈಲಿಗಳ ನಿಟ್ಟಿನ ಅನಾವರಣ, ಔಪಚಾರಿಕ ಶಿಕ್ಷಣದಲ್ಲಿನ ವಿಸ್ತೃತ ವರ್ಷಗಳು, ಉದ್ಯೋಗ ಮತ್ತು ವೃತ್ತಿಯ ಆಯ್ಕೆ ಮತ್ತು ಪ್ರವೇಶಿಸುವಿಕೆಯಲ್ಲಿನ ವಿಳಂಬ, ಮತ್ತು ವಿವಾಹವಾಗುವ ವಯಸ್ಸಿನ ವಿಳಂಬವು ಹದಿಹರೆಯವನ್ನು ಒಂದು ಪ್ರತ್ಯೇಕ ವಿಕಾಸಶೀಲ ಅವಧಿಯಾಗಿ ಹೊರಹೊಮ್ಮುವಂತೆ ಮಾಡಿವೆ.

ಈ ಅಧ್ಯಯನಗಳ ಮೌಲ್ಯಯುತ ಕೊಡುಗೆಯ ಹೊರತಾಗಿಯೂ ಭಾರತದಂತಹ ಬೃಹತ್ ವೈವಿಧ್ಯಮಯ ಸಮಾಜದಲ್ಲಿ ಹದಿಹರೆಯವನ್ನು, ಅಷ್ಟೇ ಏಕೆ, ಮನುಷ್ಯನ ಬೆಳವಣಿಗೆಯ ಯಾವುದೇ ಹಂತ ಅಥವಾ ವಲಯವನ್ನು ಅರ್ಥ ಮಾಡಿಕೊಳ್ಳುವುದು ಒಂದು ಸವಾಲಿನ ಕೆಲಸವಾಗಿದೆ. ಇಂತಹ ಆಸಕ್ತಿಯುತವಾದ ಬೆಳವಣಿಗೆಯ ಅವಧಿಯ ಬಗ್ಗೆ ಈಗ ಸಾಕಷ್ಟು ತಿಳಿದಿದೆಯಾದರೂ, ಮತ್ತಷ್ಟು ವಿಷಯವನ್ನು ಕಂಡುಕೊಳ್ಳಬೇಕಿದೆ, ಇನ್ನಷ್ಟು ದೃಷ್ಟಿಕೋನಗಳನ್ನು ಹಂಚಿಕೊಳ್ಳಬೇಕಿದೆ.

ಭಾರತದಲ್ಲಿ ಅಥವಾ ಇತರ ಸಮಾಜಗಳಲ್ಲಿ ಹದಿಹರೆಯದ ಅಸ್ತಿತ್ವವನ್ನು ಒಂದು ವಿಶಿಷ್ಟ ಹಂತವಾಗಿ ನೋಡುವ ವಿಷಯವನ್ನು ಬದಿಗಿಟ್ಟರೂ, ವಾಸ್ತವದಲ್ಲಿ ಹೆಚ್ಚು ಕಡಿಮೆ ಎಲ್ಲ ಸಮಾಜಗಳೂ ಯುವಕರು ಮತ್ತು ವಯಸ್ಕರನ್ನು ಪ್ರತ್ಯೇಕಿಸುತ್ತವೆ. ಅದೇನೆ ಇದ್ದರೂ ಹದಿಹರೆಯದ ಅವಧಿಯ "ಸಾಂಸ್ಕೃತಿಕ ರಚನೆ"ಯು ಸಮಾಜಗಳಾದ್ಯಂತ ವಿಭಿನ್ನವಾಗಿರುತ್ತದೆ, ಉದಾಹರಣೆಗೆ, ಹದಿಹರೆಯದ "ವಿಷಯ"ವನ್ನು ರೂಪಿಸುವ ಬೆಳವಣಿಗೆಯ ಮೈಲಿಗಲ್ಲುಗಳು ಮತ್ತು ಸಾಮಾಜಿಕ ಪಾತ್ರಗಳು, ಪರಿಸರ ಮತ್ತು ಚಟುವಟಿಕೆಗಳು (ಕ್ರೊಕೆಟ್ ೧೯೯೭, ಪು. ೨೪). ಉದಾಹರಣೆಗೆ, ಪಾಶ್ಚಾತ್ಯ ಸಮಾಜಗಳಲ್ಲಿ ಹದಿಹರೆಯವನ್ನು ಪ್ರೌಢ ಜಗತ್ತಿನ ಸಾಂಸ್ಥಿಕ ಬೇರ್ಪಡಿಕೆಗಳನ್ನು ಒಳಗೊಂಡ ಪ್ರೌಢಾವಸ್ಥೆಯ ಒಂದು ಸುದೀರ್ಘ ಸಿದ್ಧತೆ ಎನ್ನುವಂತೆ ಭಾವಿಸಲಾಗುತ್ತದೆ. ಇದಕ್ಕೆ ವಿಶಿಷ್ಟವಾದ ಲಕ್ಷಣವಿದ್ದು, ಈ ಪರಿಕಲ್ಪನೆಯನ್ನು ಪ್ರಶ್ನಿಸಲಾಗುತ್ತಿದೆಯಾದರೂ, ಹದಿಹರೆಯ ಎನ್ನುವುದು ಏರಿಳಿತಗಳಿಂದ ತುಂಬಿದ ಒಂದು ಹಂತ ಎನ್ನುವುದು ಸಾಮಾನ್ಯ ಗ್ರಹಿಕೆಯಾಗಿದೆ. ಮುಂದಿನ ವಿಭಾಗದಲ್ಲಿ ಪಾಶ್ಚಾತ್ಯ ಸಮಾಜಗಳಲ್ಲಿರುವ ಹದಿಹರೆಯದ ಪರಿಕಲ್ಪನೆಯನ್ನು ಪ್ರಸ್ತುತಪಡಿಸಲಾಗುತ್ತದೆ. ಅದರ ಮುಂದುವರೆದ ಭಾಗವಾಗಿ

ಇಂತಹ ಬೆಳವಣಿಗೆಯ ಅವಧಿಯ ಅರ್ಥ ಮತ್ತು ವ್ಯಾಖ್ಯಾನಗಳಲ್ಲಿನ ವಿಭಿನ್ನ ಸಾಂಸ್ಕೃತಿಕ ಪರಿವರ್ತನೀಯತೆಯನ್ನು ಚರ್ಚಿಸಲಾಗುತ್ತದೆ.

**ಹದಿಹರೆಯದ ಬಗೆಗಿನ ಪಾಶ್ಚಾತ್ಯ ದೃಷ್ಟಿಕೋನ**

ಈ ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ಪ್ರಪಂಚದಾದ್ಯಂತದ ಸಮಾಜಗಳು ಸ್ವತಂತ್ರ ಹಾಗೂ ಪರಸ್ಪರಾವಲಂಬಿತವೆಂಬ ಎರಡು ಆದರ್ಶೀಕೃತ ಸಾಂಸ್ಕೃತಿಕ-ವಿಕಾಸಾತ್ಮಕ ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಸಮಾಜಗಳಾದ್ಯಂತ ಸ್ವಯಂ ಹಾಗೂ ಸಾಮಾಜೀಕರಣದ ಗುರಿಗಳ ಪರಿಕಲ್ಪನೆಗಳು, ಅನುಭವಗಳು ಮತ್ತು ಆಚರಣೆಗಳನ್ನು ಈ ಎರಡು ಮನೋಭಾವಗಳ ನೆಲೆಯಲ್ಲಿ ಪರಿಕಲ್ಪಿಸಲಾಗಿದೆ. ಈ ಎರಡು ಮಾರ್ಗಗಳು ವಿಭಿನ್ನ ಮೌಲ್ಯಗಳ ಸಮುಚ್ಚಯಗಳನ್ನು ಅನುಮೋದಿಸುತ್ತವೆ. "ಈ ಎರಡು ಮೌಲ್ಯ ವ್ಯವಸ್ಥೆಗಳು ನಿರ್ದಿಷ್ಟ ಹಾಗೂ ಐತಿಹಾಸಿಕವಾಗಿ ಪ್ರತ್ಯೇಕಗೊಳಿಸಲಾದ ಬಹುವಿಧದ ಸಾಂಸ್ಕೃತಿಕ ಸಂದರ್ಭಗಳ ಬಾಹುಳ್ಯದಲ್ಲಿ ದೃಷ್ಟಾಂತೀಕೃತಗೊಳ್ಳುವ ಆದರ್ಶಪ್ರಾಯ ಮಾದರಿಗಳಾಗಿವೆ ಅಷ್ಟೇ" (ಗ್ರೀನ್‌ಫೀಲ್ಡ್ ಮತ್ತು ಇತರರು.೨೦೦೩, ಪು.೪೬೮). ಸ್ವತಂತ್ರವಾದ ವಿಕಾಸಾತ್ಮಕ ಮಾರ್ಗದಲ್ಲಿ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಗೆ ಹೆಚ್ಚು ಮಹತ್ವವನ್ನು ಕೊಟ್ಟು ವೈಯಕ್ತಿಕ ಆಯ್ಕೆ ಮತ್ತು ವ್ಯಕ್ತಿಗತ ಹಕ್ಕುಗಳಿಗೆ ಒತ್ತು ನೀಡಲಾಗಿದೆ. ಆದರೆ ಪರಸ್ಪರಾವಲಂಬಿತ ಮಾರ್ಗದ ಲಕ್ಷಣಗಳನ್ನು ಹೊಂದಿರುವ ಸಮಾಜಗಳಲ್ಲಿ ವೈಯಕ್ತಿಕ ಆಯ್ಕೆಯ ಬದಲಿಗೆ, ಸಂಬದ್ಧತೆಗೆ ಆದ್ಯತೆ ನೀಡಿ, ಸಾಮಾಜಿಕ ಬಾಧ್ಯತೆಗಳು ಮತ್ತು ಜವಾಬ್ದಾರಿಗಳಿಗೆ ಹೆಚ್ಚು ಮಹತ್ವ ನೀಡಲಾಗಿದೆ (ಗ್ರೀನ್‌ಫೀಲ್ಡ್ ಮತ್ತು ಇತರರು. ೨೦೦೩).

ಬಹಳ ವರ್ಷಗಳವರೆಗೆ ಸ್ವತಂತ್ರ ವಿಕಾಸಾತ್ಮಕ ಮಾರ್ಗಗಳನ್ನು ಅನುಸರಿಸುತ್ತಿರುವ ಯುರೋ-ಅಮೆರಿಕದ ಸಮಾಜಗಳು ಹದಿಹರೆಯದಲ್ಲಿ ಪ್ರೌಢ ಜಗತ್ತಿನಿಂದ ಸಾಂಸ್ಥಿಕ ಪ್ರತ್ಯೇಕತೆಯನ್ನು ಸಹ ಒಳಗೊಂಡಂತೆ, ವ್ಯಕ್ತಿಯು ಪೋಷಕರಿಂದ ಪ್ರತ್ಯೇಕಗೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಬೇಕು ಎಂಬ ಅಭಿಪ್ರಾಯವನ್ನು ಸಮ್ಮತಿಸಿದ್ದಾರೆ. ಹದಿಹರೆಯಕ್ಕೆ ತನ್ನದೇ ಆದ ವಿಶಿಷ್ಟ ಲಕ್ಷಣವಿದ್ದು, ಇದು ಏರಿಳಿತಗಳಿಂದ ತುಂಬಿದೆಯೆಂಬುದು ಸಾಮಾನ್ಯ ಗ್ರಹಿಕೆ. ಸ್ವಾಯತ್ತತೆಯನ್ನು ಸಾಧಿಸುವುದು, ವ್ಯಕ್ತೀಕರಣ, ಮತ್ತು ಸ್ವಾಯತ್ತತೆ ಹಾಗೂ ಅವಲಂಬನೆಯ ನಡುವಿನ ತಿಕ್ಕಾಟದ ನಿರೀಕ್ಷಿತ ಸ್ವಾಭಾವಿಕ ಪರಿಣಾಮದೊಂದಿಗೆ ಪೋಷಕರಿಂದ ಬಿಡುಗಡೆಗೊಳ್ಳುವುದು ಪಾಶ್ಚಾತ್ಯ ಹದಿಹರೆಯದ ವ್ಯಕ್ತಿಯ ಪ್ರಾಥಮಿಕ ವಿಕಾಸಾತ್ಮಕ ಕಾರ್ಯವಾಗಿದೆ. ಜಿ. ಸ್ಟ್ಯಾನ್ಲೆ ಹಾಲ್ ಅವರ ಸುಪರಿಚಿತ "ಭಾವಕ್ಷೋಭೆ ಮತ್ತು ತೀವ್ರ ಸಂವೇದನೆ" ಅಥವಾ "ಕ್ಷೋಭೆ ಮತ್ತು ಒತ್ತಡ" ಎನ್ನುವ ಸರ್ವಸಮ್ಮತ ತತ್ತ್ವವು ಈ ಭಾವನೆಯಲ್ಲಿ ಭಾಗಶಃ ಬೇರೂರಿದೆ. ಇದರ ಜೊತೆಗೆ ಹದಿಹರೆಯದವರಲ್ಲಿ ಆಗಾಗ ಕಂಡುಬರುವ ಚಿತ್ತವೃತ್ತಿಯ ಏರಿಳಿತಗಳು ಮತ್ತು ಮನಸೋ ಇಚ್ಛೆ ವರ್ತಿಸುವ ಮತ್ತು ಸಮಾಜ-ವಿರೋಧಿ ವರ್ತನೆಯ ಪ್ರವೃತ್ತಿಯಲ್ಲಿ ಕೂಡಾ ಅದನ್ನು ಕಾಣಬಹುದು. ಹದಿಹರೆಯದವರ ಬಗೆಗಿನ ಈ ಚಿತ್ರಣವು ತಿಳಿಸುವಂತೆ ಅವರು ಪ್ರೌಢಾವಸ್ಥೆಯ ಹಾದಿಯಲ್ಲಿ ಸಾರ್ವತ್ರಿಕವಾಗಿ ಹಾಗೂ ಅನಿವಾರ್ಯವಾಗಿ ಕೆಲವು ವಿಧದ ಭಾವನಾತ್ಮಕ ಮತ್ತು ನಡವಳಿಕೆಯ ಏರಿಳಿತವನ್ನು ಅನುಭವಿಸುತ್ತಾರೆ (ಅರ್ನೆಟ್ ೨೦೦೬).

ಹದಿಹರೆಯವು ಒಂದು ಕ್ಲಿಷ್ಟಕರವಾದ ಪರಿಸ್ಥಿತಿ ಎನ್ನುವ ಚಿಂತನೆಯ ವ್ಯಾಖ್ಯಾನಗಳನ್ನು ಅರ್ನೆಟ್ (೧೯೯೯) ಚರ್ಚಿಸಿದ್ದಾನೆ. ಕ್ಲಿಷ್ಟತೆಯನ್ನು ಮೂರು ಅಂಶಗಳೊಂದಿಗೆ ವ್ಯಾಖ್ಯಾನಿಸಲಾಗಿದೆ: (೧) ಪ್ರೌಢರ ಅಧಿಕಾರಕ್ಕೆ ಪ್ರತಿರೋಧವಾಗಿ ಪೋಷಕರೊಂದಿಗೆ ಹುಟ್ಟಿಕೊಳ್ಳುವ ಸಂಘರ್ಷ: ಹದಿಹರೆಯದದಲ್ಲಿ ಪೋಷಕ ಮತ್ತು ಹದಿಹರೆಯದವರ ನಡುವಿನ ಸಂಘರ್ಷವು ಒಂದು ಸಾಮಾನ್ಯ ಘಟನೆ ಎಂದು ಒಪ್ಪಿಕೊಳ್ಳಲಾಗಿದೆ ಮತ್ತು ಇದನ್ನು ವ್ಯಕ್ತೀಕರಣ ಹಾಗೂ ಸ್ವಾಯತ್ತತೆಯ ಬೆಳವಣಿಗೆಯನ್ನು ಸುಗಮಗೊಳಿಸುತ್ತದೆಂಬಂತೆ ನೋಡಲಾಗುತ್ತದೆ. ಆದರೆ ತೀವ್ರವಾದ ಸಂಘರ್ಷವು ಹದಿಹರೆಯದ ಬೆಳವಣಿಗೆಯನ್ನು ಅಡ್ಡಿಪಡಿಸುವ ಸಾಧ್ಯತೆ ಇದೆ. (೨) ಚಿತ್ತವೃತ್ತಿಯ ಏರಿಳಿತಗಳು: ಇತರೆ ಅವಧಿಗಳಿಗಿಂತಲೂ ಚಿತ್ತವೃತ್ತಿಯ ಏರಿಳಿತಗಳು ಹದಿಹರೆಯದ ಕಾಲದಲ್ಲಿ ಹೆಚ್ಚಾಗಿರುವುದನ್ನು

ಅವಲೋಕಿಸಲಾಗಿದೆ. (೩) ದುಡುಕಿನ ಹಾಗೂ ನಿಯಮಗಳನ್ನು ಉಲ್ಲಂಘಿಸುವ ವರ್ತನೆಗಳನ್ನೂ ಒಳಗೊಂಡಂತೆ ಬಹುಸಂಖ್ಯಾತ ಹದಿಹರೆಯದವರಲ್ಲಿ ಅಪಾಯಕಾರಿ ವರ್ತನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ಕಷ್ಟಗಳು ಹದಿಹರೆಯದವರನ್ನು ಮಾತ್ರವಲ್ಲ ಅವರ ಸುತ್ತಮುತ್ತಲಿನವರ ಮೇಲೂ ಪರಿಣಾಮ ಬೀರುತ್ತವೆ, ಅದರಲ್ಲೂ ವಿಶೇಷವಾಗಿ ಪೋಷಕರ ಮೇಲೆ. ಹಾಗಾಗಿ ಈ ಹಂತವು ಕ್ಲಿಷ್ಟತೆಯಿಂದ ಕೂಡಿರುತ್ತದೆ ಎನ್ನುವ ಒಟ್ಟಾರೆ ಗ್ರಹಿಕೆಯು ವಿಶ್ವಾಸಾರ್ಹವೆಂದು ಕಂಡುಬರುತ್ತದೆ. ಅದೇ ಸಮಯದಲ್ಲಿ ಈ ಅವಧಿಯಲ್ಲಿ ಅಸಾಧಾರಣ ಬೆಳವಣಿಗೆಯ ಸಂಭಾವ್ಯತೆಯೂ ಇರುತ್ತದೆ ಎನ್ನುವ ಧನಾತ್ಮಕ ಲಕ್ಷಣವನ್ನು ಮತ್ತು ಸಂಸ್ಕೃತಿಯೊಳಗಿನ ವ್ಯಕ್ತಿಗತ ವ್ಯತ್ಯಾಸಗಳು ಮತ್ತು ವಿವಿಧ ಸಂಸ್ಕೃತಿಗಳಾದ್ಯಂತದ ಪರಿವರ್ತನೀಯತೆಯನ್ನು ನಾವು ಗುರುತಿಸಬೇಕು.

ವಾಲ್ಸಿನರ್ (೨೦೦೦) ಪ್ರಕಾರ ಹದಿಹರೆಯದ ಈ ಪರಿಕಲ್ಪನೆಯು ಪ್ರಮುಖವಾಗಿ ಶಾಲೆಯ ಶಿಸ್ತು ಮತ್ತು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಯುವ ಕೆಲಸಗಾರರ ವಿಧೇಯತೆಯನ್ನು ಕೇಂದ್ರೀಕರಿಸಿ ಯುರೋಪ್ ಹಾಗೂ ಉತ್ತರ ಅಮೆರಿಕ ಸಮಾಜಗಳನ್ನು ಪ್ರತಿನಿಧಿಸಲು ಮುಂದಿಟ್ಟ ಹತ್ತೊಂಬತ್ತನೇ ಶತಮಾನದ ಸಾಂಸ್ಕೃತಿಕ-ಐತಿಹಾಸಿಕ ನಿರ್ಮಿತಿಯಾಗಿದೆ ಎಂಬುದನ್ನು ಗಮನಿಸುವುದು ಸಮಂಜಸವಾದುದು. ಹುಡುಗರು ಶಾಲಾ ಸ್ಫೂರ್ತಿ ಮತ್ತು ವಿಧೇಯತೆಯನ್ನು ಅಳವಡಿಸಿಕೊಳ್ಳುವಂತೆ ಮಾಡುವ ಮೂಲಕ ಅವರಲ್ಲಿ ವರ್ತನಾನುಸರಣೆಯು ಮೂಡುವುದಕ್ಕೆ ಸಂಬಂಧಿಸಿದಂತೆ ಈ ಹಂತದಲ್ಲಿ ಸಾಮಾಜಿಕ ನಿಯಂತ್ರಣದ ಮೇಲೆ ವಿಶೇಷ ಗಮನವನ್ನು ಹರಿಸಲಾಯಿತು. ಅಷ್ಟೇ ಅಲ್ಲದೆ, ಹದಿಹರೆಯವನ್ನು ಸಮಸ್ಯಾತ್ಮಕ ಹಾಗೂ ಅವಾಸ್ತವಿಕವೆಂದು ಮನಶ್ಶಾಸ್ತ್ರದ ಪಠ್ಯಪುಸ್ತಕಗಳಲ್ಲಿ ಬಿಂಬಿಸುತ್ತಿರುವುದು ವಯಸ್ಕರ "ಸಮಾಜೋ ಸೈದ್ಧಾಂತಿಕ" ದೃಷ್ಟಿಕೋನವಾಗಿದ್ದು, ಅವರು ಹದಿಹರೆಯದವರನ್ನು 'ಕ್ಲಿಷ್ಟಕರ'ವೆಂದು ಬಿಂಬಿಸುವ ಕಾರಣ, ಹದಿಹರೆಯದವರು ತಮ್ಮ ಬದುಕನ್ನು ಹೇಗೆ ಎದುರಿಸಬೇಕು ಎನ್ನುವುದಕ್ಕೆ ಬದಲಾಗಿ ತಾವು (ಶಿಕ್ಷಕರು ಅಥವಾ ಪೋಷಕರು) ಹದಿಹರೆಯದವರ ಜೊತೆ ಹೇಗೆ ವ್ಯವಹರಿಸಬಹುದು ಎನ್ನುವುದರತ್ತ ಗಮನಹರಿಸುತ್ತದೆ. ಹೀಗೆ ಹದಿಯರೆಯದ ಸ್ಥಿತಿಯನ್ನು ಮೂಲಭೂತವಾಗಿ ಒಂದು ಸಂಕಷ್ಟದ ಅವಧಿ ಎನ್ನುವಂತೆ ವ್ಯಾಖ್ಯಾನಿಸಲಾಗಿದೆ. ಜೈವಿಕ ಪಕ್ವತೆಯ ತೀವ್ರ ಗತಿಯ ಬದಲಾವಣೆಯು ಕ್ಷೋಭೆಯನ್ನು ಸೃಜಿಸುತ್ತದಾದರೂ ಅದು ಸಾಮಾಜಿಕ ಕ್ಷೇತ್ರದಲ್ಲಿ ಪ್ರತಿಬಿಂಬಿತವಾಗದಿರಬಹುದು. ಸ್ವತಃ ಹದಿಹರೆಯದವರಿಗಿಂತಲೂ ಪೋಷಕರು ಹಾಗೂ ವಯಸ್ಕರೇ ಹದಿಹರೆಯದ ಬಿಕ್ಕಟ್ಟನ್ನು ಎತ್ತಿ ತೋರಿಸುತ್ತಾರೆ. ಈ ಅವಧಿಯು ಕೇವಲ ಹದಿಹರೆಯದವರಿಗೆ ಮಾತ್ರ ವಿಕಾಸಾತ್ಮಕ ಸಂಕ್ರಮಣದ ಕಾಲವಲ್ಲ, ತಮ್ಮ ಮಗುವು ವಯಸ್ಕನಾ/ಳಾಗಿ ಪರಿವರ್ತಿತವಾಗುವ ಘಟನೆ ಅಥವಾ ಪ್ರಕ್ರಿಯೆಯಲ್ಲಿ ತಮ್ಮ ಮಗುವಿನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುವ ಅಪಾಯವಿರುವ ಮತ್ತು ಅದನ್ನು ನಿಭಾಯಿಸುವ ಸವಾಲನ್ನು ಎದುರಿಸುವ ಪೋಷಕರಿಗೂ ಈ ಅವಧಿಯು ಸಂಕ್ರಮಣ ಕಾಲವಾಗಿದೆ. ಒಬ್ಬ ವಯಸ್ಕನ ಸ್ವ-ಅಸ್ಮಿತೆಗೆ(self-identity) "ಯಶಸ್ವಿ ಪೋಷಕತನ"ವು ಒಂದು ಮುಖ್ಯವಾದ ಸಾಂಸ್ಕೃತಿಕ (ಸ್ವ-ಕೇಂದ್ರಿತ) ಕಾರ್ಯಭಾರವಾಗಿರುವ ಸಮಾಜಗಳಲ್ಲಿ ಪೋಷಕರ ನಿಯಂತ್ರಣದ ಸಂಗತಿಯು ಮುನ್ನೆಲೆಗೆ ಬರುತ್ತದೆ. ಪೋಷಕರ ನಿಯಂತ್ರಣವು ದಿನನಿತ್ಯದ ಬದುಕಿನ ಸಹಜ ಭಾಗವಾಗಿರುವ ಸಮಾಜಗಳಲ್ಲಿ ಏನೇ ಆಗಲಿ, ಹದಿಹರೆಯದ ನಿಟ್ಟಿನ ಪರಿವರ್ತನೆಯನ್ನು ಕುರಿತ ವಿಶೇಷ ಕಾಳಜಿಯು ಅಲ್ಪಮಟ್ಟದ್ದಾಗಿರಬಹುದು. ಪಾಶ್ಚಾತ್ಯ ಮನಶ್ಶಾಸ್ತ್ರವು "ಚಿಂತಾಕ್ರಾಂತ ಪೋಷಕ"ನ (ಹದಿಹರೆಯದವರು ಏಕೆ ಹೀಗೆ ವರ್ತಿಸುತ್ತಿದ್ದಾರೆ ಎಂಬ ನಿಟ್ಟಿನ) ವೇಷವನ್ನು ಧರಿಸಿದೆ ಹಾಗೂ ಹದಿಹರೆಯವು "ಸಮಸ್ಯಾತ್ಮಕವಾದುದು," "ಅಪ್ರಬುದ್ಧ" ಮತ್ತು "ಅವಾಸ್ತವಿಕ" ಎನ್ನುವ ಕಳಂಕಯುತ ದೃಷ್ಟಿಕೋನವನ್ನು ಹಂಚಿದೆಯೆಂಬ ಅವಲೋಕನವು ಸಹ ಸಂಗತವಾದುದು (ಪು. ೨೭೨). ಈ ದೃಷ್ಟಿಕೋನವು ಹದಿಹರೆಯದವರನ್ನು ಹೇಗೆ ನಿಭಾಯಿಸಬೇಕು ಎನ್ನುವುದರ ಕುರಿತಾದ ನಿಲುವನ್ನು ಬೆಂಬಲಿಸಿ, ಸದೃಢಗೊಳಿಸಿದೆ.

ಹದಿಹರೆಯದವರ ಅಭಿವ್ಯಕ್ತಿ ಮತ್ತು ಕ್ಷೋಭೆ ಹಾಗೂ ಒತ್ತಡದ ಅನುಭವದಲ್ಲಿ ಸಂಸ್ಕೃತಿಯ ಪ್ರಭಾವವನ್ನು ಜಿ. ಸ್ಟ್ಯಾನ್ಲಿ ಹಾಲ್ ಪರಿಗಣಿಸಿದ್ದು, ಈ ಏರಿಳಿತಗಳು ಹೆಚ್ಚು ರೂಢಿವಾದಿ ಸಾಂಪ್ರದಾಯಿಕ ಸಮಾಜಗಳಿಗಿಂತಲೂ ಹೆಚ್ಚಾಗಿ

ಅಮೆರಿಕದಲ್ಲಿ ಕಂಡುಬರುವ ಸಾಧ್ಯತೆ ಹೆಚ್ಚು ಎಂದು ಪ್ರತಿಪಾದಿಸಿದ್ದಾನೆ ಎನ್ನುವುದು ಬಹಳಷ್ಟು ಜನರಿಗೆ ತಿಳಿದಿಲ್ಲ (ಅರ್ನೆಟ್ ೧೯೯೯). ಕ್ಷೋಭೆ ಹಾಗು ಒತ್ತಡಗಳ ಪ್ರತಿಪಾದನೆಯ ಸಾರ್ವತ್ರಿಕತೆ ಮತ್ತು ಪೂರ್ವಸೂಚನೀಯತೆಗಳು ಹೆಚ್ಚು ಪ್ರಶ್ನಾರ್ಹವಾಗುತ್ತಿದ್ದರೂ ಸಹ ಹದಿಹರೆಯದ ಅಧ್ಯಯನದಲ್ಲಿ ಅದರ ಪ್ರಭಾವವು ಇಂದಿಗೂ, ಅದರಲ್ಲೂ ವಿಶೇಷವಾಗಿ ಪಾಶ್ಚಾತ್ಯ ಜಗತ್ತಿನಲ್ಲಿ ಕಾಣಿಸಿಕೊಳ್ಳುತ್ತಿದೆ. ಇದು ಪ್ರಾಯಶಃ ವ್ಯಕ್ತೀಕರಣ ಮತ್ತು ಪ್ರತ್ಯೇಕತೆಯ ವಿಕಾಸಾತ್ಮಕ ಕಾರ್ಯವು ಸ್ವತಂತ್ರ "ಸ್ವ"(self) ಮತ್ತು ವಿಶಿಷ್ಟ ಅಸ್ಮಿತೆಯನ್ನು ನೆಲೆಗೊಳಿಸುವ ಆದರ್ಶದ ಅಗತ್ಯದಲ್ಲಿ ಅಂತರ್ನಿಹಿತಗೊಂಡಿರುವ ಕಾರಣದಿಂದಾಗಿರಬಹುದು. ಸ್ವಾಯತ್ತತೆ ಮತ್ತು ಅಸ್ಮಿತೆಯನ್ನು ಸ್ಥಾಪಿಸಲು ಹದಿಹರೆಯದ ಹಂತದ ಮಹತ್ವವನ್ನು ಪಶ್ಚಿಮದಲ್ಲಿ ಚೆನ್ನಾಗಿ ಗುರುತಿಸಲಾಗಿದೆ ಮತ್ತು ಹದಿಹರೆಯ ಎನ್ನುವುದು ಪೋಷಕರೊಂದಿಗಿನ ಸಂಬಂಧವನ್ನು ಪುನರ್‌ವ್ಯಾಖ್ಯಾನಿಸುವ ಮತ್ತು ಪುನರ್‌ಪರಿಶೀಲಿಸುವ ಅವಧಿಯಾಗಿದ್ದು, ಈ ಅವಧಿಯಲ್ಲಿ ಸಂಘರ್ಷ ಅನಿವಾರ್ಯ ಎಂದು ಪರಿಗಣಿಸಲಾಗಿದೆ. ಒಂದು ಆದರ್ಶಯುತವಾದ ಪೋಷಕ-ಹದಿಹರೆಯದವರ ನಡುವಿನ ಸಂಬಂಧದವು ಸ್ವಲ್ಪಮಟ್ಟಿಗೆ ಶ್ರೇಣೀಕೃತವಾಗಿದ್ದು, ಪೋಷಕರ ಅಧಿಕಾರಕ್ಕೆ ಅಷ್ಟು ಮಹತ್ವವಿರುವುದಿಲ್ಲ. ಸಮವಯಸ್ಕರ ಪ್ರಭಾವವು ಈ ಅವಧಿಯಲ್ಲಿ ಅತ್ಯಂತ ಪ್ರಬಲ ಎಂದು ಪರಿಗಣಿಸಲಾಗಿದೆ. ಅಭಿಲಾಷಿತ ವಿಕಾಸಾತ್ಮಕ ಕಾರ್ಯವೆನಿಸಿದ ಸ್ವಾಯತ್ತತೆಯನ್ನು ನಿರಂತರ ಸಮಾಲೋಚನೆಗೆ ಒಳಪಡಿಸಬೇಕಿದ್ದು, ಅದೊಂದು ವಿವಾದಾಸ್ಪದ ಸಂಗತಿಯಾಗಿರುತ್ತದೆ (ಅರ್ನೆಟ್ ೨೦೦೨). ಹಾಗಾಗಿ, ಪ್ರಧಾನ ಪಾಶ್ಚಾತ್ಯ ದೃಷ್ಟಿಕೋನವು ಹದಿಹರೆಯದವರನ್ನು ಪೋಷಕರಿಂದ ಸ್ವಾಯತ್ತತೆ ಹಾಗೂ ಸ್ವಾತಂತ್ರಕ್ಕಾಗಿ ಹಂಬಲಿಸುವವರು ಮತ್ತು ತಮ್ಮ ಸಮವಯಸ್ಕರ ಜೊತೆ ಹೆಚ್ಚಿನ ಸಂಬಂಧವನ್ನು ಬೆಳೆಸಿಕೊಳ್ಳಲು ಆಶಿಸುವವರೆಂಬುದಾಗಿ ಬಿಂಬಿಸುತ್ತದೆ (ಆಲ್ಬರ್ಟ್ ಮತ್ತು ಇತರರು ೨೦೦೪).

ಪಶ್ಚಿಮೇತರ ಸಮಾಜಗಳಲ್ಲಿನ ಜನರಿಗೆ ಈ ಚಿತ್ರಣವು ಅವರ ಬದುಕಿನ ವಾಸ್ತವಕ್ಕೆ ಅತ್ಯಂತ ಅಸಂಬದ್ಧವಾಗಿ ಕಾಣಿಸುತ್ತದೆ. ಮುಂದಿನ ವಿಭಾಗವು ವಿಭಿನ್ನ-ಸಾಂಸ್ಕೃತಿಕ ಸಂದರ್ಭದಲ್ಲಿನ ಹದಿಹರೆಯವನ್ನು ಕುರಿತು ಪಕ್ಷಿನೋಟವನ್ನು ನೀಡುತ್ತದೆ.

**ಹದಿಹರೆಯದಲ್ಲಿ ವಿಭಿನ್ನ-ಸಾಂಸ್ಕೃತಿಕ ಪರಿವರ್ತನೀಯತೆಗಳು**

ಹದಿಹರೆಯವು ಸಾಂಸ್ಕೃತಿಕವಾಗಿ ಸಾರ್ವತ್ರಿಕವಾಗಿದ್ದು, ಅದರಲ್ಲಿ ಪ್ರೌಢಾವಸ್ಥೆಯ ಆರಂಭವು ಬಾಲ್ಯದಿಂದ ಪ್ರೌಢತೆಗೆ ಬದಲಾಗುವ ಜೈವಿಕ ಚಿಹ್ನೆಯೆನಿಸಿದೆ. ಆದರೆ ಸಾಮಾಜಿಕ ಹರೆಯವು ಸಾಂಸ್ಕೃತಿಕ ನಂಬಿಕೆಗಳು ಮತ್ತು ನಿರೀಕ್ಷೆಗಳ ಫಲಿತವಾಗಿದ್ದು, ಆ ಮೂಲಕ ಸಂಸ್ಕೃತಿಗಳಾದ್ಯಂತದ ಈ ಹಂತದ ಅರ್ಥ ಮತ್ತು ವ್ಯಾಖ್ಯಾನಗಳಲ್ಲಿನ ಪರಿವರ್ತನೀಯತೆಗಳನ್ನು ಪರಿಚಯಿಸುತ್ತದೆ. "ಈ ಮಿಶ್ರಣದಲ್ಲಿ ಸಂಸ್ಕೃತಿ ಎನ್ನುವುದು ಕೇವಲ ಮತ್ತೊಂದು ವ್ಯತ್ಯಯವಲ್ಲ: ಹದಿಹರೆಯದವರಿಗೆ ಸಂಸ್ಕೃತಿಯನ್ನು ತಲುಪಿಸುವ ಔಪಚಾರಿಕ ಹಾಗೂ ಅನೌಪಚಾರಿಕ ಸಾಮಾಜೀಕರಣದ ಆಚರಣೆಗಳು ಅವರು ಏನಾಗಿದ್ದಾರೆಯೋ ಅದಾಗಲು ಅಗತ್ಯವಾದ ಅಂಶಗಳಾಗಿರುತ್ತವೆ" (ಶ್ಲೀಗಲ್ ಮತ್ತು ಬ್ಯಾರಿ ೧೯೯೧. ಪು. ೨೮೭). ಮಾನವ ಬೆಳವಣಿಗೆಯ ಸಾಂಸ್ಕೃತಿಕ ಕ್ಲಿಷ್ಟತೆಗಳ ಸುಸ್ಪಷ್ಟ ಪರಿಗಣನೆ ಮತ್ತು ವರ್ಲ್ಡ್ ಆಫ್ ಯೂಥ್ ಎನ್ನುವ ಇತ್ತೀಚಿನ ವಿಭಿನ್ನ-ಸಾಂಸ್ಕೃತಿಕ ಯೋಜನೆಯು (ಬ್ರೌನ್ ಮತ್ತು ಇತರರು., ೨೦೦೨) ಹದಿಹರೆಯವನ್ನು ಮಾನವ ಬೆಳವಣಿಗೆಯ ಸಾಂಸ್ಕೃತಿಕವಾಗಿ ರೂಪುಗೊಂಡ ಹಂತವಾಗಿ ಅಧ್ಯಯನ ಮಾಡುವ ಮತ್ತು ಗ್ರಹಿಸುವ ಅಗತ್ಯದ ಬಗ್ಗೆ ಮತ್ತೆ ಗಮನಹರಿಸುವಂತೆ ಮಾಡಿದವು.

ಐತಿಹಾಸಿಕವಾಗಿ, ಸಂಸ್ಕೃತಿಯನ್ನು ತನ್ನ ಕೇಂದ್ರವಾಗಿರಿಸಿಕೊಂಡಿರುವ ಕ್ಷೇತ್ರವಾದ ಮಾನವಶಾಸ್ತ್ರವು ಸಾಂಸ್ಕೃತಿಕ ಪ್ರಭಾವಗಳಿಗೆ ಒತ್ತು ನೀಡಿ, ಹದಿಹರೆಯದ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ. ಸಮೋವಾದಲ್ಲಿನ ಮಾರ್ಗರೆಟ್ ಮೀಡ್ ಅವರ ಯೋಜನೆಯು (ಮೀಡ್ ೧೯೨೮) ಇದರ ಮುಂಚೂಣಿಯಲ್ಲಿದ್ದರೆ

೧೯೭೦ರ ಮಧ್ಯ ಭಾಗದಿಂದ ಅಂತಿಮ ಭಾಗದವರೆಗಿನ ಮೌಲಿಕ ಕಾರ್ಯಗಳೆನಿಸಿದ ಹಾರ್ವರ್ಡ್ ಹದಿಹರೆಯದ ಯೋಜನೆ ಮತ್ತು ಹದಿಹರೆಯದ ಸಾಮಾಜೀಕರಣ ಯೋಜನೆಗಳು (ಶ್ಲೀಗಲ್ ಮತ್ತು ಹ್ಯೂಲೆಟ್ ೨೦೧೧) ಅದರ ನಂತರದವು. ಅಂತಹ ಯೋಜನೆಗಳು ಹದಿಹರೆಯದ ಮೇಲಿನ ಉದ್ದೇಶಪೂರ್ವಕ ಮತ್ತು ಅನೌಪಚಾರಿಕವಾದ, ಶಾಲೆ, ಕುಟುಂಬ, ಧಾರ್ಮಿಕ ಸಂಸ್ಥೆಗಳು, ಅಷ್ಟೇ ಅಲ್ಲದೆ ನೆರೆಹೊರೆಯವರ, ಸಮವಯಸ್ಕರ, ಮತ್ತು ಮಾಧ್ಯಮದ ಮೂಲಕ ಸಂವಹಿಸುವ ಸಾಂಸ್ಕೃತಿಕ ಪ್ರಭಾವಗಳ ಬಗ್ಗೆ ಬೆಳಕು ಚೆಲ್ಲಿವೆ. ಹದಿಹರೆಯದ ಸಾಮಾಜೀಕರಣ ಯೋಜನೆಯು ಹೋಲಿಸಲ್ಪಟ್ಟ ೧೮೬ ಪಶ್ಚಿಮೇತರ ಸಮಾಜಗಳಲ್ಲಿ ಸಾಮಾಜಿಕವಾಗಿ ಪ್ರತ್ಯೇಕಿಸಲ್ಪಟ್ಟ ಅವಧಿಯ ನಿಟ್ಟಿನಲ್ಲಿ ಈ ಹಂತದ ಸಾರ್ವತ್ರಿಕತೆಯನ್ನು ಪ್ರಕಟಗೊಳಿಸಿತು. ಹದಿಹರೆಯದವರ ಸ್ವ-ಅರಿವು, ಪೋಷಕರ ಹಾಗೂ ಸಮವಯಸ್ಕರ ಜೊತೆಗಿನ ಸಂಬಂಬಂಧಗಳು, ಮತ್ತು ವಿಭಿನ್ನ ಸಂಸ್ಕೃತಿಗಳಲ್ಲಿ ಹದಿಹರೆಯದವರನ್ನು ಕಾಮ, ವಿವಾಹ ಹಾಗೂ ವಯಸ್ಕರು ನಿರ್ವಹಿಸುವ ಕೆಲಸಗಳಿಗೆ ಹೇಗೆ ಸನ್ನದ್ಧಗೊಳಿಸಲಾಗುತ್ತದೆ ಎಂಬ ಅಂಶಗಳನ್ನು ಇದು ಗಣನೆಗೆ ತೆಗೆದುಕೊಂಡಿದೆ. ಲಿಂಗಭೇದದ ಮೇಲೆ ಬೆಳಕು ಚೆಲ್ಲಲಾಗಿದ್ದು, ಅದರಲ್ಲಿ ಸಮಾಜಗಳಾದ್ಯಂತದ ಗಂಡುಮಕ್ಕಳ ಹದಿಹರೆಯವು ಸಾಮಾನ್ಯವಾಗಿ ಹುಡುಗಿಯರಿಗಿಂತ ಭಿನ್ನವಾಗಿ ಮತ್ತು ದೀರ್ಘವಾಗಿರುತ್ತದೆ (ಶ್ಲೆಗಲ್ ಮತ್ತು ಬ್ಯಾರಿ ೧೯೯೧). ಸಾಧಾರಣತಃ, ಹದಿಹರೆಯದ ಬಗೆಗಿನ ಜನಾಂಗಶಾಸ್ತ್ರೀಯ ವಿವರಣೆಗಳು ಸಮಾಜಗಳಾದ್ಯಂತ ಹದಿಹರೆಯವು ಕೆಲವು ಸಾಮಾನ್ಯ ವಿಷಯಗಳನ್ನು ಹೊಂದಿದೆ ಎನ್ನುವುದನ್ನು ತೋರಿಸಿಕೊಟ್ಟಿದೆ, ಉದಾಹರಣೆಗೆ, ಇನ್ನೂ ಪರಾವಲಂಬಿಗಳಾಗಿದ್ದಾಗ್ಯೂ ವಯಸ್ಕರಾಗುವ ಹಂಬಲ ಹೊಂದಿರುವುದು; ಸುಸ್ಪಷ್ಟ ಲೈಂಗಿಕ ಸಂವೇದನಶೀಲತೆ; ಮತ್ತು ಸಮವಯಸ್ಕರೊಂದಿಗೆ ಹೆಚ್ಚಿನ ಒಳಗೊಳ್ಳುವಿಕೆ. ಹಾಗಿದ್ದೂ ಕೂಡ ಈ ವಿಷಯಗಳ ವ್ಯಾಖ್ಯಾನ ಹಾಗೂ ಅನುಭವಗಳಲ್ಲಿ ಸಾಂಸ್ಕೃತಿಕ ಭಿನ್ನತೆಗಳು ಘಟಿಸುತ್ತವೆ. ತನ್ನ ರಚನೆ ಹಾಗೂ ಅಡಕಾಂಶಗಳಲ್ಲಿ ಸಂಸ್ಕೃತಿ-ನಿಷ್ಠ ಭಿನ್ನತೆಗಳಿಂದ ಇದು ಚಿನ್ಹಿತಗೊಂಡಿದೆ(marked). ಸಾಂಸ್ಕೃತಿಕ ಸಂರಚನೆಯು ಬೆಳವಣಿಗೆಯ ಮೈಲಿಗಲ್ಲುಗಳಾಗಿ, ಈ ಅವಧಿಯನ್ನು ವಿಶಿಷ್ಟವಾಗಿಸುವ ಆಚರಣೆಗಳಾಗಿ ಮತ್ತು ಸಾಮಾಜಿಕ ಪಾತ್ರಗಳು ಮತ್ತು ಚಟುವಟಿಕೆಗಳಾಗಿ ಹದಿಹರೆಯವನ್ನು ರೂಪಿಸುತ್ತದೆ. ಹೆಚ್ಚು ಮಕ್ಕಳಿಗಾಗಿ ಹಂಬಲಿಸುವ ಮತ್ತು ಹಾಗಾಗಿ ಫಲವತ್ತತೆಯನ್ನು ಹೆಚ್ಚು ಮೌಲ್ಯಯುತವಾಗಿ ಪರಿಗಣಿಸುವ ಕೃಷಿಕ ಸಮಾಜಗಳಲ್ಲಿ ಋತುಮತಿಯಾಗುವುದು ಬೆಳವಣಿಗೆಯ ಮಹತ್ವದ ಚಿನ್ಹಕ(marker)ವಾಗಿದೆ. ಆದರೆ, ಕೈಗಾರಿಕಾ ಸಮಾಜವೊಂದರಲ್ಲಿ ಯೌವನಕ್ಕಿಂತ ಹೆಚ್ಚಾಗಿ ಸಾಮಾಜಿಕ ಹಾಗೂ ತಾಂತ್ರಿಕ ಕ್ಷಮತೆಯನ್ನು ಬೆಳೆಸುವುದಕ್ಕೆ ಅಗತ್ಯವಾಗಿರುವ ಶಾಲಾ ಕಲಿಕೆಯನ್ನು ಮುಗಿಸುವುದಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗುತ್ತದೆ. ವಿವಾಹವು ಹದಿಹರೆಯದ ಅಂತ್ಯ ಮತ್ತು ವಯಸ್ಕತೆಯ ಪ್ರಾರಂಭವನ್ನು ಸೂಚಿಸುವ ಕಾರಣ, ಬಹಳಷ್ಟು ಸಮಾಜಗಳು ವಿವಾಹವನ್ನು ವಿಕಾಸಾತ್ಮಕ ವೆಂದು ಪರಿಗಣಿಸುತ್ತವೆ. ಬೆಳವಣಿಗೆಯ ಒಂದು ಹಂತವಾಗಿ ಹದಿಹರೆಯದ ವಿಶಿಷ್ಟತೆಯು ಸಹ ಸಂಸ್ಕೃತಿಗಳಾದ್ಯಂತ ಭಿನ್ನವಾಗಿರುತ್ತದೆ (ಕ್ರೊಕೆಟ್ ೧೯೯೭).

ಹದಿಹರೆಯವನ್ನು ಒಂದು ಸಾಂಸ್ಕೃತಿಕ ರಚನೆಯಾಗಿ ವ್ಯಾಖ್ಯಾನಿಸಲು ಹಾಗೂ ವಿವರಿಸಲು ಪ್ರಾರಂಭದಲ್ಲಿ ಮಾಡಬಹುದಾದ ಒಂದು ಸರಳವಾದ ಪ್ರಯೋಗವೆಂದರೆ ವಿವಿಧ ಸಮಾಜಗಳಲ್ಲಿ ಹದಿಹರೆಯದವರನ್ನು ಪ್ರಸ್ತಾಪಿಸಲು ಬಳಸುವ ಕೆಲವು ಪದಗುಚ್ಛಗಳು ಮತ್ತು ಅವು ಏನನ್ನು ಸೂಚಿಸುತ್ತವೆ ಎಂಬುದರತ್ತ ಗಮನಹರಿಸುವುದು. ಅಮೆರಿಕದಲ್ಲಿ ಉಪಯೋಗಿಸುವ "ಟೀನೇಜರ್ (ಕಿಶೋರ/ರಿ)" ಪದವು "..ಬೇಕಾಬಿಟ್ಟಿ ವರ್ತನೆ, ತಿರುಗಿ ಬೀಳುವುದು, ಬೇಜವಾಬ್ದಾರಿತನ ಮತ್ತು ಸಂಘರ್ಷ.." ದ ಚಿತ್ರಣವನ್ನು ಮನಸ್ಸಿನಲ್ಲಿ ಮೂಡಿಸುತ್ತದೆ (ಬ್ರೌನ್ ಮತ್ತು ಲಾರ್ಸನ್ ೨೦೦೨, ಪು. ೬). ಆಫ್ರಿಕಾದಲ್ಲಿ ಹದಿಹರೆಯವನ್ನು ಬಾಲ್ಯದ ಸಾಮಾಜಿಕ ಅಭ್ಯಾಸಾವಸ್ಥೆ (apprenticeship) ಹಾಗೂ ವಯಸ್ಕ ಸಾಮಾಜಿಕ ಬದುಕಿನಲ್ಲಿ ಸಮನ್ವಯಗೊಳ್ಳುವಿಕೆಯ ನಡುವಿನ "ಮಾರ್ಗ ನಿಲ್ದಾಣ" (way station) ಎಂಬಂತೆ ನೋಡಲಾಗುತ್ತದೆ. ಔಪಚಾರಿಕವಾದ ಅರೇಬಿಯಾದ ಪದಗುಚ್ಛ "ಮುರಹಖಾ" ಯೌವನಾರಂಭವನ್ನು ಸೂಚಿಸುವುದರಿಂದ ಅದರಲ್ಲಿ ಲೈಂಗಿಕತೆಯ ಸೂಚ್ಯಾರ್ಥವಗಳಿವೆ.

"ತಲುಪುವಿಕೆ" ಅಥವಾ "ಮತ್ತೊಬ್ಬರನ್ನು ಹಿಂದಿಕ್ಕುವುದು" ಅಥವಾ ಮಾನವ ಬೆಳವಣಿಗೆಯ ಪರಿಭಾಷೆಯಲ್ಲಿ ಲೈಂಗಿಕ ಪ್ರಬುದ್ಧತೆಯ ವಯಸ್ಸನ್ನು ತಲುಪುದು" ಎಂಬುದು ಇದರ ಅರ್ಥ (ಪು. ೨೧೦). ಅರೇಬಿಯಾದ ಸಾಮಾನ್ಯ ಮಾತಿನ ರೂಢಿಯಲ್ಲಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಅನುಕ್ರಮವಾಗಿ ಬಳಸಲಾಗುವ ಇತರ ಪದಗಳೆಂದರೆ "ಫತಾ" ಮತ್ತು "ಫತಾತ್" (೧೪-೧೭ ವರ್ಷಗಳು), ಅವಿವಾಹಿತ/ತೆ ಮತ್ತು ಪ್ರೌಢಾವಸ್ಥೆಗೆ ಕಾಲಿಡುತ್ತಿರುವವರು ಎನ್ನುವ ಅರ್ಥವನ್ನು ಇದು ಸೂಚಿಸುತ್ತದೆ. "ಶಬ್/ಶಬ್ಬಾ" ಪದಗುಚ್ಛಗಳು (೧೩ ವರ್ಷಗಳು ಮತ್ತು ೨೦ರಿಂದ ೩೦ ವರ್ಷಗಳು) ಬೆಳೆಯುತ್ತಿರುವ ವ್ಯಕ್ತಿಯನ್ನು ತಿಳಿಸುತ್ತವೆ ಮತ್ತು ಇತರ ಬಹಳಷ್ಟು ಮಂದಿಯೆಡೆಗೆ ಅವರಿಗಿರುವ ಜವಾಬ್ದಾರಿ ಹಾಗೂ ಬಾಧ್ಯತೆಯನ್ನು ಸೂಚಿಸುತ್ತವೆ (ಬೂತ್ ೨೦೦೨). ಜಪಾನಿನಲ್ಲಿ ಬಾಲ್ಯ ಹಾಗೂ ಪ್ರೌಢಾವಸ್ಥೆಯ ನಡುವಿನ ಅವಧಿಗೆ ವಿಭಿನ್ನ ಹೆಸರುಗಳು ಮತ್ತು ಅರ್ಥಗಳನ್ನು ನೀಡಲಾಗಿದೆ. "ಶಿಶೋನೆನ್" ಮತ್ತು "ಶಿನೆನ್" ಎಂಬ ಪದಗುಚ್ಛಗಳು ಸಾಮಾನ್ಯವಾಗಿ ಯುವಜನಾಂಗವನ್ನು ಸೂಚಿಸುತ್ತವೆ; ಆದರೆ" ಸೀನೆನ್ಕಿ" ಅಥವಾ "ಜುಡಾಯ್" ಪದಗುಚ್ಛಗಳು ಹದಿಹರೆಯದ ಅವಧಿಯನ್ನು ವ್ಯಾಖ್ಯಾನಿಸುತ್ತವೆ. ವ್ಯಾಖ್ಯಾನದಲ್ಲಿನ ಇದೇ ರೀತಿಯ ಅಸ್ಪಷ್ಟತೆಯನ್ನು ಚೀನೀ ಸಮಾಜಗಳಲ್ಲಿಯೂ ಅವಲೋಕಿಸಲಾಗಿದೆ. ಈ ದೇಶಗಳಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಪದಗುಚ್ಛಗಳು ಒಟ್ಟಾರೆ ಯುವಜನಾಂಗವನ್ನು, ವಯಸ್ಕತನದ ಹಂತವನ್ನು, ಕುಟುಂಬದ ವ್ಯಾಪ್ತಿಯಲ್ಲಿನ ವಂಶಗತ ಸ್ಥಾನಮಾನಗಳನ್ನು ಅಥವಾ ವ್ಯಕ್ತಿಯ ಕಾನೂನಾತ್ಮಕ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಪ್ರತಿನಿಧಿಸುತ್ತವೆ. ಹಾಗಾಗಿ, ಹದಿಹರೆಯವನ್ನು ನಿಸ್ಸಂದಿಗ್ಧವಾಗಿ ವಿವರಿಸುವ ಯಾವುದೇ ಒಂದು ಪದಗುಚ್ಛವಿಲ್ಲ. ಹೀಗೆ ಪದಗುಚ್ಛಗಳು ಚದುರಿಹೋಗಿರುವುದರಿಂದ ಸಾಮಾನ್ಯವಾಗಿ ವ್ಯಕ್ತಿಯನ್ನು 'ಮಾಧ್ಯಮಿಕ ತರಗತಿಯ ವಿದ್ಯಾರ್ಥಿ' ಅಥವಾ "ಪ್ರೌಢಶಾಲೆಯ ವಿದ್ಯಾರ್ಥಿ" ಎಂದು ಪ್ರಸ್ತಾಪಿಸುವ ಪರಿಪಾಠವಿದೆ (ಸ್ಟೀವನ್ಸನ್ ಮತ್ತು ಝೂಸೊ ೨೦೦೨) ಮತ್ತು ಆ ಮೂಲಕ ಜಪಾನ್ ಮತ್ತು ಚೀನಾದಲ್ಲಿ ಶಿಕ್ಷಣಕ್ಕೆ ಕೊಡಲಾಗಿರುವ ಮಹತ್ವವನ್ನು ಇದು ಸೂಚಿಸುತ್ತದೆ.

ಹಲವು ಸಮಾಜಗಳು ಪ್ರೌಢಾವಸ್ಥೆ ಮತ್ತು ಹದಿಹರೆಯಕ್ಕೆ ಪ್ರವೇಶಿಸುವುದನ್ನು ಚಿನ್ಹಿತಗೊಳಿಸುವ ಚಿಕ್ಕದಾದ ಮತ್ತು ಖಾಸಗಿ ಅಥವಾ ಸಮುದಾಯವನ್ನು ಆಧರಿಸಿರುವ ವಿಧಿಶಾಸ್ತ್ರ ಹಾಗೂ ಧಾರ್ಮಿಕ ಸಂಪ್ರದಾಯಗಳನ್ನೊಳಗೊಂಡ ಸ್ಥಿತ್ಯಂತರದ ಸಂಸ್ಕಾರಗಳನ್ನು ಹೊಂದಿವೆ. ಹೆಚ್ಚು ಸಂಕೀರ್ಣವಾದ ಆಧುನಿಕ ಸಮಾಜಗಳಿಗೆ ಹೋಲಿಸಿದರೆ ಹೆಚ್ಚು ಸಂಕೀರ್ಣವಲ್ಲದ ಸಾಂಪ್ರದಾಯಿಕ ಸಮಾಜಗಳಲ್ಲಿ ವಿಧಿಶಾಸ್ತ್ರಗಳು ಹಾಗೂ ಸಮಾರಂಭಗಳು ನಡೆಯುತ್ತವೆ. ಒಂದು ವೇಳೆ ಈ ಎರಡನೆಯದರಲ್ಲಿ ಅಂತಹವುಗಳೇನಾದರೂ ಇದ್ದಲ್ಲಿ ಅದು ಬಹಳಷ್ಟು ಮಟ್ಟಿಗೆ ಹುಡುಗರಿಗೆ ಸಂಬಂಧಿಸಿರುತ್ತದೆ. ಅನೇಕ ಸಂಸ್ಕೃತಿಗಳಲ್ಲಿ, ಲೈಂಗಿಕತೆ ಮತ್ತು ಫಲವತ್ತತೆಗಳು ದೀಕ್ಷಾ ಸಂಸ್ಕಾರದ ಸಮಾರಂಭಗಳ ಪ್ರಮುಖ ವಿಷಯವೆನಿಸುತ್ತವೆ. ಹುಡುಗರಿಗೆ ಅಂತಹ ಸಮಾರಂಭಗಳು ಜವಾಬ್ದಾರಿಯ ಪ್ರತೀಕವಾಗಿದ್ದು, ಹುಡುಗಿಯರಿಗೆ ಈ ವಿಷಯವು ಜವಾಬ್ದಾರಿ ಹಾಗೂ ಫಲವತ್ತತೆಗಳೆರಡನ್ನೂ ಪ್ರತಿನಿಧಿಸುತ್ತದೆ. ನಿಯಮಾನುಸಾರ, ಲಿಂಗವು ವಿಧಿಶಾಸ್ತ್ರಗಳ ಪ್ರಮುಖ ಆಯೋಜನಾ ತತ್ತ್ವವೆನಿಸಿದೆಯಲ್ಲದೆ, ಸಮಾಜಗಳಾದ್ಯಂತ, ಸಮಾರಂಭಗಳಲ್ಲಿ ಲಿಂಗ ಭೇದಗಳಿದ್ದು, ಅದರಲ್ಲಿ, ಹುಡುಗಿಯರಿಗೆ ಹಾಗೂ ಹುಡುಗರಿಗೆ ಪ್ರತ್ಯೇಕವಾದ ವಿಧಿಶಾಸ್ತ್ರಗಳಿರುತ್ತವೆ (ಶ್ಲೀಗಲ್ ಮತ್ತು ಬ್ಯಾರಿ ೨೦೦೫). ಹುಡುಗಿಯರು ಪ್ರೌಢಾವಸ್ಥೆಗೆ ತಲುಪಿದಾಗ, ದಕ್ಷಿಣ ಭಾರತದ ಕೇರಳದಲ್ಲಿ ಅವರಿಗೆ ಒಂದು ಹುಸಿ ಮದುವೆಯ ಸಮಾರಂಭವನ್ನು ನಡೆಸುವುದು (ವರ್ಮ ೨೦೦೦), ಆಂಧ್ರಪ್ರದೇಶದಲ್ಲಿ ದಾವಣಿಯನ್ನು ಉಡುವುದು (ದುಬೆ ೧೯೯೮) ಮತ್ತು ಪೂರ್ವ ಆಫ್ರಿಕಾದ ಕಾಗುರು ಬುಡಕಟ್ಟಿನಲ್ಲಿ ೧೦-೧೨ರ ವಯಸ್ಸಿನ ಹುಡುಗರಿಗೆ ಸುನ್ನತಿ ಮಾಡಿಸುವುದು (ಗಾರ್ಡಿನರ್ ಮತ್ತು ಇತರರು ೧೯೯೮) ಸಾಂಪ್ರದಾಯಿಕ ವಿಧಿಶಾಸ್ತ್ರಗಳ ಕೆಲವು ಉದಾಹರಣೆಗಳಾಗಿವೆ. ಹದಿಹರೆಯದವರು ಕುಟುಂಬಕ್ಕೆ ಸಹಯೋಗವನ್ನು ನೀಡಲು ಪ್ರಾರಂಭಿಸುವ ಸಮಯದಲ್ಲಿ ಹಿರಿಯರ ಮೇಲುಸ್ತುವಾರಿ ಮತ್ತು ಅಧಿಕಾರವನ್ನು ಪ್ರತಿನಿಧಿಸುವ ಕೆಲವು ವಿಧಿಶಾಸ್ತ್ರಗಳ ಕಠಿಣ ಸ್ವರೂಪವು ಕಂಡುಬರುತ್ತದೆ. ಹುಡುಗರು ಪುರುಷರಾಗುವುದನ್ನು ಹುಡುಗಿಯರು

ಸ್ತ್ರೀಯರಾಗುವುದನ್ನು ಕಲಿಯಬೇಕಾಗುತ್ತದೆ, ಹಾಗಾಗಿ ಈ ಸಮಾಜಗಳಲ್ಲಿ ಹದಿಹರೆಯದವರು ವಯಸ್ಕರೊಂದಿಗೆ ಹೆಚ್ಚು ಸಮಯವನ್ನು ಕಳೆಯುವುದನ್ನು ಅವಲೋಕಿಸಲಾಗಿದೆ. ವಿಧಿಶಾಸ್ತ್ರಗಳನ್ನು ನಿರ್ವಹಿಸಲಿ, ನಿರ್ವಹಿಸದಿರಲಿ, ಹದಿಹರೆಯದವರ ಹೊಸ ಜೀವನದೆಡೆಗಿನ ಪರಿವರ್ತನೆಯು ಆರಂಭಗೊಂಡು, ಅದರಲ್ಲಿ, ಜವಾಬ್ದಾರಿಗಳು ವೃದ್ಧಿಸಿ, ವಯಸ್ಕರ ಪಾತ್ರವನ್ನು ಕುರಿತ ಗಂಭೀರ ಸಿದ್ಧತೆಗಳು ಪ್ರಾರಂಭವಾಗುತ್ತವೆ. ಉದಾಹರಣೆಗೆ, ಅಮೆರಿಕದಂತಹ ಆಧುನಿಕ ಸಮಾಜಗಳಲ್ಲಿ ವಿಧಿಶಾಸ್ತ್ರಗಳು ಮತ್ತು ಸಮಾರಂಭಗಳು ಕಂಡುಬರುವುದಿಲ್ಲ. ಬಾಲ್ಯದಿಂದ ವಯಸ್ಕತನದೆಡೆಗಿನ ಪರಿವರ್ತನೆಯು ಅನುಕ್ರಮವಾಗಿದ್ದು, ವ್ಯಕ್ತಿಯ ಆಯ್ಕೆಗನುಗುಣವಾಗಿ, ನಿರ್ದಿಷ್ಟ ಉಡುಪುಗಳನ್ನು ಧರಿಸುವುದು ಅಥವಾ ಬಾಲ್‌ರೂಮ್ ನರ್ತನದಂತಹ ವಿವಿಧ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ (ಶ್ಲೆಗಲ್ ಮತ್ತು ಬ್ಯಾರಿ ೧೯೯೧).

ದಿ ವರ್ಲ್ಡ್ಸ್ ಯೂತ್‌ನಂತಹ ಯೋಜನೆಗಳಲ್ಲಿ ಹದಿಹರೆಯದ ಬಗ್ಗೆ ವಿವಿಧ ಸಂಸ್ಕೃತಿಗಳಲ್ಲಿರುವ ವ್ಯತ್ಯಾಸಗಳನ್ನು ಸಾಕಷ್ಟು ವಿವರವಾಗಿ ಚರ್ಚಿಸಲಾಗಿದೆ (ಬ್ರೌನ್ ಮತ್ತು ಇತರರು ೨೦೦೨). ಪುಸ್ತಕದಲ್ಲಿನ ವಿಸ್ತೃತ, ಅದರಲ್ಲೂ ವಿಶೇಷವಾಗಿ ಕುಟುಂಬಕ್ಕೆ ಸಂಬಂಧಿಸಿದ ಘಟನೆಗಳನ್ನು, ಯಾದೃಚ್ಛಿಕವಾಗಿ ಇಲ್ಲಿ ಪ್ರಸ್ತುತಪಡಿಸಲಾಗಿದೆ. ಆಫ್ರಿಕನ್ ಸಮಾಜವು ಸ್ಥಳೀಯ ಹಾಗೂ ಬಹಿರ್ಜಾತ(exogenous) ಪ್ರಭಾವದ ಪರಿಣಾಮದ ನಿಟ್ಟಿನ ಹದಿಹರೆಯದವರನ್ನು ಅಭಿವ್ಯಕ್ತಿಸುತ್ತದೆ. ಸ್ಥಳೀಯ ಪರಿಕಲ್ಪನೆಯು, ಈ ಹಂತವು ಬೆಳವಣಿಗೆಯ ಒಂದು ವಿಶಿಷ್ಟ ಅವಧಿಯಾಗಿದ್ದು, ಇದರಲ್ಲಿ, ವಯಸ್ಕರ ಸ್ಥಾನಮಾನಕ್ಕೆ ಸ್ಪಷ್ಟ ಸಿದ್ಧತೆಯಿರುತ್ತದೆಯೆಂಬ ದೃಷ್ಟಿಕೋನವನ್ನು ಹೊಂದಿದೆ. ಪೋಷಕರ ನಿರೀಕ್ಷೆಗಳು (ಹದಿಹರೆಯದವರ ಲಿಂಗ ಹಾಗೂ ವಯಸ್ಸಿಗನುಗುಣವಾಗಿ) ಕುಟುಂಬದ ಸಂಬಂಧಗಳ ತಳಹದಿಯಾಗಿದೆ. ಪೋಷಕರ ಅಧಿಕಾರ ಹದಿಹರೆಯದವರ ಹಿತಾಸಕ್ತಿಯ ರಕ್ಷಣೆಯ ನಿಟ್ಟಿನಲ್ಲಿರುವುದರಿಂದ, ಅದನ್ನು ಪೋಷಕರ ಹಕ್ಕು ಎಂಬಂತೆ ಪರಿಗಣಿಸಲಾಗುತ್ತದೆಯೆಂದು (ನ್ಸಮೆನಾಂಗ್ ೨೦೦೨) ಗ್ರಹಿಸಲಾಗುತ್ತದೆ. ಚೀನ ಹಾಗೂ ಜಪಾನಿನಲ್ಲಿ ಸಾಂಪ್ರದಾಯಿಕ ದೃಷ್ಟಿಕೋನದ ಪ್ರಕಾರ ಕುಟುಂಬವು ಅತ್ಯಂತ ಮಹತ್ವದ್ದಾಗಿರುತ್ತದೆ. ಯುವಜನರು ಪೋಷಕರೊಂದಿಗೆ ನಿಯತ ಸಂವಹನವನ್ನು ಹೊಂದಿರುತ್ತಾರೆ ಮತ್ತು ಸಂಬಂಧದ ಬಗ್ಗೆ ಅವರಿಗೆ ಸದಭಿಪ್ರಾಯವಿರುತ್ತದೆ. ಹಾಗಿದ್ದೂ, ಎರಡೂ ಸಮಾಜಗಳಲ್ಲಾಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ಹದಿಹರೆಯದವರು ಹೆಚ್ಚು ಸ್ವ-ಕೇಂದ್ರಿತರಾಗುತ್ತಿದ್ದಾರೆ. ಉದಾಹರಣೆಗೆ, ಚೀನಾದಲ್ಲಿ ಒಂದು-ಮಗು ನೀತಿಯ ಪರಿಣಾಮಗಳು ಮತ್ತು ಜಪಾನಿನಲ್ಲಿ ಕುಟುಂಬದ ಗಾತ್ರ ಕುಗ್ಗುತ್ತಿರುವುದು. ಹಾಗಾಗಿ, ಸಾಮಾಜಿಕ ಪರಸ್ಪರಾವಲಂಬನೆಯು ವ್ಯಕ್ತಿವಾದಕ್ಕೆ ಹೆಚ್ಚು ಒತ್ತು ನೀಡುವ ಪ್ರವೃತ್ತಿಗೆ ಅನುವು ಮಾಡಿಕೊಡುತ್ತಿದೆ (ಸ್ಟೀವನ್ಸನ್ ಮತ್ತು ಝುಷೊ ೨೦೦೨). ಆಗ್ನೇಯ ಏಷಿಯಾದ ಸಮಾಜಗಳು (ಉದಾ: ಇಂಡೊನೇಷಿಯಾ, ಫಿಲಿಪೀನ್ಸ್) ಕುಟುಂಬದ ಒಗ್ಗಟ್ಟು ಹಾಗೂ ಸಾಮಾಜಿಕ ಸಂಬಂಧಗಳಿಗೆ ಹೆಚ್ಚು ಬೆಲೆಯನ್ನು ಕೊಡುತ್ತವೆ. ಸಾಮಾಜಿಕ ಬದಲಾವಣೆಗಳ ಹೊರತಾಗಿಯೂ ಅದು ಹಾಗೆಯೇ ಉಳಿದುಕೊಂಡು ಬಂದಿದೆ. ಕುಟುಂಬದೊಂದಿಗಿನ ಸಂಬಂಧ, ಕುಟುಂಬಕ್ಕೋಸ್ಕರ ತ್ಯಾಗ, ಮತ್ತು ಕುಟುಂಬವನ್ನು ಅವಲಂಬಿಸಿರುವುದನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಅಭಿವೃದ್ಧಿಯ ಪ್ರಕ್ರಿಯೆಯನ್ನು ಒಳಗೊಂಡಿರುವ ಒತ್ತಡವನ್ನು ಕಡಿಮೆ ಮಾಡುವ ಕೆಲಸವನ್ನೂ ಒಪ್ಪಿಕೊಳ್ಳಲಾಗಿದೆ (ಮರಿಯಾ ೨೦೦೨). ಅರಬ್ ಸಮಾಜಗಳಲ್ಲಿ ಹದಿಹರೆಯವನ್ನು, ಜವಾಬ್ದಾರಿಯನ್ನು ಕಲಿಯುವ ಪ್ರಕ್ರಿಯೆ ಮತ್ತು ಸಂಬಂಧಗಳ ಬಲೆಯ ಕಾರಕವೆಂಬಂತೆ ನೋಡಲಾಗುತ್ತದೆ. ಕುಟುಂಬದ ಸಂಯೋಜಕತೆ ಮತ್ತು ಗುಂಪಿನ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯಲಾಗಿದ್ದು, ಕುಟುಂಬದ ಜವಾಬ್ದಾರಿಯನ್ನು ಜೀವನಪರ್ಯಂತ ಹೊರುವಂತೆ ಮಕ್ಕಳನ್ನು ಸಾಮಾಜೀಕೃತಗೊಳಿಸಲಾಗುತ್ತದೆ; ಮತ್ತೊಬ್ಬರಿಗೆ ಸಂಬಂಧಿಸಿದಂತೆ 'ತನ್ನನ್ನು'(self) ಅನುಭವಕ್ಕೆ ತಂದುಕೊಳ್ಳಲಾಗುತ್ತದೆ. ಲಿಂಗಾಧಾರಿತ ಪಾತ್ರಗಳು ದೃಢವಾಗಿರುತ್ತವೆ. ಪುರುಷರಿಗೆರ ತಮ್ಮ ಮಹಿಳಾ ಸಂಬಂಧಿಕರ ನಿಯಂತ್ರಣ ಹಾಗೂ ಜವಾಬ್ದಾರಿಯನ್ನು ವಹಿಸಲಾಗುತ್ತದೆ, ಮತ್ತು ಇದರ ಪರಿಣಾಮಸ್ವರೂಪವಾಗಿ ಮಹಿಳೆಯರು ಪುರುಷ ರಕ್ತಸಂಬಂಧಿಗಳನ್ನು ತಮ್ಮ

ರಕ್ಷಕರಾಗಿ ಒಪ್ಪಿಕೊಳ್ಳುತ್ತಾರೆ ಮತ್ತು ಅವರ ಸೇವೆಯ ನಿಟ್ಟಿನ ಕೆಲಸಗಳನ್ನು ನಿರ್ವಹಿಸುತ್ತಾರೆ. ಪುರುಷಪ್ರಧಾನ ವ್ಯವಸ್ಥೆಯು ಸ್ಥಿತಿಸ್ಥಾಪಕವಾಗಿದ್ದು, ಗಂಡುಮಕ್ಕಳಿಗೆ ಹೆಣ್ಣು ಮಕ್ಕಳಿಗಿಂತ ಹೆಚ್ಚು ಮಹತ್ವನ್ನು ನೀಡಲಾಗುತ್ತದೆ, ಮತ್ತು ಕುಟುಂಬ ರಚನೆಯು ಅತ್ಯಂತ ಶ್ರೇಣೀಕರಣಗೊಂಡಿರುತ್ತದೆ (ಸೌದಿ ಅರೇಬಿಯಾದಲ್ಲಿ) (ಬೂತ್ ೨೦೦೨). ಲ್ಯಾಟಿನ್ ಅಮೆರಿಕದ ದೇಶಗಳು ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಕಂಡಿವೆ. ಹದಿಹರೆಯದ ಅಂತ್ಯ ಮತ್ತು ವಯಸ್ಕತನದ ಪ್ರಮುಖ ಚಿಹ್ನಕಗಳು, ಮನೆಯನ್ನು ಬಿಟ್ಟು ಹೋಗುವುದು, ಸಂಗಾತಿಯೊಂದಿಗೆ ಬದುಕುವುದು ಮತ್ತು ಕುಟುಂಬವನ್ನು ರೂಪಿಸುವುದನ್ನು ಒಳಗೊಂಡಿವೆ. ಹಲವು ಬಾರಿ ಹದಿಹರೆಯದವರು ಆರ್ಥಿಕ ಕಾರಣಗಳಿಗಾಗಿ ತಮ್ಮ ಪೋಷಕರ ಜೊತೆಯಲ್ಲಿ ಬದುಕುವುದನ್ನು ಮುಂದುವರೆಸುತ್ತಾರೆ, ಮತ್ತು ವಿವಾಹವಾಗುವವರೆಗೂ ಅವರು ನಿಜವಾದ ಅರ್ಥದಲ್ಲಿ ಸ್ವತಂತ್ರರಾಗುವುದಿಲ್ಲ (ವೆಲ್ಡಿ ೨೦೦೨).

ಹದಿಹರೆಯದ ಹಂತವನ್ನು ಸೂಚಿಸುವ ವೈವಿಧ್ಯಮಯ ಪದಗುಚ್ಛಗಳು, ವಿವಿಧ ಸಂಸ್ಕೃತಿಗಳಾದ್ಯಂತದಲ್ಲಿನ ಸ್ಥಿತ್ಯಂತರದ ವಿಭಿನ್ನ ಸಂಸ್ಕಾರಗಳು, ಮತ್ತು ವಿವಿಧ ಆದ್ಯತೆ ಮತ್ತು ಕಾರ್ಯಭಾರಗಳಿಗೆ ಹೀಗೆ ಒತ್ತು ನೀಡಿರುವುದು ವಿವಿಧ ಸಾಂಸ್ಕೃತಿಕ ಸಂದರ್ಭಗಳಲ್ಲಿ ಹದಿಹರೆಯಕ್ಕೆ ನೀಡಲಾದ ಸಂಸ್ಕೃತಿಗೆ ಸಂಬಂಧಿಸಲ್ಪಟ್ಟ ಸ್ಥಳೀಯ ಅರ್ಥಗಳನ್ನು ಸೂಚಿಸುತ್ತವೆ. ಹಾಗಾಗಿ ಹದಿಹರೆಯವನ್ನು ಪಾಶ್ಚಾತ್ಯ ಹಾಗೂ ಪಾಶ್ಚಾತ್ಯೇತರ ಸಮಾಜಗಳಲ್ಲಿ ವಿಭಿನ್ನವಾಗಿ ಜೀವಿಸಲಾಗುತ್ತದೆ ಮತ್ತು ಅನುಭವಿಸಲಾಗುತ್ತದೆ. ಹದಿಹರೆಯದಲ್ಲಿರುವ ಸಾಂಸ್ಕೃತಿಕ ಪರಿವರ್ತನೀಯತೆಗಳು ಜಗತ್ತಿನಾದ್ಯಂತದ ವಿವಿಧ ವಿನ್ಯಾಸಗಳನ್ನು ಒಳಗೊಂಡ ವಿಭಿನ್ನ ಅಂಶಗಳ ಚಿತ್ರಣವನ್ನು ಸಂಸ್ಕೃತಿಗಳ ನಡುವೆ ಮಾತ್ರವಲ್ಲದೆ ಸಂಸ್ಕೃತಿಯೊಳಗೂ ಕೂಡ ಪ್ರಸ್ತುತಪಡಿಸುತ್ತ ವಿವಾದಾತೀತವಾಗಿವೆ. ಸಾಂಸ್ಕೃತಿಕ ದೃಷ್ಟಿಕೋನಗಳು ಕುಟುಂಬದೊಳಗಿನ ಸಾಮಾಜೀಕರಣದಲ್ಲಿ ಹಾಸುಹೊಕ್ಕಾಗಿದ್ದು, ಪ್ರತಿಬಿಂಬಿತವಾಗುತ್ತವಲ್ಲದೆ, ಪೋಷಕ-ಹದಿಹರೆಯದ ಸಂಬಂಧದ ಮಧ್ಯವರ್ತಿಗಳಾಗುತ್ತವೆ.

**ವಿಭಿನ್ನ ಸಾಂಸ್ಕೃತಿಕ ಸಂದರ್ಭಗಳಲ್ಲಿ ಹದಿಹರೆಯದ ಸಾಮಾಜೀಕರಣ**

ಸಾಮಾಜೀಕರಣದ ಕಟ್ಟಲೆಗಳು ಮತ್ತು ರೂಢಿಗಳು ಸಾಂಸ್ಕೃತಿಕ ಲೋಕದೃಷ್ಟಿಯಿಂದ ಹೊರಹೊಮ್ಮುತ್ತವೆ ಮತ್ತು ಅದನ್ನು ಪ್ರತಿಬಿಂಬಿಸುತ್ತವೆ ಹಾಗೂ ಸಮಾಜೋ-ಜನಸಾಂಖ್ಯಿಕೀಯ ಬದಲಾವಣೆಗಳಿಗೆ ಸಹ ಪ್ರತಿಸ್ಪಂದಿಸುತ್ತವೆ. ಹದಿಹರೆಯದ ಸಾಮಾಜೀಕರಣವು ಹದಿಹರೆಯದವರು ವಯಸ್ಕರ ಪಾತ್ರವಹಿಸಲು ಅವರನ್ನು ಸಜ್ಜುಗೊಳಿಸುವ ಗುರಿಯೊಂದಿಗೆ ಸಾಂಸ್ಕೃತಿಕವಾಗಿ ಸೂಕ್ತವಾಗುವ ವರ್ತನೆಗಳನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು ಮತ್ತು ಮನೋಭಾವಗಳನ್ನು ಮನಸ್ಸಿನಲ್ಲಿ ನೆಲೆಗೊಳಿಸುವತ್ತ ಪ್ರಜ್ಞಾಪೂರ್ವಕವಾಗಿ ಗಮನಹರಿಸುವುದನ್ನು ಒಳಗೊಳ್ಳುತ್ತದೆ. ಹದಿಹರೆಯದ ವ್ಯಕ್ತಿಯು ವಯಸ್ಕ ಸಾಮಾಜೀಕರಣದ ಬದಲಾಗುತ್ತಿರುವ ಬೇಡಿಕೆಗಳನ್ನು ಪೂರೈಸಲು ಪ್ರಯತ್ನಿಸುತ್ತಾನ/ಳಲ್ಲದೆ, ಅದೇ ಸಮಯದಲ್ಲಿ ದೈಹಿಕ, ಮಾನಸಿಕ, ಮತ್ತು ಸಮಾಜೋ-ಭಾವನಾತ್ಮಕ ವಲಯದಲ್ಲಾಗುತ್ತಿರುವ ತೀವ್ರ ವಿಕಾಸಾತ್ಮಕ ಬದಲಾವಣೆಗಳನ್ನು ಅನುಭವಿಸುತ್ತಿರುತ್ತಾನೆ/ಳೆ. ಪೋಷಕರ ಮೇಲೆ ಅವಲಂಬಿತರಾಗುವುದನ್ನು ಕಡಿಮೆ ಮಾಡುವುದು ಮತ್ತು ವಯಸ್ಕರು ವಹಿಸಬೇಕಾದ ಪಾತ್ರದಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳುವುದು ಹದಿಹರೆಯದಲ್ಲಾಗುವ ಬೆಳವಣಿಗೆಗೆ ಸಂಬಂಧಿಸಿದ ಬದಲಾವಣೆಗಳಾಗಿರುತ್ತವೆ. ಇದು ಮಾನವ ಬೆಳವಣಿಗೆಯ ಸಾಂಸ್ಕೃತಿಕ ಮಾದರಿಗಳೊಂದಿಗಿನ ಸಾಮರಸ್ಯಗಳಿಗೆ ಪೂರಕವಾಗಿರುತ್ತದೆ. ಕುಟುಂಬದ ಸಂವಹನ ಮತ್ತು ಸಂಬಂಧಗಳೊಳಗೆ ಸಾಂಸ್ಕೃತಿಕ ದೃಷ್ಟಿಕೋನಗಳು ಹಾಸುಹೊಕ್ಕಾಗಿರುತ್ತವೆ. ವಿಭಿನ್ನ ಸಂಸ್ಕೃತಿಗಳ ಸಂದರ್ಭದಲ್ಲಿನ ಪೋಷಕ-ಹದಿಹರೆಯದ ಸಂಬಂಧದ ಪ್ರಮುಖ ಅಂಶಗಳನ್ನು ಈ ಕೆಳಗಿನ ವಿಭಾಗದಲ್ಲಿ ಚರ್ಚಿಸಲಾಗಿದೆ.

**ವಿಭಿನ್ನ ಸಾಂಸ್ಕೃತಿಕ ಸಂದರ್ಭದಲ್ಲಿ ಪೋಷಕ-ಹದಿಹರೆಯದವರ ಸಂಬಂಧ:**

**ಅಧಿಕಾರ, ಸ್ವಾಯತ್ತತೆ ಮತ್ತು ಭಿನ್ನತೆಗಳು**

ಪೋಷಕ-ಹದಿಹರೆಯದವರ ಸಂಬಂಧದ ಸಂದರ್ಭದಲ್ಲಿ ಸಾಂಸ್ಕೃತಿಕ ಹಾಗೂ ಸಮಾಜೋ-ಆರ್ಥಿಕ ಸನ್ನಿವೇಶಗಳಲ್ಲಿ ಅಡಕಗೊಂಡಿರುವ, ಸಾಮಾಜೀಕರಣ ಪ್ರಕ್ರಿಯೆಯು ತೆರೆದುಕೊಳ್ಳುತ್ತದೆ. ಪೋಷಕರಿಗಿಂತ ವಿಶಿಷ್ಟವಾದ ಒಂದು ವ್ಯಕ್ತಿಕೇಂದ್ರಿತ ನಿಲುವು ಮತ್ತು ತನ್ನದೇ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಅಗತ್ಯಕ್ಕೆ ಒತ್ತು ನೀಡುವ ಸ್ವತಂತ್ರ ವಿಕಾಸಾತ್ಮಕ ಮಾದರಿಯನ್ನು ಪಾಶ್ಚಾತ್ಯ, ಯುರೊ-ಅಮೆರಿಕನ್ ಸಮಾಜಗಳು ಅಳವಡಿಸಿಕೊಳ್ಳುತ್ತವೆ. ಈ ದೃಷ್ಟಿಕೋನಕ್ಕೆ ಪೂರಕವಾಗಿ ಪೋಷಕರಿಂದ ಪ್ರತ್ಯೇಕವಾಗುವ ನಿಟ್ಟಿನ ಸ್ವಾಯತ್ತತೆಯು ಹದಿಹರೆಯದ ಪ್ರಮುಖ ವಿಕಾಸಾತ್ಮಕ ಕ್ರಿಯೆಯಾಗಿರುತ್ತದೆ. ಪಾಶ್ಚಾತ್ಯ ಸಮಾಜಗಳಲ್ಲಿನ ಪೋಷಕ-ಹದಿಹರೆಯದವರ ದ್ವಿಮುಖಗಳ ಸಂಶೋಧನೆಯು ಪೋಷಕರಿಗೆ ಅಧಿಕಾರದ ಬಗ್ಗೆ ಹೆಚ್ಚಿನ ಕಾಳಜಿ ಇದ್ದರೆ ಹದಿಹರೆಯದವರು ಪೋಷಕರಿಂದ ತಮ್ಮ ಸ್ವಾಯತ್ತತೆಯನ್ನು ಬಯಸುವ ನಿಟ್ಟಿನಲ್ಲಿ ಅನ್ಯಮನಸ್ಕರಾಗಿರುತ್ತಾರೆ ಎನ್ನುವುದನ್ನು ತೋರಿಸಿದೆ (ಜೆನ್ಸನ್ ಮತ್ತು ದೊಸ್ತ್-ಗೊಜ್ಕನ್ ೨೦೧೫). ಸ್ವಾಯತ್ತತೆಯ ಸಾಧನೆಯು ಒಂದು ಮಹತ್ವದ ಮನೋಸಾಮಾಜಿಕ ಬೆಳವಣಿಗೆಯ ಸಂಗತಿಯೆಂದು ಪರಿಗಣಿಸಲಾಗಿದ್ದು, ಸ್ವಾಯತ್ತತೆಗೆ ಸೂಕ್ತವಾದ ಪೋಷಕರ ಬೆಂಬಲವು ಧನಾತ್ಮಕ ಪರಿಣಾಮದೊಂದಿಗೆ ಸಂಬದ್ಧವಾಗಿರುತ್ತದೆ (ಜಿಮ್ಮರ್-ಗೆಂಬೆಕ್ ಮತ್ತು ಕೊಲ್ಲಿನ್ಸ್ ೨೦೦೩). ಆದರೆ, ಹದಿಹರೆಯದವರು ತಮ್ಮ ಕುಟುಂಬದಿಂದ ಸ್ವಾತಂತ್ರ್ಯವನ್ನು ಬಯಸುವ ನಿಟ್ಟಿನಲ್ಲಿ ಅನ್ಯಮನಸ್ಕರಾಗಿರುತ್ತಾರೆ ಎನ್ನುವ ಪಾಶ್ಚಾತ್ಯ ಸಮಾಜದಲ್ಲಿ ದೀರ್ಘಕಾಲದಿಂದಲೂ ಪ್ರಧಾನವಾಗಿ ಚಾಲ್ತಿಯಲ್ಲಿರುವ ಅಭಿಪ್ರಾಯಕ್ಕಿಂತ ತೀರ ಇತ್ತೀಚಿನ ದೃಷ್ಟಿಕೋನವು ಭಿನ್ನವಾಗಿದೆ, ಮತ್ತು ಅದಕ್ಕೆ ಪ್ರತಿಯಾಗಿ ಪೋಷಕರಿಂದ ಸಂಪೂರ್ಣವಾಗಿ ಸ್ವತಂತ್ರರಾಗುವುದು ಹದಿಹರೆಯದವರ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಎಂದು ಇದು ಪ್ರತಿಪಾದಿಸುತ್ತದೆ. ಅದರ ಬದಲಾಗಿ ಹದಿಹರೆಯದವರು ತಮ್ಮ ಕುಟುಂಬದ ಬೆಂಬಲದೊಂದಿಗೆ ಸ್ವಾತಂತ್ರ್ಯವನ್ನು ವರ್ಧಿಸಿಕೊಳ್ಳುವ ನಿಟ್ಟಿನಲ್ಲಿ, ಸ್ವಾಯತ್ತತೆ ಮತ್ತು ಸಂಬದ್ಧತೆಯ ನಡುವೆ ನ್ಯಾಯಯುತವಾದ ಸಮತೋಲನವನ್ನು ನಿರ್ವಹಿಸಬೇಕೆಂಬುದನ್ನು ಸಮರ್ಥಿಸಲಾಗಿದೆ (ಗ್ರೀನ್‌ಫೀಲ್ಡ್ ಮತ್ತು ಇತರರು ೨೦೦೩). ಪೋಷಕರ ಪ್ರಭಾವದಿಂದ ದೂರವಾಗುವುದಕ್ಕೆ ಹೆಚ್ಚು ಒತ್ತು ನೀಡದೆ ವಯಸ್ಸಿಗೆ ಸೂಕ್ತವಾದ ರೀತಿಯಲ್ಲಿ ಕುಟುಂಬ ಬೆಂಬಲಿತ ಬೆಚ್ಚಗಿನ ವಾತಾವರಣದಲ್ಲಿ, ಪೋಷಕರ ನಿಕಟ ಸಂಬಂಧದೊಂದಿಗೆ ಸ್ವಾಯತ್ತತೆಯನ್ನು ಪ್ರೋತ್ಸಾಹಿಸುವ ನಿಟ್ಟಿನ ಪೋಷಕರ ಸಹಯೋಗವನ್ನೊಳಗೊಂಡ ಸ್ವಾಯತ್ತತೆಯ ಬೆಳವಣಿಗೆಯನ್ನು ಹೆಚ್ಚೆಚ್ಚು ಪರಿಕಲ್ಪಿಸಲಾಗಿದೆ (ಸೊಯೆನನ್ಸ್ ಮತ್ತು ಇತರರು ೨೦೦೭). ಸ್ವಾಯತ್ತತೆಯ ಬೆಳವಣಿಗೆಯಲ್ಲಿ ಪೋಷಕರ ಸಂಬಂಧವನ್ನು ಕಡಿದುಕೊಳ್ಳಬೇಕಾದ ಅಗತ್ಯವಿಲ್ಲ ಎನ್ನುವುದಕ್ಕೆ ಒತ್ತು ನೀಡುವ ಬೆಳವಣಿಗೆಗೆ ಸಂಬಂಧಿಸಿದ ಅನೇಕ ಸಂಶೋಧಕರು ಈ ನಿಲುವನ್ನು ಬೆಂಬಲಿಸುತ್ತಾರೆ (ಉದಾ: ಗ್ರೊಟೆವಾಂಟ್ ಮತ್ತು ಕೂಪರ್ ೧೯೮೬; ಮುದ್ರಣದಲ್ಲಿರುವ ಮೆಕ್‌ಎಲ್ಹಾನಿ ಮತ್ತು ಅಲ್ಲೆನ್; ಸ್ಟೀನ್‌ಬರ್ಗ್ ಮತ್ತು ಸಿಲ್ವರ್‌ಬರ್ಗ್ ೧೯೮೬; ಯೆ ಮತ್ತು ಇತರರು ೨೦೦೯; ಜಿಮ್ಮರ್-ಗೆಂಬೆಕ್ ಮತ್ತು ಕೊಲ್ಲಿನ್ಸ್ ೨೦೦೩). ಪ್ರತ್ಯೇಕತೆ ಮತ್ತು ಪರಸ್ಪರ ಸಂಬಂಧ ಇವುಗಳ ನಡುವಿನ ಸಮತೋಲನವು ಸ್ವ-ಅರಿವು, ಇತರರನ್ನು ಕುರಿತ ಸಂವೇದನಾಶೀಲತೆ, ಮತ್ತು ಹೊಸ ಪರಿಸ್ಥಿತಿಗಳನ್ನು ಎದುರಿಸುವ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಹದಿಹರೆಯದವರ ಮಾನಸಿಕ ಪ್ರೌಢತೆಗೆ ನೆರವಾಗುತ್ತದೆ (ಬೆಕ್ಕರ್ ಮತ್ತು ವ್ಯಾನ್ ಅಸ್ಸೆನ್ ೨೦೦೬).

ಪೂರ್ವ-ಏಷಿಯಾ ಸಮಾಜಗಳಲ್ಲಿ (ಚೀನಾ, ಜಪಾನ್) ಪರಸ್ಪರ ಅವಲಂಬನೆಯು ಪ್ರಧಾನವಾಗಿದ್ದು, ಪೋಷಕರು-ಮಗುವಿನ ಸಂಬಂಧವು ಸುಸಂಬದ್ಧತೆಯ ಲಕ್ಷಣವನ್ನು ಹೊಂದಿರುತ್ತದೆ. ಪೋಷಕರನ್ನು ತಿಳುವಳಿಕೆಯನ್ನು ಸೂಚಿಸುವ ಅಧಿಕಾರಯುತ ವ್ಯಕ್ತಿಗಳೆಂಬುದಾಗಿ ಗ್ರಹಿಸಲಾಗುತ್ತದೆ. ಪೋಷಕರು-ಮಗುವಿನ ಸಂಬಂಧವು ಕರ್ತವ್ಯ, ಗೌರವ, ಬದ್ಧತೆ, ವಿಧೇಯತೆ ಮತ್ತು ಪೋಷಕರ ಆಶಯಕ್ಕೆ ಪೂರಕವಾಗಿ ನಡೆದುಕೊಳ್ಳುವ ಅಂಶಗಳ ಸುತ್ತ ರೂಪುಗೊಂಡಿರುತ್ತದೆ (ಟ್ರೊಮ್ಸ್ಡೊರ್ಫ್ ಮತ್ತು ಕೊರ್ನಾಟ್ ೨೦೦೩). ಸ್ವಾಯತ್ತತೆಗಿಂತ

ಸಂಬದ್ಧತೆಯನ್ನು ಪಶ್ಚಿಮೇತರ ಸಮಾಜಗಳು ಹೆಚ್ಚು ಗೌರವಿಸುತ್ತವೆಂಬುದು ಸ್ಪಷ್ಟ. ಹಾಗಾಗಿ, ಹದಿಹರೆಯದ ಸಂದರ್ಭದಲ್ಲಿ ಸ್ವಾಯತ್ತತೆಯು ಪ್ರಧಾನವಾದ ಬೆಳವಣಿಗೆಯ ಕ್ರಿಯೆ ಎಂಬುದರ ಔಚಿತ್ಯವನ್ನು ಹೀಗೆ ಪಶ್ಚಿಮೇತರ ಸಮಾಜಗಳ ಸಂದರ್ಭದಲ್ಲಿ ಪ್ರಶ್ನಿಸಲಾಗಿದೆ. ಅದೇ ಸಮಯದಲ್ಲಿ, ಪ್ರೌಢ ವಯಸ್ಕರ ಪಾತ್ರದ ತಯಾರಿಯು ಕೆಲಮಟ್ಟಿಗಿನ ಸ್ವಾಯತ್ತತೆಯನ್ನು ಅವಶ್ಯವಾಗಿಸುತ್ತದೆ. ಹಾಗಾಗಿ ಇದು ಪೋಷಕರೊಂದಿಗಿನ ಸಂಬಂಧವನ್ನು ಪುನರ್ವ್ಯಾಖ್ಯಾನಿಸುವ ಅಗತ್ಯವಿರುವ ಅವಧಿಯಾಗಿದೆ. ಎಲ್ಲ ಸಮಾಜಗಳಲ್ಲೂ ನಂಟು ಹಾಗೂ ಸ್ವಾಯತ್ತತೆಗಳೆರಡೂ ಸಮಾಜಗಳಾದ್ಯಂತದ ಮನುಷ್ಯನ ಮೂಲಭೂತ ಅಗತ್ಯಗಳಾಗಿವೆ. ಅಧ್ಯಾಯ ೧ರಲ್ಲಿ ವಿವರಿಸಿದ ಹಾಗೆ ಇವೆರಡರ ಅಗತ್ಯವು ಸ್ವಾಯತ್ತತೆ-ಸಂಬಂಧಪಟ್ಟಿರುವಿಕೆಗಳ 'ಸ್ವಯಂ' ಎಂಬಂತೆ ವ್ಯಕ್ತಗೊಂಡಿದೆ. ಇಂತಹ 'ಸ್ವಯಂ'ನ ಸೃಜನೆಯು ಎರಡೂ ಬಗೆಯ ಮೂಲ ಅಗತ್ಯಗಳನ್ನು ಪೂರೈಸುವ ಸಾಧ್ಯತೆಯನ್ನು ಒದಗಿಸುವುದರಿಂದ ಅದು ಬೆಳವಣಿಗೆಗೆ ಅತ್ಯಂತ ಸೂಕ್ತವಾದುದು ಎಂದು ಪರಿಗಣಿಸಲಾಗಿದೆ (ಕಗಿಟ್‌ಶಿಬಾಷಿ ೧೯೯೬, ೨೦೦೩).

ಇದೇ ನಿಟ್ಟಿನಲ್ಲಿ ವಿವಿಧ ಸಾಂಸ್ಕೃತಿಕ ಸಂಶೋಧನೆಯು ಪಶ್ಚಿಮೇತರ ಸಮಾಜಗಳಲ್ಲಿ, ವಿಭಿನ್ನ ರೂಪದಲ್ಲಿ ಮತ್ತು ವಿಭಿನ್ನ ಕಾಲಾನುಕ್ರಮಣಿಕೆಯಲ್ಲಾದರೂ ಕೂಡ ಸ್ವಾಯತ್ತತೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದೆ. ಜಾಗತೀಕರಣವು ಸಾಂಸ್ಕೃತಿಕ ಮೌಲ್ಯಗಳಾದ ಅಧಿಕಾರ ಮತ್ತು ಸ್ವಾಯತ್ತತೆಯನ್ನು ಕುರಿತು ಪೋಷಕರು ಮತ್ತು ಹದಿಯಹರೆಯದವರ ನಡುವೆ ಹೆಚ್ಚು ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುತ್ತದೆ, ಹಾಗಾಗಿ, ಈ ಚರ್ಚಾಂಶಗಳು ಮುನ್ನೆಲೆಗೆ ಬರುತ್ತವೆ (ಜೆನ್ಸನ್ ಮತ್ತು ಇತರರು ೨೦೧೧). ಸಾಂಸ್ಕೃತಿಕ ನಿಯಮಗಳು ಮತ್ತು ರೂಢಿಗಳ ಜೊತೆಗೆ ಸೂಕ್ತವೆಂದು ಪರಿಗಣಿಸಲ್ಪಟ್ಟ ನಿರ್ದಿಷ್ಟ ರೂಪದ ಸ್ವಾಯತ್ತತೆ ಮತ್ತು ಎಷ್ಟರಮಟ್ಟಿಗಿನ ಸ್ವಾಯತ್ತತೆ ಸಮಂಜಸವಾದುದು ಎನ್ನುವ ಕಲ್ಪನೆಗಳ ಕುರಿತು ಸಂಸ್ಕೃತಿಯೊಳಗಿನ ಮತ್ತು ಸಂಸ್ಕೃತಿಗಳ ನಡುವಿನ ಭಿನ್ನತೆಗಳು ಚಾಲ್ತಿಯಲ್ಲಿರುತ್ತವೆ (ಜಿಮ್ಮರ್-ಗೆಂಬೆಕ್ ಮತ್ತು ಕೊಲ್ಲಿನ್ಸ್ ೨೦೦೩). ಶ್ರೇಣೀಕೃತ ಸಾಮಾಜಿಕ ರಚನೆಗಳು ಹಾಗೂ ಅಧಿಕಾರಕ್ಕೆ ಗೌರವವನ್ನು ಕೊಡುವ ಪರಸ್ಪರಾವಲಂಬಿತ ಸಮಾಜಗಳಲ್ಲಿ ಸ್ವಾಯತ್ತತೆಯ ಕಲ್ಪನೆಯನ್ನು ಪಾಶ್ಚಾತ್ಯ ಸಮಾಜಗಳ ಸಂದರ್ಭಗಳಿಗಿಂತ ಭಿನ್ನವಾಗಿ ವ್ಯಾಖ್ಯಾನಿಸಲಾಗುವ ಸಾಧ್ಯತೆ ಇದೆ. ಪ್ರಾಯೋಗಿಕ ಸಂಶೋಧನೆಗಳು ಯುರೊ-ಅಮೆರಿಕ ಮತ್ತು ಪಶ್ಚಿಮೇತರ ಜನಸಮುದಾಯಗಳ ನಡುವಿನ ಹದಿಹರೆಯದವರ ಸ್ವಾಯತ್ತತೆಗೆ ಸಂಬಂಧಿಸಿದಂತೆ ಇರುವ ವ್ಯತ್ಯಾಸಗಳನ್ನು ನಿರಂತರವಾಗಿ ತೋರಿಸಿವೆ. ಉದಾಹರಣೆಗೆ, ಯುರೋ-ಅಮೆರಿಕದ ಹದಿಹರೆಯದವರಿಗೆ ಹೋಲಿಸಿದರೆ ಪಶ್ಚಿಮೇತರ ಹದಿಹರೆಯದವರಲ್ಲಿ (ಫಿಲಿಪಿನೊ ಮತ್ತು ಮೆಕ್ಸಿಕನ್) ಸ್ವಾಯತ್ತತೆಗೆ ಮಹತ್ವವನ್ನು ನೀಡದ ಪ್ರವೃತ್ತಿಯಿದ್ದು, ಪೋಷಕರ ಅಧಿಕಾರಕ್ಕೆ ಹೆಚ್ಚು ಮರ್ಯಾದೆ ನೀಡುತ್ತಾರೆ, ಮತ್ತು ಪೋಷಕರೊಂದಿಗೆ ಬಹಿರಂಗವಾಗಿ ಭಿನ್ನಾಭಿಪ್ರಾಯಗಳನ್ನು ಒಲ್ಲದವರಾಗಿರುತ್ತಾರೆ. ಹಾಗೆಯೆ ಯುರೋಪಿನ್ನರಿಗಿಂತ ಭಿನ್ನವಾಗಿ ಅವರು ಸ್ವಾಯತ್ತತೆಯ ಬಗ್ಗೆ ನಂತರದ ನಿರೀಕ್ಷೆಗಳನ್ನು ಸಹ ಹೊಂದಿರುತ್ತಾರೆ (ಫುಲಿಗ್ನಿ ೧೯೯೮).

ಪರಸ್ಪರಾವಲಂಬಿತ ಸಂಸ್ಕೃತಿಗಳಲ್ಲಿ ಹೆಚ್ಚು ಸಮಂಜಸವಾಗಬಹುದಾದ ವಿಭಿನ್ನ ಸ್ವಾಯತ್ತತೆಯ ಮಾದರಿಗಳನ್ನು ವಿವಿಧ ಸಾಂಸ್ಕೃತಿಕ ಸಂಶೋಧನೆಯು ಶೋಧಿಸಿದ್ದು, ಅವನ್ನು ಮಂಡಿಸುತ್ತಿದೆ. ಅದರಂತೆ, ವಿಭಿನ್ನ ಸಂಸ್ಕೃತಿಗಳಲ್ಲಿ ಪ್ರೋತ್ಸಾಹಿಸಬಹುದಾದ ಸ್ವಾಯತ್ತತೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ವ್ಯತ್ಯಾಸಗಳನ್ನು ಮಾಡಲಾಗಿದೆ. ಉದಾಹರಣೆಗೆ, ಸೊಯೆನೆನ್ಸ್ ಮತ್ತು ಇತರರು (೨೦೦೭) ಸ್ವಾತಂತ್ರ್ಯವನ್ನು ಕುರಿತ ಪೋಷಕರ ಪ್ರೋತ್ಸಾಹ [(parental promotion of independence - PI (ಪಿಐ)] ಮತ್ತು ಪೋಷಕ ಬೆಂಬಲಿತ ಸ್ವ-ಇಚ್ಛಾ ಕಾರ್ಯಶೀಲತೆಗಳ [(promotion of volitional functioning - PVF –(ಪಿವಿಎಫ್)] ಪರಿಕಲ್ಪನೆಗಳನ್ನು ಮುಂದಿಟ್ಟಿದ್ದಾರೆ. ಹದಿಹರೆಯದವರು ತಮ್ಮದೇ ಪೋಷಕರು ಮತ್ತು ಇತರ ವಯಸ್ಕರೊಂದಿಗೆ ಹೇಗೆ ಸಂಬಂಧಿಸಿರುತ್ತಾರೆಂಬ ಬಗ್ಗೆ ಇರುವ ವ್ಯಕ್ತಿಗತ ಅಭಿಪ್ರಾಯಗಳಿಗೆ 'ಪಿಐ' ಒತ್ತು ನೀಡುತ್ತದೆ. ಈ ಪರಿಕಲ್ಪನೆಯು ವರ್ತನೆಗಳು ಮತ್ತು ಮೌಲ್ಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವುದರಲ್ಲಿ ಸ್ವಾವಲಂಬನೆಯ ಪ್ರೋತ್ಸಾಹವನ್ನು ಮತ್ತು ಪೋಷಕರೊಂದಿಗಿನ ಸಂಬಂಧದ ಬೆಲೆತೆತ್ತು ಸ್ವಾತಂತ್ರ್ಯವನ್ನು ರೂಢಿಸಿಕೊಳ್ಳುವುದನ್ನು

ಒಳಗೊಂಡಿದೆ. 'ಪಿವಿಎಫ್' ಪರಿಕಲ್ಪನೆಯು ಹದಿಹರೆಯದವರು ತಮ್ಮದೇ ಆದ ನಿರ್ಧಾರಗಳನ್ನು ಹೆಚ್ಚಾಗಿ ಅವಲಂಬಿಸುವ ನಿಟ್ಟಿನಲ್ಲಿ, ಅವರನ್ನು ಬೆಂಬಲಿಸುವ ಮತ್ತು ಸಾಂಸ್ಕೃತಿಕವಾಗಿ ಮಹತ್ವಪೂರ್ಣ ಮೌಲ್ಯಗಳನ್ನು ಅಂತರ್ಗತಿಸಿಕೊಳ್ಳುವುದನ್ನು ಬೆಂಬಲಿಸುವ ವರ್ತನೆಗಳನ್ನು ಪ್ರಸ್ತಾಪಿಸುತ್ತದೆ. ಜಿಮ್ಮರ್-ಗೆಂಬೆಕ್ ಮತ್ತು ಇತರರು (೨೦೧೧) "ಧ್ವನಿ" ಎಂದು ಹೆಸರಿಸಲಾದ ಸ್ವಾಯತ್ತತೆಯ ಮತ್ತೊಂದು ಆಯಾಮವನ್ನು ಮುಂದಿಡುತ್ತಾರೆ. ಸ್ವಾಯತ್ತತೆಯು ಧನಾತ್ಮಕವಾಗಿರುವ ಸಾಮಾಜಿಕ ಸಂಬಂಧಗಳಲ್ಲಿ ವರ್ಧಿಸುತ್ತದೆ ಎನ್ನುವ ವಿಷಯವನ್ನು ಆಧಾರವಾಗಿಟ್ಟುಕೊಂಡು ಇತರರೊಂದಿಗಿನ ಅಂತರ್‌ಕ್ರಿಯೆಗಳಲ್ಲಿ (ಪೋಷಕರು, ಆಪ್ತ ಸಂಬಂಧಗಳಿರುವ ಸಂಗಾತಿಗಳು) ತಮ್ಮ ಅಭಿಪ್ರಾಯಗಳು, ಅವಶ್ಯಕತೆಗಳು ಮತ್ತು ಭಾವನೆಗಳನ್ನು ವ್ಯಕ್ತಗೊಳಿಸುವಲ್ಲಿ ಇರುವ ಸಾಮರ್ಥ್ಯವನ್ನು ಸ್ವಾಯತ್ತತೆಯ ಒಂದು ಅಂಶವಾಗಿ ಲೇಖಕರು ಪರಿಗಣಿಸುತ್ತಾರೆ. ಪಶ್ಚಿಮೇತರ ಸಮಾಜಗಳ ಸಂದರ್ಭದಲ್ಲಿ ಮುಂದುವರಿದ (ಉದಾ: ತೈವಾನ್, ಚೀನಾ) ಸ್ವಾಯತ್ತತೆಯ ಮತ್ತೊಂದು ಮಾದರಿ ಎಂದರೆ ಒಬ್ಬ ವ್ಯಕ್ತಿಯಲ್ಲಿ ಒಟ್ಟಾಗಿ ಅಸ್ತಿತ್ವವನ್ನು ಹೊಂದಿರುವ ಸಾಧ್ಯತೆಯುಳ್ಳ ವ್ಯಕ್ತಿಕೇಂದ್ರಿತವಾಗುವ ಸ್ವಾಯತ್ತತೆ (individuating autonomy-IA) ಮತ್ತು ಸಂಬಂಧಿತ ಸ್ವಾಯತ್ತತೆ (relating autonomy-RI) ಎಂಬ ಸ್ವಾಯತ್ತತೆಯ ಜಂಟಿ ಪ್ರತಿನಿಧಿತ್ವ. ಈ ಮಾದರಿಯು ಸ್ವಾಯತ್ತತೆಯ ಪ್ರಮುಖ ಅಂಶವೆನಿಸಿದ ಸ್ವ ಇಚ್ಛಾ ಸಾಮರ್ಥ್ಯಕ್ಕೆ ಕೊಡುಗೆಯನ್ನು ಸಲ್ಲಿಸುವ ಗ್ರಹಿಕಾ, ಕಾರ್ಯಾತ್ಮಕ, ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನು ಒಳಗೊಂಡಿದೆಯೆಂಬಂತೆ ಸ್ವಾಯತ್ತತೆಯನ್ನು ಪರಿಗಣಿಸುತ್ತದೆ. ವ್ಯಕ್ತಿಕೇಂದ್ರಿತವಾದ ಸ್ವಾಯತ್ತತೆಯು ಸಾಮಾಜಿಕ ನಿರ್ಬಂಧಗಳಿಗೆ ವಿರುದ್ಧವಾಗಿ ನಡೆಯುವ ಸಾಮರ್ಥ್ಯವನ್ನು ಮತ್ತು ವಿಶಿಷ್ಟವಾದ ಅಸ್ಮಿತೆಯನ್ನು ಸಾಧಿಸುವ ಸ್ವ-ಇಚ್ಛಾ ಸಾಮರ್ಥ್ಯವನ್ನು ಒಳಗೊಂಡಿದೆ. ಸಂಬಂಧಿತ ಸ್ವಾಯತ್ತತೆಯು ಸ್ವ-ಸಂಬಂಧವನ್ನು ಇತರರೊಂದಿಗೆ ಅರಸುವ ಸಾಮರಸ್ಯಕ್ಕೆ ಪೂರಕವಾಗಿರುವ, ಪಾರಸ್ಪರಿಕ ಸಂಬಂಧದ ಗುಣವುಳ್ಳ, ಮತ್ತು ಸ್ವಯಂ ಅನ್ನು ಮೀರಿದ ರೀತಿಯಲ್ಲಿ ಅಭಿವ್ಯಕ್ತಗೊಳ್ಳುವ ಸ್ವ ಸಾಮರ್ಥ್ಯವನ್ನು ಪ್ರಸ್ತಾಪಿಸುತ್ತದೆ. 'ಐಎ," ವೈಯಕ್ತಿಕ ಗುರಿಗಳ ಸ್ವೇಚ್ಛಿಕ ಸಾಧನೆ ಹಾಗೂ ವೈಯಕ್ತಿಕತೆಯತ್ತ ಗಮನಹರಿಸುತ್ತದೆ; 'ಆರ್‌ಎ,' ತನ್ನದೇ ಆದ ಅಸ್ಮಿತೆಯ ನಿಟ್ಟಿನಲ್ಲಿ ಪ್ರಮುಖರಾದ ಇತರರ ಅಭಿಪ್ರಾಯಗಳ ಪರ್ಯಾಲೋಚನೆ ಮತ್ತು ಪರಿಗಣಿಸುವಿಕೆಯನ್ನು ಒಳಗೊಳ್ಳುತ್ತದೆಯಾದರೂ ಇದು ಅನುರೂಪತೆ ಮತ್ತು ಅನುಸರಣೆಗಿಂತಲೂ ಭಿನ್ನವಾಗಿದೆ. ಇವೆರಡು ರೂಪಗಳನ್ನು ಪರಸ್ಪರ ಹೆಣೆದುಕೊಂಡಿರುವ ಸಾಮರ್ಥ್ಯಗಳ ನಿಟ್ಟಿನಲ್ಲಿ ಸ್ಥಾಪಿತಗೊಳಿಸಿದ್ದು, ವ್ಯಕ್ತಿಯು ಎರಡನ್ನೂ ಬಳಸಬಹುದಾಗಿದೆ ಮತ್ತು ಆ ಮೂಲಕ ವೈಯಕ್ತಿಕತೆ ಮತ್ತು ಸುಸಂಬದ್ಧತೆಯ ಅಗತ್ಯಗಳೆರಡನ್ನೂ ತೃಪ್ತಿಪಡಿಸಿಕೊಳ್ಳಬಹುದಾಗಿದೆ (ಯೆ ಮತ್ತು ಇತರರು ೨೦೦೭). ಅದೇ ರೀತಿಯಲ್ಲಿ ಮಿಲ್ಲರ್ (೨೦೦೩) ವೈಯಕ್ತಿಕ ಮತ್ತು ಸಾಮಾಜಿಕ ಸ್ವಾಯತ್ತತೆಯ ನಡುವಿನ ಭಿನ್ನತೆಗಾಗಿ ವಾದಿಸುತ್ತಾನೆ. ವೈಯಕ್ತಿಕ ಕರ್ತೃತ್ವವನ್ನು ಸ್ವ-ನಿರ್ದೇಶಿತ ವಿಧಾನದಲ್ಲಿ ಕ್ರಿಯಾಶೀಲವಾಗುವುದಕ್ಕೆ ಸಂಬದ್ಧಗೊಳಿಸಿದರೆ, ಸಾಮಾಜಿಕ ಕರ್ತೃತ್ವವನ್ನು ಸಾಮಾಜಿಕ ಅಗತ್ಯಗಳಿಗೆ ಮತ್ತು ನಿರೀಕ್ಷೆಗಳಿಗೆ ತಕ್ಕ ಕ್ರಿಯಾಶೀಲತೆಯೊಂದಿಗೆ ಸಂಬದ್ಧಗೊಳಿಸಲಾಗಿದೆ ಮತ್ತು ಇದು ಪರಸ್ಪರಾವಲಂಬಿತವಾದ ಸಂಸ್ಕೃತಿಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಸಾಧ್ಯತೆಯಿದೆ.

ಸ್ವಾಯತ್ತತೆಯ ಸಾಂಸ್ಕೃತಿಕ ಅರ್ಥಕ್ಕೆ ಮತ್ತು ಪ್ರಾಧಾನ್ಯತೆಗೆ ನಿಕಟವಾಗಿ ಸಂಬಂಧಿಸಿದ ಚರ್ಚಾಂಶವೆಂದರೆ, ಇದಕ್ಕೆ ಸಂಬಂಧಿಸಿದ ಪೋಷಕರ ಬೆಂಬಲ. ಪಾಶ್ಚಾತ್ಯ ಸಂದರ್ಭಗಳಲ್ಲಿ ಸ್ವಾಯತ್ತತೆಗೆ ಪ್ರಾಧಾನ್ಯತೆ ಇರುವುದರಿಂದ ಸ್ವಾಯತ್ತತೆಯ ಬೆಳವಣಿಗೆಗೆ ಇರುವ ಮಾತಾಪಿತೃಗಳ ಬೆಂಬಲವನ್ನು ಹದಿಹರೆಯದವರಿಗೆ ಸಂಬಂಧಿಸಿದ ಧನಾತ್ಮಕ ಬೆಳವಣಿಗೆಯ ಪರಿಣಾಮಗಳೊಂದಿಗೆ ಸಂಬಂಧಿಸಲಾಗಿದೆ (ಉದಾ: ಸೋಯಿನನ್ಸ್ ಮತ್ತು ಇತರರು ೨೦೦೭). ಆದರೆ, ಪಶ್ಚಿಮೇತರ ಸಂದರ್ಭಗಳಲ್ಲಿ ಸ್ವಾಯತ್ತತೆಗೆ ಇರುವ ಬೆಂಬಲದ ಕಲ್ಪನೆ ಮತ್ತು ಅದರ ವಲಯಗಳು ಭಿನ್ನವಾಗಿರುವ ಸಾಧ್ಯತೆ ಇದೆ. ಪಶ್ಚಿಮೇತರ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳಬಹುದಾದ ಹದಿಹರೆಯದವರ ಬೆಂಬಲವನ್ನು ಕುರಿತ ನಾಲ್ಕು ವಿಧದ ಸ್ವಾಯತ್ತತೆಯ ಅಂಶಗಳನ್ನು

ಮಾರ್ಬೆಲ್ (೨೦೧೪) ಚರ್ಚಿಸುತ್ತಾನೆ. ಅವು ಈ ಕೆಳಗಿನಂತಿವೆ: (೧) ದೃಷ್ಟಿಕೋನವನ್ನು ಸ್ವೀಕರಿಸುವುದು, ಅಂದರೆ ಮಕ್ಕಳ ಅಭಿಪ್ರಾಯವನ್ನು ಗ್ರಹಿಸಿ, ಅವರ ಆಲೋಚನೆ ಮತ್ತು ಭಾವನೆಗಳಿಗೆ ಸಹಾನುಭೂತಿ ತೋರುವುದು, ಮತ್ತು ಆ ಮೂಲಕ ತಾವು ಹೇಳುವುದನ್ನು ಕೇಳಿಸಿಕೊಳ್ಳಲಾಗುತ್ತಿದೆ ಎಂಬ ಭಾವನೆಗಳನ್ನು ಮಕ್ಕಳಲ್ಲಿ ಪೋಷಿಸುವುದರಿಂದ ಅವರು ಪೋಷಕರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವ ಸಾಧ್ಯತೆಯು ಹೆಚ್ಚಾಗುತ್ತದೆ (೨) ಆಯ್ಕೆಯ ಅವಕಾಶ, ಇದು ಮಕ್ಕಳಿಗೆ ಆಯ್ಕೆಯ ಅವಕಾಶದ ಒದಗಣೆಯನ್ನು ಒಳಗೊಳ್ಳುತ್ತದೆ ಮತ್ತು ಹಾಗೆ ಮಾಡುವ ಮೂಲಕ ಮಕ್ಕಳಲ್ಲಿ ತಮ್ಮನ್ನು ಒತ್ತಾಯಿಸಲಾಗುತ್ತಿದೆ ಎನ್ನುವ ಭಾವನೆಯನ್ನು ಕಡಿಮೆ ಮಾಡುತ್ತದೆ ಮತ್ತು ಅವರಲ್ಲಿ ಕರ್ತೃತ್ವವನ್ನು ಪ್ರೋತ್ಸಾಹಿಸುತ್ತದೆ. (೩) ನಿರ್ಧಾರ ಕೈಗೊಳ್ಳಲು ಸಮ್ಮತಿಸುವುದು, ಅಂದರೆ ಪೋಷಕರು ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದರ ಬದಲಿಗೆ, ಕೆಲವೊಮ್ಮೆ ಪೋಷಕರ ಅಧಿಕಾರದ ಮನ್ನಣೆಯಂತಹ ಮೌಲ್ಯಗಳಿಗೆ ವಿರುದ್ಧವಾಗಿದ್ದಾಗ್ಯೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಕ್ಕಳ ಆದಾನ(inputs)ಗಳ ಒಳಗೊಳ್ಳುವಿಕೆ. (೪) ಮುಕ್ತ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು, ಇದು, ಪೋಷಕರು ಮಕ್ಕಳಿಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಮ್ಮತಿಸುವುದನ್ನು ಒಳಗೊಂಡಿದೆ. ಹಾಗೆ ಮಾಡುವ ಮೂಲಕ ತಮ್ಮ ಅಭಿಪ್ರಾಯಗಳನ್ನು ಆಲಿಸಲಾಗುತ್ತಿದೆ ಎನ್ನುವ ಭಾವನೆಯನ್ನು ಅವರಲ್ಲಿ ಮೂಡಿಸಬಹುದಾಗಿದೆ. ಇಲ್ಲಿ ಗಮನಿಸತಕ್ಕ ಅಂಶವೆಂದರೆ, ಈ ಕೆಲವು ಅಂಶಗಳು (ಸ್ವ-ಇಚ್ಛೆಯ ಕಾರ್ಯಗಳು ಎನ್ನುವುದರ ಬದಲಾಗಿ) ಸ್ವಾತಂತ್ರವನ್ನು ಪ್ರೋತ್ಸಾಹಿಸುತ್ತವೆ ಎನ್ನುವ ರೀತಿಯಲ್ಲಿ ಅವುಗಳನ್ನು ಗ್ರಹಿಸಿದಾಗ ಅವು ಪರಸ್ಪರಾವಲಂಬಿತ ಸಂಸ್ಕೃತಿಗಳಲ್ಲಿ ಪರಿಣಾಮಕಾರಿಯಾಗದಿರಬಹುದು. ಏಕೆಂದರೆ, ಈ ಮೊದಲನೆಯದು, ಶ್ರೇಣಿ ವ್ಯವಸ್ಥೆಯ ನಿಟ್ಟಿನ ಗೌರವ ಮತ್ತು ಸಂಬದ್ಧತೆಯ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಸಂಘರ್ಷಕ್ಕಿಳಿಯುವ ಸಾಧ್ಯತೆ ಇದೆ.

ಸಮಾಜೋ-ಸಾಂಸ್ಕೃತಿಕ ಸಂದರ್ಭದ ಜೊತೆಯಲ್ಲಿ ಸಮಾಜೋ-ಆರ್ಥಿಕ ಹಿನ್ನೆಲೆಯೂ ಸಹ ಸ್ವಾಯತ್ತತೆ ಮತ್ತು ಸಂಬಂಧಕ್ಕೆ ಎಷ್ಟರಮಟ್ಟಿಗೆ ಒತ್ತನ್ನು ನೀಡಲಾಗಿದೆ ಮತ್ತು ಪ್ರೋತ್ಸಾಹಿಸಲಾಗಿದೆ, ಹಾಗೂ ಯಾವ ವಿಧದ ಸ್ವಾಯತ್ತತೆಯು ಪ್ರಧಾನವಾಗಿದೆ ಎಂಬುದಕ್ಕೆ ಸಂಬಂಧಿಸಿದೆ. ಉದಾಹರಣೆಗೆ ವಿವಿಧ ಸಮಾಜೋ-ಆರ್ಥಿಕ ಗುಂಪುಗಳಲ್ಲಿ ಮತ್ತು ಸಾಮಾಜಿಕ ಬದಲಾವಣೆಯ ಕಾರಣದಿಂದ (ಗ್ರೀನ್‌ಫೀಲ್ಡ್ ಮತ್ತು ಇತರರು ೨೦೦೩) ಸಮಾಜದೊಳಗೆ ಸಾಮಾಜೀಕರಣದ ಗುರಿಗಳು ಮತ್ತು ಆಚರಣೆಗಳಲ್ಲಿ ವ್ಯತ್ಯಾಸಗಳು ಕಂಡುಬರುವ ಸಾಧ್ಯತೆ ಇದೆ. ಉದಾಹರಣೆಗೆ, ವಿಭಿನ್ನ ಸಮಾಜೋ-ಸಾಂಸ್ಕೃತಿಕ ಮತ್ತು ಸಮಾಜೋ-ಆರ್ಥಿಕ ಸಂದರ್ಭಗಳಾದ್ಯಂತದ (ಜರ್ಮನಿ, ಅಮೆರಿಕ, ಕ್ಯಾಮರೂನ್ ಮತ್ತು ಭಾರತ) ವಿಭಿನ್ನ-ಸಾಂಸ್ಕೃತಿಕ ಸಂಶೋಧನೆಗಳು ತೋರಿಸಿಕೊಟ್ಟಿರುವಂತೆ ಗ್ರಾಮೀಣ ಪ್ರದೇಶಗಳ ತಾಯಂದಿರಿಗಿಂತ ನಗರ ಪ್ರದೇಶದ ಮಧ್ಯಮ ವರ್ಗದ ತಾಯಂದಿರು ಸ್ವಾಯತ್ತತೆಯ ಗುರಿಗಳು ಹೆಚ್ಚು ಮಹತ್ವವಾದವುಗಳು ಎಂದು ಪರಿಗಣಿಸುತ್ತಾರೆ. ಸ್ವಾಯತ್ತತೆಯನ್ನು ಹೆಚ್ಚು ಉಪಯುಕ್ತವಾದ ಸಾಮರ್ಥ್ಯ ಎಂದು ನಗರ ಪ್ರದೇಶದ ಶಿಕ್ಷಿತ ಮಧ್ಯಮ ವರ್ಗವು ಗ್ರಹಿಸಿರುವ ಸಾಧ್ಯತೆ ಹೆಚ್ಚಿರುವುದರಿಂದ ಅದೊಂದು ಸಾಮಾಜೀಕರಣದ ಗುರಿಯಾಗಿ ಮೌಲ್ಯಯುತವಾಗಿದೆ (ಕಾರ್ಟ್ನರ್ ಮತ್ತು ಇತರರು ೨೦೦೭). ಅದೇ ರೀತಿಯಲ್ಲಿ ಚೀನಾದ ಪೋಷಕರು ತೀವ್ರಗತಿಯಲ್ಲಿ ಬದಲಾಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಯಶಸ್ಸನ್ನು ಕಾಣಲು ಸಮಾಜೋ-ಭಾವನಾತ್ಮಕ ಬೆಳವಣಿಗೆಗೆ ಸಂಬಂಧಿಸಿದಂತೆ ಅವರ ಸಮಾಜೀಕರಣದ ಗುರಿಗಳು ಮತ್ತು ರೂಢಿಗಳನ್ನು ಪರಿವರ್ತಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಚೀನಾ ಸಮಾಜದಲ್ಲಿ ನಾಚಿಕೆ ಎನ್ನುವುದು ಸಾಂಪ್ರದಾಯಿಕವಾಗಿ ಮನ್ನಣೆ ಪಡೆದ ಒಂದು ಗುಣವಾಗಿದೆ, ಇದು ವ್ಯಕ್ತಿಗತ ಮುಂತೊಡಗುವಿಕೆ ಮತ್ತು ಸ್ಪರ್ಧಾತ್ಮಕತೆಗೆ ಮಹತ್ವ ನೀಡುವ ಮಾರುಕಟ್ಟೆಗೆ ಅಭಿಮುಖವಾದ ಸಮಾಜಕ್ಕೆ ಅಸಂಗತವಾಗಿದೆ. ಇದರ ಪರಿಣಾಮದಿಂದಾಗಿ ಸ್ವಾಯತ್ತತೆ ಮತ್ತು ಸ್ವಾತಂತ್ರದ ಬೆಳವಣಿಗೆಯನ್ನು ಒಳಗೊಳ್ಳುವ ನಿಟ್ಟಿನಲ್ಲಿ ಪೋಷಕರು ಮಕ್ಕಳನ್ನು ಬೆಳೆಸುವ ಗುರಿಗಳನ್ನು ವಿಸ್ತರಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲಾಗುತ್ತದೆ (ಉದಾ: ವೈಯಕ್ತಿಕ

ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು, ಮನೋದಾರ್ಢ್ಯತೆ). ಇದು ಹೆಚ್ಚುತ್ತಿರುವ ಸ್ಪರ್ಧಾತ್ಮಕ ಪರಿಸರದಲ್ಲಿ ಯಶಸ್ಸನ್ನು ತರುತ್ತದೆ (ಚೆನ್ ಮತ್ತು ಚೆನ್ ೨೦೧೦).

ಹದಿಹರೆಯದ ಸ್ವಾಯತ್ತತೆಯೊಂದಿಗೆ ಪೋಷಕರ ಅಧಿಕಾರದ ಕಲ್ಪನೆಯು ಸೂಕ್ಷ್ಮ ಸಂಬಂಧವನ್ನು ಹೊಂದಿದೆ. ಮಕ್ಕಳ ಪಾಲನೆ ಮತ್ತು ಪಾಲಕರ-ಮಗುವಿನ ಸಂಬಂಧವನ್ನು ಅಧಿಕಾರ-ಸ್ವಾಯತ್ತತೆಯ ಮುಂದುವರಿಕೆಯಂತೆ ನೋಡಬಹುದಾಗಿದೆ. ಸಾಂಸ್ಕೃತಿಕ ಮೌಲ್ಯಗಳು ಅಧಿಕಾರದ ಅರ್ಥವನ್ನು ಪ್ರಭಾವಿಸುತ್ತವೆ ಮತ್ತು ಅದನ್ನು ಪೋಷಕರು ಮತ್ತು ಹದಿಹರೆಯದವರು ಗ್ರಹಿಸುವುದರಲ್ಲಿರುವ ವ್ಯತ್ಯಾಸದ ರೀತಿಗಳನ್ನು ಪರಿಚಯಿಸುತ್ತವೆ. ಸ್ವಾತಂತ್ರ್ಯದ ಮೌಲ್ಯಗಳಿಗೆ ಪ್ರಾಶಸ್ತ್ಯ ಕೊಡುವ ಸಂಸ್ಕೃತಿಗಳಿಗಿಂತ ಪರಸ್ಪರಾವಲಂಬನೆಯನ್ನು ಗೌರವಿಸುವ ಸಂಸ್ಕೃತಿಗಳು ಮಾತಾಪಿತೃಗಳ ಅಧಿಕಾರ ಮತ್ತು ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡುತ್ತವೆ. ಏಷಿಯಾ-ಅಮೆರಿಕದ ಮಾತಾಪಿತೃಗಳು ಯುರೋ-ಅಮೆರಿಕದ ಪೋಷಕರಿಗಿಂತ ಹೆಚ್ಚಾಗಿ ವಿಧೇಯತೆ ಮತ್ತು ಸಹಮತದೆಡೆಗೆ ಗಮನವನ್ನು ಕೇಂದ್ರೀಕರಿಸಿ, ಅಧಿಕಾರಯುತ ಪಾಲನೆಯನ್ನು ಬಳಸುವ ಸಾಧ್ಯತೆ ಇದೆ. ಉದಾಹರಣೆಗೆ, ಚೀನಾದ ಸಮಾಜದಲ್ಲಿ ಕನ್‌ಫ್ಯೂಷಿಯಸ್ ಚಿಂತನೆಗಳಿಗನುಸಾರವಾಗಿ ಮಕ್ಕಳನ್ನು ಬೆಳೆಸುವ ರೂಢಿಗಳು "ತರಬೇತಿ ಕೊಡುವುದು," "ನಿರ್ವಹಣೆ ಮತ್ತು ಪ್ರೀತಿ"ಸುವುದನ್ನು ಸೂಚಿಸುವ ಸ್ಥಳೀಯ ಪರಿಕಲ್ಪನೆಗಳನ್ನು ಆಧರಿಸಿವೆ. ಮ್ಕಕಳ ಬದುಕಿನಲ್ಲಿ ಪೋಷಕರು ತೀವ್ರವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಮತ್ತು ಹೆಚ್ಚು ಕಾಳಜಿ ಮತ್ತು ಆರೈಕೆಯನ್ನು ಮಾಡುತ್ತಾರೆ. ಹಾಗಾಗಿ ಮಾತಾಪಿತೃಗಳ ಅಧಿಕಾರ ಮತ್ತು ನಿಯಂತ್ರಣವನ್ನು, ಮಕ್ಕಳು ದುರ್ವರ್ತನೆಗಿಳಿಯದಂತೆ ತಡೆಯುವ ಸಾಧನಗಳೆಂಬಂತೆ ಗ್ರಹಿಸಲ್ಪಡುವ ರೂಢಿಗಳೊಂದಿಗಿನ ಪಾಲಕರ ಕಾಳಜಿ, ಆರೈಕೆ ಮತ್ತು ತೊಡಗಿಸಿಕೊಳ್ಳುವಿಕೆಯೆಂಬಂತೆ ಅರ್ಥೈಸಲಾಗುತ್ತದೆ (ಚಾವೊ ೧೯೯೪, ೨೦೦೦). ಭಾರತ ಮತ್ತು ಜರ್ಮನಿಯಲ್ಲಿ ಮಾತೃಕ(maternal) ಮತ್ತು ಹದಿಹರೆಯದವರ ಅನುರಾಗವನ್ನು ಹೋಲಿಸಿ ಕೈಗೊಳ್ಳಲಾದ ಒಂದು ಅಧ್ಯಯನದಲ್ಲಿ ಇದೇ ಸ್ವರೂಪವು ಕಂಡುಬಂದಿತು. ಭಾರತದ ತಾಯಂದಿರು ತಮ್ಮ ಪಾಲನೆಯ ವಿಧಾನಗಳಲ್ಲಿ ನಿಯಂತ್ರಣ ಹಾಗೂ ಒಪ್ಪಿಗೆ ಇವೆರಡರ ಸಮತೋಲನವನ್ನು ಪ್ರಕಟಪಡಿಸಿದರು. ಅಲ್ಲದೆ ಭಾರತದ ಹದಿಹರೆಯದವರು ಪಾಲಕರ ನಿಯಂತ್ರಣ ಮತ್ತು ಆರೈಕೆಯನ್ನು ಆರೈಕೆ ಹಾಗು ರಕ್ಷಣೆಯೆಂಬುದಾಗಿ ವ್ಯಾಖ್ಯಾನಿಸಿದರು. ಇದು ಹೋಲಿಕೆಯಲ್ಲಿ ಜರ್ಮನಿಯ ಹದಿಹರೆಯದವರಿಗೆ ತದ್ವಿರುದ್ಧವಾಗಿದ್ದು, ಅವರು ಇದನ್ನು ವಿಪರೀತ ರಕ್ಷಣೆ ಮತ್ತು ಅಡ್ಡಿ ಎನ್ನುವಂತೆ ಗ್ರಹಿಸಿದ್ದರು. ಆದ್ದರಿಂದ, ಪಶ್ಚಿಮದ ಸಮಾಜಗಳಿಗಿಂತ ಭಿನ್ನವಾಗಿ, ಅಧಿಕಾರ ಮತ್ತು ನಿಯಂತ್ರಣಗಳ ಧನಾತ್ಮಕ ಗುಣಲಕ್ಷಣಗಳೊಂದಿಗೆ ಪಾಲಕರ ನಿಯಂತ್ರಣ ಮತ್ತು ಆಪ್ತತೆಯನ್ನು ಸಂಬಂಧಿತವೆಂಬಂತೆ ಗ್ರಹಿಸಲಾಗುತ್ತದೆ (ಆಲ್ಬರ್ಟ್ ಮತ್ತು ಇತರರು ೨೦೦೪).

ಸಾಂಸ್ಕೃತಿಕ ಮೌಲ್ಯಗಳಷ್ಟೆ ಅಲ್ಲದೆ ಸಮಾಜೋ-ಆರ್ಥಿಕ ಹಿನ್ನೆಲೆಯೂ ಸಹ ಪೋಷಕರ ಅಧಿಕಾರ ಮತ್ತು ನಿಯಂತ್ರಣದ ವ್ಯಾಖ್ಯಾನದ ಮೇಲೆ ಪ್ರಭಾವ ಬೀರುತ್ತದೆ. ಅತ್ಯಂತ ಅಪಾಯಕಾರಿ ನೆರೆಹೊರೆಯು ಹೆಚ್ಚು ನಿಯಂತ್ರಣ ಮತ್ತು ಕಡಿಮೆ ಸ್ವಾಯತ್ತತೆಯ ಲಕ್ಷಣವನ್ನು ಹೊಂದಿರುತ್ತದೆ, ಇದನ್ನು ಮಾನಸಿಕ ನಿಯಂತ್ರಣವೆಂಬಂತೆ ಅರ್ಥೈಸುವುದಿಲ್ಲ; ಆದರೆ ಅಷ್ಟೇನೂ ಅಪಾಯಕಾರಿಯಲ್ಲದ ನೆರೆಹೊರೆಯ ಸನ್ನಿವೇಶದಲ್ಲಿ ಅದನ್ನು ಮಾನಸಿಕ ನಿಯಂತ್ರಣವೆಂಬಂತೆ ಅರ್ಥೈಸಲಾಗುತ್ತದೆ (ಮೆಕ್‌ಎಲ್ಹಾನಿ ಮತ್ತು ಅಲ್ಲೆನ್ ಪ್ರಕಟಣೆಯಲ್ಲಿದೆ). ಪೋಷಕರ ಅಧಿಕಾರವನ್ನು ಕಾರ್ಯಗತಗೊಳಿಸಲು ಮತ್ತು ಅದರ ನ್ಯಾಯಸಮ್ಮತತೆಗೆ ಮಗುವಿನ ಕ್ರಿಯಾಶೀಲ ಭಾಗವಹಿಸುವಿಕೆಯ ಅಗತ್ಯವಿದೆಯಲ್ಲದೆ, ಇದು, ನಿರೀಕ್ಷೆಗಳನ್ನು ಕುರಿತ ಪರಸ್ಪರ ಸ್ವೀಕೃತಿಯನ್ನು ಒಳಗೊಂಡಿರುತ್ತದೆ (ಕುಹಾರ್ ಮತ್ತು ರೀಟರ್ ೨೦೧೩). ಅಷ್ಟೇ ಅಲ್ಲ, ಅಧ್ಯಾಯ ೧ರಲ್ಲಿ ಚರ್ಚಿಸಿದಂತೆ ಅಧಿಕಾರವು ಅಂತರ್‌ಕ್ರಿಯಾತ್ಮಕ ಮತ್ತು ದ್ವಿದಿಶಾತ್ಮಕ ಸಂದರ್ಭದಲ್ಲಿ ಚಲಾಯಿಸಲ್ಪಡುತ್ತದೆ. ಹಾಗಾಗಿ, ಪಾಲನೆ ಮತ್ತು ಪೋಷಕ-ಮಗುವಿನ ಸಂಬಂಧದ ಒಳಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಮಗುವಿನ ದೃಷ್ಟಿಕೋನದ ಅಗತ್ಯವಿದೆ.

ಹದಿಹರೆಯದವರ ಸ್ವಾಯತ್ತತೆ ಮತ್ತು ಪೋಷಕರ ಅಧಿಕಾರ ಮತ್ತು ಅದರಲ್ಲಿರುವ ಸಾಂಸ್ಕೃತಿಕ ವಿಭಿನ್ನತೆಗಳು ವಿಶೇಷವಾಗಿ ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯಗಳಿರುವ ಸಂದರ್ಭದಲ್ಲಿ ಮುನ್ನೆಲೆಗೆ ಬರುತ್ತವೆ. ಉದಾಹರಣೆಗೆ, ಹೆಚ್ಚಿನ ವ್ಯಕ್ತಿಗತ ಸ್ವಾಯತ್ತತೆಯುಳ್ಳ ಹದಿಹರೆಯದವರು ಅವರ ಪೋಷಕರೊಂದಿಗೆ ಅಸಮ್ಮತಿಯನ್ನು ವ್ಯಕ್ತಪಡಿಸುವಲ್ಲಿ ಹೆಚ್ಚು ಪ್ರವೃತ್ತರಾಗಿರುತ್ತಾರೆ. ಆ ಮೂಲಕ ಅದು ಪರಸ್ಪರ ಸಂಘರ್ಷದ ಹೆಚ್ಚಿನ ಆವರ್ತನಗಳಿಗೆ ಈಡುಮಾಡುತ್ತದೆ (ಯೆ ಮತ್ತು ಇತರರು ೨೦೦೭). ಮುಂದಿನ ವಿಭಾಗದಲ್ಲಿ ವ್ಯಕ್ತಿಗಳ ನಡುವಿನ ಪರಸ್ಪರ ಭಿನ್ನಾಭಿಪ್ರಾಯಗಳ ವ್ಯಾಖ್ಯಾನಗಳು ಮತ್ತು ಅದರ ಪರಿಹಾರಗಳ ಶೈಲಿಗಳಲ್ಲಿರುವ ಸಾಂಸ್ಕೃತಿಕ ಪರಿವರ್ತನೀಯತೆಗಳನ್ನು ಚರ್ಚಿಸಲಾಗುತ್ತದೆ.

**ವ್ಯಕ್ತಿಗಳ ನಡುವಿನ ಪರಸ್ಪರ ಭಿನ್ನಾಭಿಪ್ರಾಯಗಳು: ಒಂದು ಅನಿವಾರ್ಯ ವಿದ್ಯಮಾನ**

ಪಾಶ್ಚಾತ್ಯ ಸಂದರ್ಭಗಳಲ್ಲಿ ಪೋಷಕ-ಹದಿಹರೆಯದವರ ನಡುವೆ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವ ಹದಿಹರೆಯದವರ ಸ್ವಾಯತ್ತತೆಯ ಬೇಡಿಕೆ ಮತ್ತು ಪಾಲಕರ ಅಧಿಕಾರದ ಸಮರ್ಥನೆಯ ನಡುವಿನ ಬಿಕ್ಕಟ್ಟನ್ನು ಚೆನ್ನಾಗಿ ದಾಖಲಿಸಲಾಗಿದೆ (ಉದಾ: ಗೂಸ್ಸೆನ್ಸ್ ೨೦೦೬; ಸ್ಮೆತನ ೧೯೮೮). ತಮ್ಮ ಪಾಲಕರು ಹಾಗೂ ಕುಟುಂಬದ ನಿಟ್ಟಿನ ಬಿಡುಗಡೆಯ ಮೂಲಕ ಹದಿಹರೆಯದವರು ಸ್ವಾಯತ್ತತೆ ಮತ್ತು ವೈಯಕ್ತಿಕತೆಯಂತಹ ಬೆಳವಣಿಗೆಯ ಗುರಿಗಳನ್ನು ಸಾಧಿಸಲು ಅಂತಹ ಘಟನೆಗಳು ಸಾಧನಗಳಾಗಿವೆ ಎಂದು ಪಾಶ್ಚಾತ್ಯ ದೃಷ್ಟಿಕೋನವು ಪ್ರತಿಪಾದಿಸುತ್ತದೆ. ಪಾಶ್ಚಾತ್ಯ ಸಮಾಜಗಳಲ್ಲಿ ಪಾಲಕ-ಹದಿಹರೆಯದವರ ನಡುವಿನ ಸಂಘರ್ಷವನ್ನು ಹದಿಹರೆಯದ ಪ್ರಧಾನ ಗುರಿಯೆನಿಸಿದ ವೈಯಕ್ತಿಕತೆ ಮತ್ತು ಪ್ರತ್ಯೇಕತೆಯ ಮುನ್ಸೂಚಕವೆಂದು ಪರಿಗಣಿಸಲಾಗಿದೆ. ಅದೇನೆ ಇದ್ದರೂ ವಿವಿಧ-ಸಾಂಸ್ಕೃತಿಕ ಸಂಶೋಧನೆಯು ಹದಿಹರೆಯದವರು-ಪಾಲಕರ ನಡುವಿನ ಭಿನ್ನಾಭಿಪ್ರಾಯಗಳ ಸರ್ವವ್ಯಾಪಕತೆಯನ್ನು ತೋರಿಸಿಕೊಟ್ಟಿದೆ (ಉದಾ: ಶ್ಲೆಗಲ್ ಮತ್ತು ಬ್ಯಾರಿ ೧೯೯೧). ಅಷ್ಟಲ್ಲದೆ, ಸಂಘರ್ಷಗಳನ್ನು ಪರಿಹರಿಸುವ ವಿಧಾನಗಳು ಹದಿಹರೆಯದವರ ಸ್ವಾಯತ್ತತೆಯ ಬಗ್ಗೆ ಇರುವ ಪೋಷಕರ ದೃಷ್ಟಿಕೋನವನ್ನು ತಿಳಿಯಪಡಿಸುತ್ತವೆ. ವ್ಯಕ್ತಿಗತ ಸ್ವಾಯತ್ತತೆಗೆ ಹೆಚ್ಚು ಬೆಲೆ ಕೊಡುವ ಸಂಸ್ಕೃತಿಗಳಲ್ಲಿ ಸಂಘರ್ಷದ ನೇರ ಅಭಿವ್ಯಕ್ತಿಯು ಸರ್ವೇಸಾಮಾನ್ಯವಾಗಿರುತ್ತದೆ, ಆದರೆ ಪರಸ್ಪರ ಸಾಮರಸ್ಯವನ್ನು ಎತ್ತಿ ಹಿಡಿಯುವ ಸಂಸ್ಕೃತಿಗಳಲ್ಲಿ ಸಹಮತಿ, ಸಂವಾದ, ಅಥವಾ ನಿರ್ಲಿಪ್ತತೆ ಮುಂತಾದ ಕಾರ್ಯವಿಧಾನಗಳ ಮೂಲಕ ಸಂಘರ್ಷವನ್ನು ತಪ್ಪಿಸಲಾಗುತ್ತದೆ (ಮಾರ್ಕುಸ್ ಮತ್ತು ಲಿನ್ ೧೯೯೯). ಸಂಬಂಧ ಮತ್ತು ಅಧೀನತೆಗೆ ಒತ್ತು ನೀಡುವ ಪಶ್ಚಿಮೇತರ ಸಮಷ್ಟಿಸ್ವಾಮ್ಯವಾದಿ ಸಮಾಜಗಳಲ್ಲಿ ಹದಿಹರೆಯದಲ್ಲಿ ನಿರೀಕ್ಷಿಸಲಾಗುವ ಸ್ವಾಯತ್ತತೆಯು ಸಂಬಂಧ ಮತ್ತು ಅಧೀನತೆಯ ನಿಟ್ಟಿನ ಸಾಂಸ್ಕೃತಿಕ ದೃಷ್ಟಿಕೋನದೊಂದಿಗೆ ಸಂಘರ್ಷಕ್ಕಿಳಿಯುವ ಕಾರಣ, ಪಾಲಕ-ಹದಿಹರೆಯದವರ ನಡುವೆ ಸಂಘರ್ಷಗಳು ಉಂಟಾಗುವ ಸಾಧ್ಯತೆ ಇದೆ (ಶ್ಲೆಗಲ್ ೨೦೦೧). ಸಾಂಪ್ರದಾಯಿಕ ಪೋಷಕರ ಅಸ್ಮಿತೆಗಳು ಮತ್ತು ನಿರೀಕ್ಷೆಗಳಿಗೆ ವಿರುದ್ಧವಾಗಿರುವ ಭವಿಷ್ಯವಾದಿ ಜಾಗತಿಕ ರೂಢಿಗಳು ಮತ್ತು ಮೌಲ್ಯಗಳು ತಮ್ಮ ಅಸ್ಮಿತೆಯ ಸ್ರೋತಗಳೆಂಬ ನಿಟ್ಟಿನಲ್ಲಿ ಅವುಗಳತ್ತ ಹದಿಹರೆಯದವರು ಹೆಚ್ಚು ಒಲವು ತೋರಿದಾಗ ಕೂಡ ಸಂಘರ್ಷಗಳ ಸಾಧ್ಯತೆ ಇರುತ್ತದೆ (ಸಮೆನಾಂಗ್ ೨೦೧೧). ವಿವಿಧ-ಸಾಂಸ್ಕೃತಿಕ ಸಂಶೋಧನೆಯು ಪಾಲಕ-ಹದಿಹರೆಯದವರ ನಡುವಿನ ಭಿನ್ನಾಭಿಪ್ರಾಯಗಳ ವಿಷಯಗಳಲ್ಲಿನ ಸಾಮ್ಯತೆಗಳನ್ನು ವರದಿಸಿದೆ. ದೈನಂದಿನ ಮನೆ ಕೆಲಸಗಳು, ದೈಹಿಕ ಉಪಸ್ಥಿತಿ, ಶಾಲಾ ಕೆಲಸಗಳು, ಸ್ನೇಹಿತರು ಹಾಗೂ ಸಹೋದರ, ಸಹೋದರಿಯರು ಮತ್ತು ಇತರ ಕುಟುಂಬದ ಸದಸ್ಯರೊಂದಿಗಿನ ಪಾರಸ್ಪರಿಕ ಕ್ರಿಯೆಗಳಂತಹ(ಕಪಾಡಿಯಾ ಮತ್ತು ಮಿಲ್ಲರ್ ೨೦೦೫), ಸಣ್ಣಪುಟ್ಟ ದಿನನಿತ್ಯದ ವಿಷಯಗಳ ಬಗೆಗೆ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ (ಫುಲ್ಗಿನಿ ೧೯೯೮; ಯಾವ್ ಮತ್ತು ಸ್ಮೆತನ ೧೯೯೬, ೨೦೦೩).

ಪಾಲಕರೊಂದಿಗಿನ ಭಿನ್ನಾಭಿಪ್ರಾಯಗಳು ಎಲ್ಲ ಸಮಾಜಗಳಲ್ಲಿನ ಹದಿಹರೆಯದವರ ಜೀವನದ ಲಕ್ಷಣವೆನಿಸಿದ್ದು,, ಅಂತಹ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿರುವ ವಿಷಯಗಳಲ್ಲಿ ಹೆಚ್ಚಿನ ಸಮಾನತೆಯಿದ್ದಾಗ್ಯೂ, ಅವುಗಳ ವ್ಯಾಖ್ಯಾನ ಮತ್ತು ಪರಿಹಾರದಲ್ಲಿ ಸಾಂಸ್ಕೃತಿಕ ಭಿನ್ನತೆಗಳನ್ನು ಕಾಣಬಹುದಾಗಿದೆ. ಮಾರ್ಕುಸ್ ಮತ್ತು ಲಿನ್ (೧೯೯೯) ಪ್ರಕಾರ ವ್ಯಕ್ತಿಗತ ಸ್ವಾಯತ್ತತೆಗೆ ಒತ್ತು ನೀಡುವ ಸಂಸ್ಕೃತಿಗಳು ಭಿನ್ನಾಭಿಪ್ರಾಯಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ವೈರುಧ್ಯಗಳನ್ನು ಮತ್ತು ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಪಡಿಸುವುದನ್ನು ಒಪ್ಪಿಕೊಳ್ಳುತ್ತವೆ. ಹದಿಹರೆಯದ ಅವಧಿಯು ಕಡಿಮೆಯಿದ್ದು, ಯುವಜನರಿಗೆ ವಯಸ್ಕರ ಜವಾಬ್ದಾರಿಗಳನ್ನು ಅಥವಾ ಸವಲತ್ತುಗಳನ್ನು ಬೇಗನೆ ನೀಡುವ ಪಶ್ಚಿಮೇತರ ಸಮಾಜಗಳಲ್ಲಿ ಸಂಘರ್ಷಗಳು ಅದೇ ಸ್ವರೂಪದಲ್ಲಿ ಸಂಗತವಾಗಿರುವುದಿಲ್ಲ (ಶ್ಲೆಗಲ್ ಮತ್ತು ಬ್ಯಾರಿ ೧೯೯೧). ಬಹಳಷ್ಟು ಪಶ್ಚಿಮೇತರ ಸಮಾಜಗಳಲ್ಲಿ, ಮಾನವ ಬೆಳವಣಿಗೆಯ ಆದರ್ಶವು ಹೆಚ್ಚಾಗಿ ಪರಸ್ಪರ ಅವಲಂಬನೆ ಮತ್ತು ಸಂಬಂಧದ ಕಡೆಗೆ ಪ್ರವೃತ್ತವಾಗಿದ್ದು, ಸಮಾಜೀಕರಣದ ಗುರಿಗಳು ಅದಕ್ಕನುಗುಣವಾಗಿ ರೂಪುಗೊಂಡಿರುತ್ತವೆ. ಉದಾಹರಣೆಗೆ, ಲ್ಯಾಟಿನ್ ಮತ್ತು ಚೀನಾ ಸಮಾಜಗಳು ಕುಟುಂಬದ ಸಮಗ್ರತೆಗೆ ಮತ್ತು ಪೋಷಕರ ಅಧಿಕಾರಕ್ಕೆ ಹೆಚ್ಚು ಮಹತ್ವ ನಿಡುತ್ತವೆ, ಹಾಗೂ ವಿಧೇಯತೆ, ಮತ್ತು ಹಿರಿಯರಿಗೆ ಗೌರವ ನೀಡುವಂತಹ ಗುಣಗಳಿಗೆ ಬೆಲೆಕೊಡುತ್ತವೆ (ಫುಲ್ಗಿನಿ ಮತ್ತು ಜಾಂಗ್ ೨೦೦೪; ಕಾರ್ಕ್ಸಿಸ್ಮತ್ತು ಸುಪರ್ ೨೦೦೨; ಮಾರ್ಕುಸ್ ಮತ್ತು ಲಿನ್ ೧೯೯೯; ಫಿನ್ನೆ ಮತ್ತು ಇತರರು ೨೦೦೦). ಅಂತಹ ಸಂದರ್ಭಗಳಲ್ಲಿ ಹದಿಹರೆಯದವರು ಸಂಘರ್ಷದ ಪರಿಸ್ಥಿತಿಗಳಲ್ಲಿ ಸ್ವ-ಪ್ರತಿಪಾದನೆಯಲ್ಲಿ ತೊಡಗುವುದಕ್ಕಿಂತ ಪೋಷಕರೊಂದಿಗಿನ ಸಂವಾದಕ್ಕೆ ಹೆಚ್ಚು ಆದ್ಯತೆ ನೀಡುವುದು ಕಂಡುಬರುತ್ತದೆ.

ಬಹಳಷ್ಟು ಸಂಶೋಧನೆಗಳು ವ್ಯಕ್ತಿಕೇಂದ್ರಿತ ಮತ್ತು ಸಾಮೂಹಿಕ ದೃಷ್ಟಿಕೋನದ ನೆಲೆಯಲ್ಲಿ ಪಾಲಕ-ಹದಿಹರೆಯದವರ ನಡುವಿನ ಸಂಬಂಧಗಳು, ಭಿನ್ನಾಭಿಪ್ರಾಯಗಳು ನಂತರದ ಅದರ ಪರಿಹಾರದಲ್ಲಿನ ವ್ಯತ್ಯಾಸಗಳು ಮತ್ತು ಸಾಮ್ಯತೆಗಳನ್ನು ತುಲನೆ ಮಾಡಿವೆ. ಉದಾಹರಣೆಗೆ, ಫಿನ್ನೆ ಮತ್ತು ಇತರರು (೨೦೦೫) ಅಮೆರಿಕದಲ್ಲಿನ ಯುರೋಪಿಯನ್, ಮೆಕ್ಸಿಕನ್, ಅರ್ಮೇನಿಯನ್, ಮತ್ತು ಕೊರಿಯನ್ನರ ಕುಟುಂಬಗಳಲ್ಲಿ ಕಂಡುಬರಬಹುದಾದ ಊಹಾತ್ಮಕ ಪಾಲಕ-ಹದಿಹರೆಯದ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವಲ್ಲಿನ ಸಾಂಸ್ಕೃತಿಕ ಮೌಲ್ಯಗಳ ಪ್ರಭಾವವನ್ನು ವಿಶ್ಲೇಷಿಸಿದ್ದಾರೆ. ಎಲ್ಲ ಗುಂಪಗಳಲ್ಲೂ ಯುವಜನರ ವಿವೇಚನೆಯು ಸ್ವಾಯತ್ತತೆ ಮತ್ತು ಸಂಬಂಧಪಟ್ಟಿರುವಿಕೆ ಎರಡನ್ನೂ ಸೂಚಿಸುತ್ತದಾದರೂ ಅಮೆರಿಕದ ಯುರೋಪಿಯನ್ನರು ಹೆಚ್ಚು ಸ್ವ-ನಿರ್ದೇಶಿತ ಮತ್ತು ಸ್ವಸಮರ್ಥನೀಯರಾಗಿರುವುದು ಕಂಡುಬರುತ್ತದೆ. ಆದರೆ ಜನಾಂಗೀಯ ಅಲ್ಪಸಂಖ್ಯಾತ ಗುಂಪುಗಳ ಹದಿಹರೆಯದವರು ಹೆಚ್ಚಾಗಿ ಇತರರಿಂದ-ನಿರ್ದೇಶಿತರಾಗಿದ್ದರು, ಹಾಗೂ ಕುಟುಂಬದ ಗೌರವ ಮತ್ತು ಕುಟುಂಬದೊಂದಿಗಿನ ನಿಕಟ ಸಂಬಂಧವನ್ನು ಪ್ರಸ್ತಾಪಿಸಿದ್ದರು. ಅದೇ ರೀತಿಯಲ್ಲಿ, ಪಾಲಕರು ಹದಿಹರೆಯದವರಿಗೆ ನೀಡಿರುವ ಸ್ವಾಯತ್ತತೆಯ ಸಂದರ್ಭದಲ್ಲಿ ಕಂಡುಬರುವ ನಂಬಿಕೆಗಳು, ನಿರೀಕ್ಷೆಗಳು, ಮತ್ತು ಪೋಷಕರೊಂದಿಗಿನ ಸಂಬಂಧಗಳನ್ನು ಕುರಿತು ಅಮೆರಿಕದಲ್ಲಿ ನೆಲೆಸಿದ ಮೆಕ್ಸಿಕೊ, ಚೀನಾ, ಫಿಲಿಪಿನೊ, ಮತ್ತು ಯುರೋಪಿಯನ್ ಮೂಲದವರಿಗೆ ಸಂಬಂಧಿಸಿದಂತೆ ಕೈಗೊಂಡ ಅಧ್ಯಯನದಲ್ಲಿ ಕಂಡುಬಂದಂತೆ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಅಮೆರಿಕದಲ್ಲಿ ನೆಲೆಸಿರುವ ಯುರೋಪೇತರ ಹಿನ್ನೆಲೆಯವರು ತಮ್ಮ ಪೋಷಕರನ್ನು ಬಹಿರಂಗವಾಗಿ ವಿರೋಧಿಸಲಿಲ್ಲ(ಫುಲಿಗ್ನಿ ೧೯೯೮).

ಸಮಷ್ಟಿಸ್ವಾಮ್ಯವಾದಿ(collectivist)ದೃಷ್ಟಿಕೋನವಿರುವ ಸಂಸ್ಕೃತಿಗಳು ಸಹಕಾರ ಮತ್ತು ಸಾಮರಸ್ಯದ ಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುತ್ತವೆ, ಮತ್ತು ಉದ್ಭವಿಸಬಹುದಾದ ಯಾವುದೇ ಬಿಕ್ಕಟ್ಟುಗಳನ್ನು ಕಡಿಮೆಗೊಳಿಸುವತ್ತ ಗಮನಹರಿಸುತ್ತವೆ ಎನ್ನುವುದು ತಿಳಿದಿದೆ. ಆದರೆ ವ್ಯಕ್ತಿಕೇಂದ್ರಿತ ದೃಷ್ಟಕೋನವಿರುವ ಸಂಸ್ಕೃತಿಗಳು ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಿಗೊಳಿಸುವ ಮೂಲಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುತ್ತವೆ. ಹದಿಹರೆಯದ ಸ್ವಾಯತ್ತತೆಯನ್ನು ಹೇಗೆ

ವ್ಯಾಖ್ಯಾನಿಸಲಾಗುತ್ತದೆ ಮತ್ತು ನಿರ್ವಹಿಸಲಾಗುತ್ತದೆ ಎನ್ನುವುದನ್ನು ಪರಿಹರಿಸಿಕೊಳ್ಳುವ ಪ್ರಕ್ರಿಯೆಯು ಪ್ರಕಟಪಡಿಸುತ್ತದೆ (ಕಾಲಿನ್ಸ್ ಮತ್ತು ಸ್ಟೀನ್‌ಬರ್ಗ್ ೨೦೦೬). ಸಮಾಜೋ-ಸಾಂಸ್ಕೃತಿಕ ದೃಷ್ಟಿಕೋನದೊಂದಿಗೆ ಸಮಾಜೋ-ಆರ್ಥಿಕ ಸಂದರ್ಭವೂ ಸಹ ಅಸಮ್ಮತಿಗಳನ್ನು ಪರಿಹರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮತ್ತು ಬಹುಶಃ ಫಲಿತಾಂಶದಲ್ಲೂ ಕೂಡ ಮಧ್ಯಪ್ರವೇಶಿಸುತ್ತದೆ. ಉದಾಹರಣೆಗೆ, ಸಂಬಂಧಪಟ್ಟಿರುವಿಕೆಗೆ ಆದ್ಯತೆ ಕೊಡುವ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿ ಕಂಡುಬರಬಹುದಾದ ಮಾನಸಿಕ ಪರಸ್ಪರಾವಲಂಬನೆಯ ಕೌಟುಂಬಿಕ ಮಾದರಿಯಲ್ಲಿ ಭೌತಿಕ ಅವಲಂಬನೆಯು ದುರ್ಬಲವಾಗಿರಬಹುದಾದರೂ ಮಾನಸಿಕ ಪರಸ್ಪರಾವಲಂಬನೆಯನ್ನು ಉಳಿಸಿಕೊಂಡಿರುವಂತಹ ಕುಟುಂಬಗಳಲ್ಲಿ, ಸಾಮಾಜೀಕರಣದ ಗುರಿಗಳು ಮತ್ತು ದೃಷ್ಟಿಕೋನಗಳು ಸಂಘರ್ಷವನ್ನು ಕಡಿಮೆಗೊಳಿಸುವತ್ತ ಇಲ್ಲವೆ ಅದರ ಪ್ರಕ್ರಿಯೆಯಿಂದ ಹೆಚ್ಚು ಹಾನಿಯಾಗದಂತೆ ಮತ್ತು ಸಂಬಂಧದ ಸಾಮರಸ್ಯವನ್ನು ಕಾಪಾಡಿಕೊಳ್ಳುವ ಹೆಚ್ಚಿನ ಹಿತಾಸಕ್ತಿಯೆಡೆಗೆ ನಿರ್ದೇಶಿಸಲ್ಪಡುತ್ತವೆ (ಕಾಗಿಟ್ಸಿಬಸಿ ೧೯೯೬).

ಬದಲಾಗುತ್ತಿರುವ ಸಮಾಜೋ-ಜನಸಾಂಖ್ಯಿಕೀಯ ಸಂದರ್ಭಕ್ಕೆ ಅನುಗುಣವಾಗಿ ಕುಟುಂಬಗಳು ಸಾಮಾಜೀಕರಣದ ಗುರಿಗಳು ಮತ್ತು ರೂಢಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ನಿರ್ದಿಷ್ಟವಾದ ಸ್ವರೂಪಗಳು ಏಕೆ ವಾಡಿಕೆಯಲ್ಲಿರುತ್ತವೆ ಮತ್ತು ಇವು ಸಂದರ್ಭಗಳ ಏರಿಳಿತಗಳಿಗೆ ಹೊಂದಿಕೊಳ್ಳಲು ಹೇಗೆ ಬದಲಾಗುತ್ತವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಾಮಾಜೀಕರಣದ ಕಾರ್ಯಾತ್ಮಕ ಮತ್ತು ಹೊಂದಾಣಿಕೆಯ ನೆಲೆಗಳು ಮಹತ್ವವಾಗಿರುತ್ತವೆ. ಈ ನಿಟ್ಟಿನಲ್ಲಿ ೩೦ ರಾಷ್ಟ್ರಗಳ ಕುಟುಂಬದ ಮೌಲ್ಯಗಳು, ಪಾತ್ರಗಳು ಮತ್ತು ಜಾಲಗಳನ್ನು ಕುರಿತ ಬೃಹತ್ತಾದ ವಿವಿಧ-ಸಾಂಸ್ಕೃತಿಕ ಅಧ್ಯಯನವು ಸಮಾಜೋ-ಆರ್ಥಿಕ ಬೆಳವಣಿಗೆಗಳು ಕುಟುಂಬದ ಪಾತ್ರಗಳ ಮತ್ತು ಮೌಲ್ಯಗಳನ್ನು ಹೆಚ್ಚು ಸಾಂಪ್ರದಾಯಿಕಗೊಳಿಸದೆ ಸ್ವಾಯತ್ತತೆಯನ್ನು ವೃದ್ಧಿಸಿ, ಶ್ರೇಣೀಕರಣವನ್ನು ದುರ್ಬಲಗೊಳಿಸಿದವು ಎನ್ನುವುದನ್ನು ತೋರಿಸಿಕೊಟ್ಟಿದೆ. ಇದನ್ನು ವಿಶೇಷವಾಗಿ ಮೂಲ ಕುಟುಂಬ(ತಂದೆ, ತಾಯಿ, ಮಗು ಯಾ ಮಕ್ಕಳನ್ನು ಮಾತ್ರ ಒಳಗೊಂಡ)ಗಳಲ್ಲಿ ಗಮನಿಸಲಾಯಿತು. ಪ್ರತಿಕ್ರಿಯಿಸಿದ ಯುವಜನರು (ನಿರ್ದಿಷ್ಟವಾಗಿ) ಪಿತೃವಿನ ಅಧಿಕಾರಯುತ ಮಾದರಿಯನ್ನು ತಿರಸ್ಕರಿಸಿದರು, ಇದು ಶ್ರೀಮಂತವಲ್ಲದ ದೇಶಗಳಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿದ ಶಿಕ್ಷಿತ ಪರಿಸರದಲ್ಲಿ ವ್ಯಕ್ತವಾಗುತ್ತಿರುವ ಸ್ವಾಯತ್ತತೆಯನ್ನು ಸೂಚಿಸುತ್ತದೆ (ಜಾರ್ಗಾಸ್ ಮತ್ತು ಇತರರು ೨೦೦೬). ಹಾಗಾಗಿ ವಿಶೇಷವಾಗಿ ತೀವ್ರ ಬದಲಾವಣೆಗೊಳಗಾಗುತ್ತಿರುವ ಈಗಿನ ಸಂದರ್ಭದಲ್ಲಿ ಹದಿಹರೆಯವನ್ನು ಅರ್ಥ ಮಾಡಿಕೊಳ್ಳಲು ಒಂದು ವಿಶಾಲವಾದ ಸಾಂದರ್ಭಿಕ ದೃಷ್ಟಿಕೋನದ ಅಗತ್ಯವಿದೆ. ಬದಲಾಗುತ್ತಿರುವ ಸಂದರ್ಭಗಳಿಗನುಗುಣವಾಗಿ ಪಾರಂಪರಿಕ ಮೌಲ್ಯವುಳ್ಳ ಗುರಿಗಳನ್ನು ಪುನರ್ವಿಮರ್ಶಿಸಬೇಕಾಗುತ್ತದೆ ಮತ್ತು ಪರಿಷ್ಕರಿಸಬೇಕಾಗುತ್ತದೆ. ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾದ ಸಾಮಾಜಿಕ ಬದಲಾವಣೆಯ ನಮೂನೆಗಳು ಕುಟುಂಬದ ಸಾಮಾಜೀಕರಣದ ಮೇಲೆ ಆಗಿರುವ ಸಂಸ್ಕೃತಿ ಮತ್ತು ಸಂದರ್ಭದ ಅಂತರ್‌ಕ್ರಿಯಾ ಪ್ರಭಾವವನ್ನು ಚರ್ಚಿಸಿವೆ (ಗ್ರೀನ್‌ಫೀಲ್ಡ್ ಮತ್ತು ಇತರರು ೨೦೦೩; ಕಾಗಿಟ್ಸಿಬಾಸಿ ೧೯೯೬). ಸಾಮಾಜಿಕ ರಾಚನಿಕ ಬದಲಾವಣೆಗಳು ಬದುಕಿನ ಶೈಲಿಗಳನ್ನು ಬದಲಿಸುತ್ತವೆ, ಮತ್ತು ಅದರಿಂದಾಗಿ ಕುಟುಂಬದ ಸಂಬಂಧಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಹಾಗಾಗಿ, ಪಾಲಕರು ಹಾಗೂ ಹದಿಹರೆಯದವರಿಬ್ಬರೂ ಬದಲಾಗುತ್ತಿರುವ ಸಾಂದರ್ಭಿಕ ಬೇಡಿಕೆಗಳಿಗೆ ಅತ್ಯಂತ ಸಹಾಯಕವೆನಿಸುವ ಹೊಸ ನಡೆನುಡಿಗಳನ್ನು ಹಾಗೂ ವರ್ತನೆಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ (ಕಾಗಿಟ್ಸಿಬಾಸಿ ಮತ್ತು ಯಾಲಿನ್ ೨೦೦೫). ಅಂತಹ ಮಾದರಿಗಳ ಛಾಯೆಗಳನ್ನು ಭಾರತೀಯ ಸಮಾಜದಲ್ಲಿ ಗಮನಿಸಲಾಗಿದ್ದು, ಅದು ಇತರ 'ಬಹುಸಂಖ್ಯ ಜಗತ್ತಿನ' ('ಮೆಜಾರಿಟಿ ವರ್ಲ್ಡ್') ('ಮೆಜಾರಿಟಿ ವರ್ಲ್ಡ್' ಎನ್ನುವ ಪದವನ್ನು ಕಾಗಿಟ್ಸಿಬಾಸಿ ರೂಪಿಸಿದ್ದು, ಇದು ಜಗತ್ತಿನ ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿರುವ ಪಶ್ಚಿಮೇತರ ಜಗತ್ತನ್ನು ಸೂಚಿಸುತ್ತದೆ) (ಕಾಗಿಟ್ಸಿಬಾಸಿ ೨೦೦೭) ಸಮಾಜಗಳಂತೆ ತೀವ್ರಗತಿಯಲ್ಲಿ ನಗರೀಕರಣಗೊಳ್ಳುತ್ತಿದೆ.

**ಜಾಗತೀಕರಣದ ಸಂದರ್ಭದಲ್ಲಿ ಹದಿಹರೆಯ: "ಕಾಲ ಬದಲಾಗುತ್ತಿದೆ"**

ಜಾಗತೀಕರಣ ಮತ್ತು ಸಾಮಾಜಿಕ ಬದಲಾವಣೆಯ ಪ್ರಸ್ತುತ ಸಂದರ್ಭದಲ್ಲಿ, ಸಮಾಜಗಳು ವಿವಿಧ ಪ್ರಮಾಣದಲ್ಲಿ ಮತ್ತು ರೂಪಗಳಲ್ಲಿ ಪರಿವರ್ತನೆಗೊಳ್ಳುತ್ತಿವೆಯಲ್ಲದೆ, ಹದಿಹರೆಯದವರು ಈ ವಿದ್ಯಮಾನದಿಂದ ಹೊರಗುಳಿಯುವುದು ಸಾಧ್ಯವಿಲ್ಲ. ಈಗಿನ ಹದಿಹರೆಯದವರನ್ನು ಮಿಲೆನಿಯಲ್(ಸಹಸ್ರವರ್ಷದ) ಪೀಳಿಗೆ ಅಥವಾ 'ವೈ' ಪೀಳಿಗೆ ಎಂದು ಕರೆಯಲಾಗುತ್ತದೆ. ಇದು ಅವರು 'ಎಕ್ಸ್' ಪೀಳಿಗೆಯ ನಂತರದವರು (೧೯೬೦ರ ದಶಕದ ಪ್ರಾರಂಭ ಮತ್ತು ೧೯೮೦ರ ದಶಕದ ನಡುವೆ ಜನಿಸಿದ ವ್ಯಕ್ತಿಗಳು) ಎಂದು ಸೂಚಿಸುತ್ತದೆ. ಯಾವುದೇ ನಿಶ್ಚಿತ ದಿನಾಂಕಗಳನ್ನು ನಿರ್ದಿಷ್ಟಗೊಳಿಸದಿದ್ದರೂ ಮಿಲೆನಿಯಲ್ ಎನ್ನುವುದು ೧೯೮೦ರ ದಶಕದ ಪ್ರಾರಂಭ ಮತ್ತು ೨೦೦೦ದ ದಶಕದ ಆರಂಭದ ನಡುವೆ ಜನಿಸಿದ ವ್ಯಕ್ತಿಗಳನ್ನು ಪ್ರಸ್ತಾಪಿಸುತ್ತದೆ. ಮಿಲೆನಿಯಲ್ ಪೀಳಿಗೆಯವರು ಮೂರು ಪ್ರಮುಖ ಲಕ್ಷಣಗಳನ್ನು ಹೊಂದಿರುತ್ತಾರೆ: ಸಮಯ ಮತ್ತು ಸ್ಥಳದ ನಿರ್ಬಂಧಗಳಿಲ್ಲದಂತೆ ವಿಪರೀತ ಸಂಪರ್ಕವನ್ನು ಹೊಂದಿದ ತಾಂತ್ರಿಕವಾಗಿ ಮುಂದುವರಿದ ಡಿಜಿಟಲ್ ಜಗತ್ತಿನಲ್ಲಿ ಬದುಕುತ್ತಿರುವುದು, ಕಮ್ಯುನಿಸ್ಟ್ ಜಗತ್ತಿನ ನಂತರದಲ್ಲಿ ಜನಿಸಿರುವುದು ಮತ್ತು ಪಲ್ಲಟಗೊಳ್ಳುತ್ತಿರುವ ಭೌಗೋಳಿಕ-ರಾಜಕೀಯ ಸಮತೋಲನದಿಂದಾಗಿ ಅನಿಶ್ಚಿತತೆಗೆ ಒಳಗಾಗಿರುವುದು (ಹವಾಸ್ ವರ್ಲ್ಡ್‌ವೈಡ್ ೨೦೧೧). ಈ ಪೀಳಿಗೆಯ ಬಗ್ಗೆ ಸಿದ್ಧಮಾದರಿಗಳು ವಿಫುಲವಾಗಿವೆಯಲ್ಲದೆ, ಸ್ವ-ಹಿತಾಸಕ್ತಿಗಳತ್ತ ಮೂಲಭೂತವಾಗಿ ಗಮನವನ್ನು ಕೇಂದ್ರೀಕರಿಸಿರುವ ನಾನು ಎಂಬ ನಿಟ್ಟಿನ ಪೀಳಿಗೆ ('ಮಿ ಜನರೇಷನ್') ಎಂಬ ಸರ್ವೇಸಾಮಾನ್ಯ ಗ್ರಹಿಕೆಯಿದೆ.

ಇಂದು "ಬದಲಾವಣೆಯೊಂದೆ ಸ್ಥಿರವಾಗಿರುವುದು" ಎನ್ನುವ ಹೆರಾಕ್ಲಿಟಸ್‌ನ ಪ್ರಖ್ಯಾತ ವಿಶೇಷಣವನ್ನು ಬಹುಶಃ "ತೀವ್ರಗತಿಯ ಬದಲಾಣೆಯೊಂದೆ ಸ್ಥಿರವಾಗಿರುವುದು" ಎಂದು ಪರಿಷ್ಕರಿಸಬೇಕಿದೆ. ಬದಲಾವಣೆಯ ಕ್ರಿಯಾಶೀಲ ಮತ್ತು ಕ್ಷಣಿಕತೆಯ ಗುಣಗಳನ್ನು ಕೂಡ ಹೊಸ ತಂತ್ರಜ್ಞಾನದ ಬೆಳವಣಿಗೆಯಲ್ಲಿ ನೋಡಬಹುದಾಗಿದೆ. ಈ ಕೆಳಗಿನವುಗಳು ಕೆಲವು ಉದಾಹರಣೆಗಳಾಗಿವೆ: ಹೊಸ ಅಳವಡಿಕೆಗಳ ಭರವಸೆಗಳೊಂದಿಗೆ ಮತ್ತಷ್ಟು ಮುಂದುವರಿದ ಮಾದರಿಗಳನ್ನು ಉತ್ಪಾದನೆ ಮಾಡಲು ಐ ಫೋನ್ ಮತ್ತು ಸ್ಯಾಮ್ಸಂಗ್‌ಗಳ ಪರಸ್ಪರ ಸ್ಪರ್ದೆಯೊಂದಿಗೆ, ವಿಭಿನ್ನ ಸೆಲ್ ಫೋನ್ ಮಾದರಿಗಳ ಉತ್ಪಾದನೆಯ ಸಡಗರ, ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್‌ಗಳಲ್ಲಿ ನಮ್ಮದು ಅತ್ಯಂತ ಸಪೂರವಾದ, ನುಣುಪಾದ ವಿನ್ಯಾಸ ಎನ್ನುವ ಘೋಷಣೆಯ ನಿಟ್ಟಿನಲ್ಲಿ ಪರಸ್ಪರ ಸ್ಪರ್ಧಿಸುವ ಗಣಕಯಂತ್ರಗಳ ಪ್ರಕಾರಗಳು, ದಿನ ಬಿಟ್ಟು ದಿನ ಹೊಸ ಚಾನೆಲ್‌ಗಳನ್ನು ಪರಿಚಯಿಸುವ ದೂರದರ್ಶನ, ಮತ್ತು ಪ್ರತಿ ನಿಮಿಷವೂ ಸುದ್ದಿ ಮತ್ತು ಅಭಿಪ್ರಾಯಗಳ ಅಸಂಖ್ಯಾತ ಬೈಟ್ಸ್‌ಗಳನ್ನು ಸೃಜಿಸುವ ಅಂತರ್ಜಾಲ. ಹದಿಹರೆಯದವರು ಮತ್ತು ಅವರ ಪೋಷಕರು ಈ ಸ್ಫೋಟದ ನಡುವೆ ಸಿಲುಕಿ, ಕೆಲವೊಮ್ಮೆ ಇಚ್ಛಾಪೂರ್ವಕವಾಗಿ ಮತ್ತೆ ಕೆಲವೊಮ್ಮೆ ಒಲ್ಲದ ಮನಸ್ಸಿನಿಂದ ಎಲ್ಲ ವಿಧದಲ್ಲೂ ಅದನ್ನು ಸ್ವೀಕರಿಸುತ್ತಾರೆ.

ಬೆಳವಣಿಗೆಯ ದೃಷ್ಟಿಯಿಂದ ಹದಿಹರೆಯದ ಅವಧಿಯಲ್ಲಿ ವ್ಯಕ್ತಿಗಳು ವೈವಿಧ್ಯಮಯ ನಂಬಿಕೆಗಳಿಗೆ ಮತ್ತು ಮೌಲ್ಯಗಳಿಗೆ ಹೆಚ್ಚು ಮುಕ್ತವಾಗಿ ತೆರೆದುಕೊಳ್ಳುತ್ತಾರೆ (ಆರ್ನೆಟ್ ೨೦೦೨). ಹೊಸ ನಂಬಿಕೆಗಳಿಗೆ ಮತ್ತು ಮೌಲ್ಯಗಳಿಗೆ ತೆರೆದುಕೊಳ್ಳುವುದು ಹೊಸ ಅವಕಾಶ ಮತ್ತು ಅಪಾಯಗಳೆರಡನ್ನೂ ತರುತ್ತದೆ (ಜೆನ್ಸನ್ ೨೦೧೧). ಜಾಗತೀಕರಣ ಮತ್ತು ಹೆಚ್ಚುತ್ತಿರುವ ಆಧುನಿಕತೆಯು ಯುವಜನರು ಮತ್ತು ಅವರ ಪೋಷಕರ ನಡುವೆ, ವಿಶೇಷವಾಗಿ ಪೋಷಕರ ಅಧಿಕಾರ ಮತ್ತು ಹದಿಹರೆಯದವರ ಸ್ವಾಯತ್ತತೆಗೆ ಸಂಬಂಧಿಸಿದಂತೆ, ಸಾಂಸ್ಕೃತಿಕ ಅಂತರ ಹಾಗೂ ಸಂಘರ್ಷಗಳನ್ನು ಹುಟ್ಟುಹಾಕುವ ಸಾಧ್ಯತೆ ಇದೆ. ವಲಸೆಗಾರರ ಸಂದರ್ಭಗಳಲ್ಲಿ ಇದು ಸ್ಪಷ್ಟವಾಗಿ ಪ್ರಕಟಗೊಡಿದೆ. ಅಲ್ಲಿ ಹದಿಹರೆಯದವರು ವಯಸ್ಕರಿಗಿಂತ ಉತ್ತಮವಾಗಿ ಸಂಸ್ಕೃತಿಗ್ರಹಣದ ಮೂಲಕ ಬದಲಾವಣೆಗೊಳಪಡುತ್ತಾರೆ. ಪಾಲಕರು-ಹದಿಹರೆಯದವರ ನಂಬಿಕೆಗಳ ನಡುವಿನ ಅಂತರವು ಏಷಿಯಾದ ಭಾರತೀಯ ಕುಟುಂಬಗಳಲ್ಲಿನ ಅಲ್ಪ ಪ್ರಮಾಣದ ಕೌಟುಂಬಿಕ ಒಗ್ಗಟ್ಟು ಮತ್ತು ಹೆಚ್ಚು ಸಂಘರ್ಷದ ಮುನ್ಸೂಚನೆಯನ್ನು ನೀಡಿತು (ಜೆನ್ಸನ್ ಮತ್ತು ದೊಸ್ತ್-

ಗಜ್‌ಕಾಮ್ ೨೦೧೫). ಇಂದಿನ ಹದಿಹರೆಯದವರು ಬೆಳವಣಿಗೆಗೆ ಸಂಬಂಧಿಸಿದ ಮತ್ತು ಪರಿವರ್ತನೆಗೊಳ್ಳುತ್ತಿರುವ ಜಗತ್ತಿಗೆ ಮುಖಾಮುಖಿಯಾಗುವ ಮೂಲಕ ಎರಡು ಪದರಗಳ ಸಂಕ್ರಮಣವನ್ನು ಅನುಭವಿಸುತ್ತಿರುವುದರಿಂದ ಜಾಗತೀಕರಣಕ್ಕೆ ಹೆಚ್ಚು ಬಲಿಯಾಗುತ್ತಾರೆ (ಆರ್ನೆಟ್ ೨೦೦೬). ವರ್ಲ್ಡ್ ಯೂತ್ ರಿಪೋರ್ಟ್(೨೦೦೩)ನಲ್ಲಿ ಹೇಳಿರುವಂತೆ, "ಅಂತಿಮವಾಗಿ ಯುವ ಜನಾಂಗದ ಬದುಕು ಎಷ್ಟರಮಟ್ಟಿಗೆ ಬಹು ಆಯಾಮಗಳನ್ನು ಹೊಂದಿದೆಯೊ ಅಷ್ಟರಮಟ್ಟಿಗೆ ಜಾಗತೀಕರಣವು ಸಂಕೀರ್ಣಗೊಂಡಿದೆ. ಇವೆರಡರ ಸಂಯೋಜನೆಯು ಅನಿವಾರ್ಯವಾಗಿ ಸ್ಫೋಟಕ(explosive) ಮತ್ತು ಮತ್ತೇರಿಸುವ ಮಿಶ್ರಣವೊಂದನ್ನು ಸೃಜಿಸುತ್ತದೆ. ಯುವಜನರ ಪರಿವರ್ತನೆಗಳು ವಿವಿಧ ಪ್ರಮಾಣಗಳಲ್ಲಿ ಹೆಚ್ಚು ಅಸೀಮಿತಗೊಳ್ಳುತ್ತವೆ. ಆದರೆ ಆ ಮುಕ್ತತೆಯು ಯುವಜನರ ಬದುಕುಗಳನ್ನು ಹಿಂದೆಂದೂ ಇರದಷ್ಟು ಹೆಚ್ಚಿನ ಸಂಕಷ್ಟಗಳಿಗೆ ಗುರಿಮಾಡುವ ರೀತಿಯಲ್ಲಿ ವೈವಿಧ್ಯಮಯವಾದ ಬೃಹತ್‌ತೊಡಕುಗಳನ್ನು ಪರಿಚಯಿಸುತ್ತಿದೆ" (ಪು. ೩೦೫).

ಮೊರ್ಟಿಮರ್ ಮತ್ತು ಲಾರ್ಸನ್ (೨೦೦೨) ಪ್ರಕಾರ ಹದಿಹರೆಯದ ಪರಿವರ್ತನೆಯು, ವಿಶೇಷವಾಗಿ ನಗರದ ಮಧ್ಯಮ ಮತ್ತು ಉನ್ನತ ಸಾಮಾಜಿಕ ವರ್ಗದ ಪರಿಸರದಲ್ಲಿ ದೀರ್ಘವಾಗುತ್ತಿರುವುದು ಜಾಗತೀಕರಣದ ಮಹತ್ವಪೂರ್ಣ ವಿಕಾಸಾತ್ಮಕ ಪರಿಣಾಮವೆನಿಸಿದೆ. ಸಮಾಜಗಳಾದ್ಯಂತ ಹದಿಹರೆಯದವರು ಕೇವಲ ಮೂಲಭೂತ ಸ್ನಾತಕ ಪದವಿಯನ್ನು ಪಡೆಯುವುದಕ್ಕೆ ಮಾತ್ರವಲ್ಲದೆ, ಸ್ನಾತಕೋತ್ತರ ಪದವಿಗಳನ್ನು ಪಡೆಯಲು ಅಥವಾ ಸಾಕಷ್ಟು ಆರ್ಥಿಕ ಲಾಭವನ್ನು ತಂದುಕೊಡುವ ವಾಂಛಿತ ಉದ್ಯೋಗಗಳಿಗೆ ಸಿದ್ಧವಾಗುವ ನಿಟ್ಟಿನಲ್ಲಿ, ಮೌಲ್ಯವರ್ಧಿತ ಪರಿಣಿತಿಯನ್ನು ಪಡೆಯಲೂ ಸಹ ಔಪಚಾರಿಕ ಶಿಕ್ಷಣದಲ್ಲಿ ಹೆಚ್ಚು ವರ್ಷಗಳನ್ನು ಕಳೆಯುತ್ತಾರೆ. ಪೂರ್ಣಾವಧಿ ಉದ್ಯೋಗಕ್ಕೆ ಪ್ರವೇಶ, ಮದುವೆಯ ವಯಸ್ಸು, ಮತ್ತು ಮಕ್ಕಳನ್ನು ಪಡೆದುಕೊಳ್ಳುವುದು ಇವೆಲ್ಲವೂ ವಿಳಂಬವಾಗುತ್ತವೆ. ಈ ಬದಲಾವಣೆಗಳು "ಉದಯೋನ್ಮುಖ ಪ್ರೌಢಾವಸ್ಥೆ"ಯ ಸೃಷ್ಟಿಗೆ ಕಾರಣವಾಗಿವೆ, ಸಂಬಂಧಗಳು ಮತ್ತು ಲೋಕದೃಷ್ಟಿಗಳೊಂದಿಗಿನ ಶೋಧ ಮತ್ತು ಪ್ರಯೋಗದ ಅಸ್ಥಿರತೆಯ ಅವಧಿಯೂ ಹೌದು ಎಂಬುದಾಗಿ ಇದನ್ನು ವ್ಯಾಖ್ಯಾನಿಸಲಾಗಿದೆ(ಅರ್ನೆಟ್ ೨೦೦೦). "ಒಟ್ಟಾರೆಯಾಗಿ (ಆದ್ದರಿಂದ), ಇಪ್ಪತ್ತೊಂದನೆ ಶತಮಾನದ ಉದಯವನ್ನು ಯುವಜನಾಂಗಕ್ಕೆ ಅತ್ಯಂತ ಒಳ್ಳೆಯ ಹಾಗೂ ಕೆಟ್ಟ ಕಾಲವೆಂದು ಹಾಗೂ, ಅದನ್ನು ವಿಪತ್ತುಸೂಚಕ ಪ್ರವೃತ್ತಿಗಳು ಮತ್ತು ಹೊಸ ಅವಕಾಶಗಳ ಕಾಲವೆಂತಲೂ ಪರಿಗಣಿಸಬಹುದು" (ಮೊರ್ಟಿಮರ್ ಮತ್ತು ಲಾರ್ಸನ್ ೨೦೦೨, ಪು. ೧೪).

ಯುವಜನಾಂಗವು ಬದುಕುತ್ತಿರುವ ಇಂದಿನ ಜಗತ್ತು ಹಿಂದಿನ ಪೀಳಿಗೆಗಳ ಜಗತ್ತಿಗಿಂತ ಅಗಾಧವಾಗಿ ಭಿನ್ನವಾಗಿರುವುದರಿಂದ ಈಗಿನ ಕಾಲದಲ್ಲಿ "ದೊಡ್ಡವರಾಗುವುದು" ಒಂದು ವಿಶಿಷ್ಟವಾದ ಅನುಭವವಾಗಿದೆ. ಜಾಗತೀಕರಣ, ತಾಂತ್ರಿಕ ಪ್ರಗತಿಗಳು ಮತ್ತು ಆರ್ಥಿಕ ಬೆಳವಣಿಗೆ (ನುಜೆಂಟ್ ೨೦೦೬), ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಶಕ್ತ ಬದಲಾವಣೆಯು ಈಗಿನ ಕಾಲದ ಭಿನ್ನತೆಯ ಪ್ರಮುಖ ಅಂಶಗಳಾಗಿವೆ. ಹದಿಹರೆಯದವರ ದಿನನಿತ್ಯದ ಬದುಕು, ಅವರು ಎದುರಿಸುವ ಸಂಕೀರ್ಣತೆಗಳನ್ನು ಮತ್ತು ಸವಾಲುಗಳನ್ನು ದ್ವಿಗುಣಗೊಳಿಸುವ ವಿಶಿಷ್ಟ ಸಂಕೇತಗಳು, ಊಹೆಗಳು, ಗುರಿಗಳು, ಮತ್ತು ಅರ್ಥಗಳನ್ನೊಳಗೊಂಡ ಬಹು ವಿಧದ ಜಗತ್ತುಗಳನ್ನು (ಉದಾ: ಸಾಂಸ್ಕೃತಿಕ, ಡಿಜಿಟಲ್, ಪೀಳಿಗೆಯ) ಹೆಚ್ಚಾಗಿ ಒಳಗೊಂಡಿದೆ (ಲಾರ್ಸನ್ ಮತ್ತು ಇತರರು ೨೦೧೨).

ವಿಶೇಷವಾಗಿ ಮೂರು ರೀತಿಯ ಸಾಮಾಜಿಕ ಬದಲಾವಣೆಗಳ ಪ್ರವೃತ್ತಿಗಳು ಹದಿಹರೆಯದವರ ಮೇಲೆ ಪರಿಣಾಮ ಬೀರುತ್ತವೆ. ಮೊದಲನೆಯದು ಆರ್ಥಿಕತೆಯ ಜಾಗತೀಕರಣ, ವಿಸ್ತಾರಗೊಳ್ಳುತ್ತಲೆ ಇರುವ ಅಂತರ್ಜಾಲದಿಂದ ವ್ಯಕ್ತವಾಗುತ್ತಿರುವ ಸಂಪರ್ಕ ತಾಂತ್ರಿಕತೆಯ ಪ್ರಗತಿ, ಜಗತ್ತಿನ ಎಲ್ಲ ದೇಶಗಳಲ್ಲೂ ವ್ಯಾಪಕವಾಗುತ್ತಿರುವ ದೇಶದೊಳಗೆ ಮತ್ತು ಹೊರಗೆ ಕಂಡುಬರುತ್ತಿರುವ ಪ್ರಾದೇಶೀಕ ಚಲನೆ. ಇದರ ಪರಿಣಾವಾಗಿ ಭವಿಷ್ಯದ ಉದ್ಯೋಗಗಳಿಗೆ ಸಿದ್ಧರಾಗುವುದು ಅತ್ಯಂತ ಅನಿಶ್ಚಿತವಾಗುತ್ತಿದ್ದು, ಶಾಲೆಯಿಂದ ಉದ್ಯೋಗದ ನಿಟ್ಟಿನ ಪರಿವರ್ತನೆಯು ಹೆಚ್ಚು ಕ್ಲಿಷ್ಟವಾಗುತ್ತಿದೆ. ಹೆಚ್ಚುತ್ತಿರುವ ವ್ಯಕ್ತೀಕರಣ ಮತ್ತು ಬದುಕಿನ ಪಥಗಳು ಬಹುಮುಖಿ

ಸ್ವರೂಪವನ್ನು ಪಡೆದುಕೊಳ್ಳುತ್ತಿರುವುದು ಮತ್ತು ಬೆಳವಣಿಗೆಯ ಗುರಿಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ವ್ಯಾಖ್ಯಾನಗಳಲ್ಲಾಗುತ್ತಿರುವ ನೇರ ಪರಿಣಾಮದ ನಮ್ಯತೆಯು ಎರಡನೆಯ ಅಭಿವ್ಯಕ್ತಿಯೆನಿಸಿದೆ. ಇದರ ಪರಿಣಾಮವಾಗಿ ಭವಿಷ್ಯದ ಪಾತ್ರಗಳು ಮತ್ತು ಬದುಕಿನ ನಿರ್ಧಾರಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ಮಾರ್ಗದರ್ಶನಗಳ ಕೊರತೆ ಇದೆ. ಮೂರನೆಯ ಪ್ರವೃತ್ತಿಯೆಂದರೆ, ಇಳಿಮುಖವಾಗುತ್ತಿರುವ ಫಲವತ್ತತೆಯ ಪ್ರಮಾಣ ಮತ್ತು ವಲಸೆಯ (ಬರುವ ಮತ್ತು ಹೋಗುವ) ಸ್ವರೂಪಗಳಂತಹ ಜನಸಾಂಖ್ಯಿಕ ಬದಲಾವಣೆಗಳು (ಪಿಂಕ್ವಾಟ್ ಮತ್ತು ಸಿಲ್‌ಬರಿಸೆನ್ ೨೦೦೫). ಜಾಗತೀಕರಣವು ಲಿಂಗ ಸಮಾನತೆಯ ಮೇಲೂ ಪರಿಣಾಮ ಬೀರುತ್ತಿದೆಯಲ್ಲದೆ, ಲಭ್ಯವಿರುವ ಅವಕಾಶಗಳನ್ನು ಪ್ರಭಾವಿಸುತ್ತಿದೆ. ಮೊದಲನೆಯದಾಗಿ ಜಾಗತಿಕ ಅರ್ಥಿಕತೆಯು ಮಾಹಿತಿಯನ್ನು, ತಾಂತ್ರಿಕತೆಯನ್ನು ಮತ್ತು ಸೇವೆಗಳನ್ನು ಆಧರಿಸಿರುವುದರಿಂದ ಜಗತ್ತಿನ ದೇಶಗಳಾದ್ಯಂತದ ಕುಟುಂಬಗಳಲ್ಲಿ, ಭಾರತವೂ ಒಳಗೊಂಡಂತೆ, ತಮ್ಮ ಆರ್ಥಿಕ ಹಿತಾಸಕ್ತಿಯ ದೃಷ್ಟಿಯಿಂದ ಹುಡುಗಿಯರನ್ನು ವಿದ್ಯಾವಂತರನ್ನಾಗಿಸಿದಲ್ಲಿ, ಅದರಿಂದ ಅವರು ಜಾಗತಿಕ ಆರ್ಥಿಕತೆಯ ಲಾಭವನ್ನು ಪಡೆಯುವಂತಾಗುತ್ತದೆ ಎನ್ನುವ ನಂಬಿಕೆ ಹೆಚ್ಚಾಗುತ್ತಿದೆ. ಎರಡನೆಯದಾಗಿ, ಜಗತ್ತಿನ ದೇಶಗಳ ಲಿಂಗ ತಾರತಮ್ಯವನ್ನು ಸರಿಪಡಿಸಬೇಕು ಮತ್ತು ಲಿಂಗ ಸಮಾನತೆಯನ್ನು ಹೆಚ್ಚಿಸಬೇಕು ಎನ್ನುವ ಅಂತಾರಾಷ್ಟ್ರೀಯ ಒತ್ತಡವು ಹೆಚ್ಚುತ್ತಿದೆ (ಜೆನ್ಸನ್ ಮತ್ತು ಅರ್ನೆಟ್ ೨೦೧೨). ಎರಡನೆಯದು ಸರಕಾರಗಳ ಶಿಕ್ಷಣ ಕಾರ್ಯಕ್ರಮಗಳು ಮತ್ತು ನೀತಿಯ ಮೇಲೆ ಪ್ರಭಾವ ಬೀರುತ್ತಿದ್ದು ಪ್ರಗತಿಶೀಲವಾಗಿ ಹೊಸ ಸಂಭಾವ್ಯತೆಗಳು ಹದಿಹರೆಯದ ಹುಡುಗಿಯರಿಗೆ ಹೆಚ್ಚಾಗಿ ದೊರೆಯುತ್ತಿವೆ.

ಜಾಗತೀಕರಣವು ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳೆರಡನ್ನೂ ಒಳಗೊಂಡಿದೆ (ಸ್ಕೊಲ್ಟೆ ೨೦೦೨). ಜಾಗತಿಕ ಗ್ರಾಹಕ ಹಿತರಕ್ಷಣಾವಾದ ಮತ್ತು ಜಾಗತಿಕ ಮಾಧ್ಯಮಗಳು ಯುವಜನರಿಗೆ ಹೆಚ್ಚು ಸಂಬಂಧಪಟ್ಟಿವೆ, ಮತ್ತು ಸ್ಥಳೀಯ ಸಂಧರ್ಭಗಳಿಗುಣವಾಗಿ ಅವರು ತಮ್ಮದೇ ಆದ ರೂಪಗಳನ್ನು ರೂಪಿಸಿಕೊಂಡಾಗ್ಯೂ, ಅವರು ಅಷ್ಟೇ ಪ್ರಮಾಣದಲ್ಲಿ ಅದರಿಂದ ಪ್ರಭಾವಿತಗೊಂಡಿದ್ದಾರೆ. ಉದಾಹರಣೆಗೆ, ಭಾರತದ ಬರೋಡಾದಲ್ಲಿ ಪ್ರಣಯ ಸಂಬಂಧಗಳ ನಡವಳಿಕೆಗಳ ಕುರಿತಾಗಿ ನಡೆಸಿದ ಇತ್ತೀಚಿನ ಅಧ್ಯಯನದಲ್ಲಿ ಯುವಕರು ಹಾಗೂ ಯುವತಿಯರು ಅಮೆರಿಕದ ದೂರದರ್ಶನದ ಪ್ರದರ್ಶನಗಳಿಂದ ಪ್ರಭಾವಿತರಾಗಿರುವುದನ್ನು ವರದಿಸಿದ್ದಾರೆ (ಅತಾವಳೆ ಮತ್ತು ಇತರರು ೨೦೧೬). ಜಾಗತಿಕ ಮಾದರಿಗಳು (ಪಾಶ್ಚಾತ್ಯ ಎಂದು ಓದಿಕೊಳ್ಳಿ) ಆಕರ್ಷಕವಾಗಿದ್ದು, ಗ್ರಾಹಕರ ಮಾರುಕಟ್ಟೆಗಳು ಬಟ್ಟೆಗಳು, ಸಂಗೀತ, ಚಲನಚಿತ್ರಗಳ ಜಾಗತಿಕ ಪ್ರಕಾರಗಳನ್ನು ಮಾರಾಟ ಮಾಡುವಲ್ಲಿ ಯುವಜನರನ್ನು ಗುರಿಯಾಗಿಸಿಕೊಳ್ಳುತ್ತವೆ. ಹೀಗೆ ಜಾಗತಿಕ ಪ್ರಭಾವಗಳು ಸ್ಥಳೀಯ ಪ್ರಭಾವಗಳನ್ನು ಹಿಂದಿಕ್ಕುತ್ತವೆ. ಜಗತ್ತಿನಾದ್ಯಂತ ಯುವಜನಾಂಗದ ಲಕ್ಷಣವೆನಿಸುತ್ತಿರುವ ಮಿಶ್ರ ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಅರ್ಥ ಮಾಡಿಕೊಳ್ಳಲು ಹಾಗೂ ವಿವರಿಸಲು "ಜಾಗತಿಕ ಯುವ ಸಂಸ್ಕೃತಿ" ಎಂಬ ವಿಷಯಾತೀತ ವಿಭಾಗದ ಪದಗುಚ್ಛವನ್ನು ಪದೇಪದೇ ಬಳಸಲಾಗುತ್ತಿದೆ. ಸ್ಥಳೀಯ ಹಾಗೂ ಜಾಗತಿಕ ಪ್ರಭಾವಗಳು ಪರಸ್ಪರ ಅಂತರ್‌ಕ್ರಿಯೆಗಳನ್ನು ನಡೆಸುವ ಹಾಗೂ ಯುವಜನರ ಜೀವನ ಶೈಲಿಗಳಲ್ಲಿ ಅವು ಪ್ರತಿಬಿಂಬಿತಗೊಳ್ಳುವ ಸಂದರ್ಭವೊಂದನ್ನು ವಿಶೇಷವಾಗಿ ನವ ಮಾಧ್ಯಮ ತಾಂತ್ರಿಕತೆಗಳು ಸೃಷ್ಟಿಸುತ್ತಿವೆ (ಕಹ್ನ್ ಮತ್ತು ಕೆಲ್ನರ್ ೨೦೦೬).

ಜಾಗತೀಕರಣವು ಸರ್ವಸಮಾನವಾಗಿ, ಜೀವನದ ಎಲ್ಲ ವಲಯಗಳಲ್ಲೂ ಬದಲಾವಣೆಗಳನ್ನು ತರುತ್ತಿದೆ. ಹದಿಹರೆಯದವರ ಸಾಂಸ್ಕೃತಿಕ ಅಸ್ಮಿತೆಗೆ ಹೆಚ್ಚು ಸಂಗತವಾದ ಮೂರು ವಿಷಯಗಳನ್ನು ಅಂದರೆ, ಭಾಷೆ, ಆಹಾರ ಕ್ರಮ, ಮತ್ತು ಮಾಧ್ಯಮ, ಮತ್ತು ಅದರಲ್ಲಿರುವ ಜಾಗತಿಕ ಬದಲಾವಣೆಗಳನ್ನು ಜೆನ್ಸನ್ (೨೦೧೧) ಚರ್ಚಿಸುತ್ತಾನೆ. ಇಂದಿನ ಕಾಲದಲ್ಲಿ ಭಾರತವನ್ನೂ ಒಳಗೊಂಡು, ಜಗತ್ತಿನಾದ್ಯಂತ ಆಂಗ್ಲಭಾಷೆಯ ಜನಪ್ರಿಯತೆಯು ತುಟ್ಟತುದಿಗೆ ಮುಟ್ಟಿದೆ. ವಸಾಹತುಷಾಹಿ ಇತಿಹಾಸದ ಹಿನ್ನೆಲೆಯಲ್ಲಿ ಆಂಗ್ಲಭಾಷೆಯು ಕೆಲವು ವೇಳೆ ಪ್ರಗತಿಪರ ಮತ್ತು "ದೇಶಿ" (ಸಾಂಪ್ರದಾಯಿಕ, ಸ್ಥಳೀಯ) ಎಂಬ ನಿಟ್ಟಿನ ವಿಭಾಜಕವೆನಿಸಿದ್ದು, ಭಾರತದಲ್ಲಿ ಸದಾ ಅದಕ್ಕೆ ಮಹತ್ವವನ್ನು ನೀಡಲಾಗಿದೆ. ಇಂಗ್ಲಿಷಿನಲ್ಲಿ ಮಾತನಾಡುವುದು ಆಧುನಿಕತೆಯನ್ನು ಸೂಚಿಸುತ್ತದೆಯಲ್ಲದೆ, ಯುವಜನಾಂಗವು ಇದರ

ಬಗ್ಗೆ ವಿಶೇಷವಾಗಿ ಪ್ರಜ್ಞಾಪೂರ್ವಕವಾಗಿದೆ. ಆಂಗ್ಲಭಾಷಾ ತರಗತಿಗಳ ತ್ವರಿತ ವೃದ್ಧಿ ಹಾಗೂ ತಮ್ಮ ಮಕ್ಕಳನ್ನು ಆಂಗ್ಲಮಾಧ್ಯಮ ಶಾಲೆಗಳಿಗೆ ಕಳುಹಿಸಲು ಪೋಷಕರು ತೋರಿಸುತ್ತಿರುವ ಆಸಕ್ತಿಯಲ್ಲಿ ಆಂಗ್ಲಭಾಷೆಗೆ ಇರುವ ಅತಿಯಾದ ಮಹತ್ವವನ್ನು ಗಮನಿಸಲಾಗಿದೆ. ಸ್ವಂತ ಭಾಷೆಯಿಂದ ವಿಮುಖರಾಗುವುದು ಮತ್ತು ಮಿಶ್ರ ಭಾಷೆಯನ್ನು ಸಮಾನಾಂತರವಾಗಿ ಅಳವಡಿಸಿಕೊಳ್ಳುವುದು ಭಾರತದ ಸಂದರ್ಭದಲ್ಲಿ ಸಾಕಷ್ಟು ನಿಚ್ಚಳವಾಗಿದೆ. ಆಹಾರವು ಮತ್ತೊಂದು ಪ್ರಮುಖ ಕ್ಷೇತ್ರವಾಗಿದ್ದು, ಮ್ಯಾಕ್‌ಡೊನಾಲ್ಡೀಕರಣವು, ಜಗತ್ತಿನಾದ್ಯಂತ ಹೆಚ್ಚಿನ ಅಥವಾ ಕಡಿಮೆ ಪ್ರಮಾಣದಲ್ಲಿ ಅನುಭವಕ್ಕೆ ಬರುತ್ತಿದೆ. ಅದೇ ಸಮಯದಲ್ಲಿ ಅಡುಗೆಯ ವಿಧಾನದ ಗತಿವಿಧಿಯು ದ್ವಿದಿಶಾತ್ಮಕ(bidirectional)ವಾಗಿದೆ. ಜಗತ್ತಿನ ಬಹುಭಾಗಗಳಲ್ಲಿ ಭಾರತದ ಪಲ್ಯ ಮತ್ತು ಸಮೋಸಾಗಳ ಜನಪ್ರಿಯತೆಯ ವೃದ್ಧಿಯು ಇದಕ್ಕೆ ಉದಾಹರಣೆ. ಹೀಗೆ ಹದಿಹರೆಯದವರು ಎಲ್ಲ ವಿಧದ ಅಡುಗೆಯ ವಿಧಾನಗಳನ್ನು ಕಲಿಯಲು ಅವಕಾಶವಿದೆ. ಇದು ಅವರ ಆರೋಗ್ಯದ ಮೇಲೆ ಧನಾತ್ಮಕ ಅಥವಾ ಋಣಾತ್ಮಕ ಪರಿಣಾಮ ಬೀರಬಹುದು. ಜಾಗತಿಕ ಪರಿಣಾಮದ ನಿಟ್ಟಿನಲ್ಲಿ ಪ್ರವರ್ಧಿಸುತ್ತಿರುವ ಸಶಕ್ತ ವಲಯವೆಂದರೆ ಮಾಧ್ಯಮದ ಸ್ಫೋಟ. ಭಾರತದಲ್ಲಿ ಸಂಪರ್ಕ ತಂತ್ರಜ್ಞಾನದ ವ್ಯಾಪಕತೆಯು ಪ್ರಭಾವಶಾಲಿಯಾದುದು. ಅಂತರ್ಜಾಲದ ಲಭ್ಯತೆಯು ವಿಸ್ತರಿಸುತ್ತಿದೆ ಮತ್ತು ಸೆಲ್ ಫೋನ್‌ಗಳ ಉಪಯೋಗವು ನಗರ, ಗ್ರಾಮೀಣ ಪ್ರದೇಶಗಳಷ್ಟೇ ಅಲ್ಲದೆ, ಕೆಲವು ಬುಡಕಟ್ಟು ಪ್ರದೇಶಗಳಿಗೂ ಹರಡುತ್ತಿದೆ. ಫೇಸ್‌ಬುಕ್ ಮತ್ತು ವಾಟ್ಸಾಪ್‌ಗಳಂತಹ ಸಾಮಾಜಿಕ ಜಾಲತಾಣಗಳು ಹದಿಹರೆಯದವರಲ್ಲಿ ಅತ್ಯಂತ ಜನಪ್ರಿಯವಾಗಿವೆ (ವಾಸ್ತವದಲ್ಲಿ ಭಾರತದಲ್ಲಿ ಇದು ಎಲ್ಲ ವಯಸ್ಸಿನವರಿಗೂ ಅನ್ವಯಿಸುತ್ತದೆ). “ಹೆ, ನೀನು ವಾಟ್ಸಾಪ್‌ನಲ್ಲಿದಿಯಾ?” ಎಂಬ ಪ್ರಶ್ನೆ ಅಥವಾ “ನನಗೆ ವಾಟ್ಸಾಪ್ ಮಾಡು” ಎಂಬ ಮಾತುಗಳು ಯುವಜನರ ಮಾತುಕತೆಗಳಲ್ಲಿ ಸರ್ವೇಸಾಮಾನ್ಯವಾಗಿವೆ.

ಹೀಗೆ ಹದಿಹರೆಯದವರು ಜಾಗತಿಕ ಸಂಸ್ಕೃತಿಗಳನ್ನು ವಾಡಿಕೆಯಾಗಿ ರೂಢಿಸಿಕೊಂಡಿದ್ದು, ಅವು ಅವರ ದಿನನಿತ್ಯದ ಬದುಕಿನಲ್ಲಿ ಪರಿಣಾಮ ಬೀರುವ ಸಾಧ್ಯತೆಯಿದೆ. ಜೆನ್ಸನ್ (೨೦೧೧) ಹೇಳುವಂತೆ ಇಂದಿನ ಕಾಲದಲ್ಲಿ ಸಾಂಸ್ಕೃತಿಕ ಅಸ್ಮಿತೆಗಳನ್ನು ಬೆಳೆಸಿಕೊಳ್ಳುವುದು, “...ಸ್ಥಳೀಯ ಹಾಗೂ ಜಾಗತಿಕ ಸಂಸ್ಕೃತಿಗಳೆರಡರಲ್ಲೂ ಸಾಗುವುದನ್ನು ಒಳಗೊಳ್ಳುತ್ತದೆ” (ಪು. ೬೫).

ಬೆಳೆಯುತ್ತಿರುವ ದ್ವಿಸಂಸ್ಕೃತಿ ಅಥವಾ ಮಿಶ್ರ ಅಸ್ಮಿತೆ, ಅಸ್ಮಿತೆಯ ಗೊಂದಲ, ಮತ್ತು ಸ್ವಯಂ-ಆಯ್ಕೆಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಯುವಜನತೆಯ ಮೇಲೆ ಜಾಗತೀಕರಣದ ಮಾನಸಿಕ ಪರಿಣಾಮಗಳ ಸಾಧ್ಯತೆಯನ್ನು ಅರ್ನೆಟ್ (೨೦೦೨) ಚರ್ಚಿಸುತ್ತಾನೆ. ಸಾಂಸ್ಕೃತಿಕ ಅಸ್ಮಿತೆಯ ಮೇಲೆ ಜಾಗತೀಕರಣವು ಪರಿಣಾಮಗಳನ್ನು ಬೀರುತ್ತದೆ. ಸಾಂಸ್ಕೃತಿಕ ಸಮುದಾಯವೊಂದರ ನಂಬಿಕೆಗಳು ಮತ್ತು ರೂಢಿಗಳ ಅಳವಡಿಕೆಯನ್ನು ಇದು ಒಳಗೊಳ್ಳುತ್ತದೆ. ಆಯ್ಕೆ ಮಾಡಲು ಹಲವು ದಾರಿಗಳನ್ನ ಸೃಷ್ಟಿಸುತ್ತಿರುವ ವಿರಳಗೊಳ್ಳುತ್ತಿರುವ ಸಾಂಸ್ಕೃತಿಕ ಗಡಿಗಳು, ಇತರ ಸಂಸ್ಕೃತಿಗಳೊಡನೆ ಹೆಚ್ಚುತ್ತಿರುವ ಸಂಪರ್ಕ (ನೈಜ ಅಥವಾ ಕಾರ್ಯತಃ), ಮತ್ತು ಸಂಸ್ಕೃತಿಗಳಾದ್ಯಂತ ಚಿಂತನೆಗಳ ವಿನಿಮಯ ಮತ್ತು ಹರಡುವಿಕೆಯು, ಆಯ್ಕೆಯ ಅನೇಕ ಮಾರ್ಗಗಳೊಂದಿಗೆ ಸಾಂಸ್ಕೃತಿಕ ಅಸ್ಮಿತೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಸಂಕೀರ್ಣಗೊಳಿಸುತ್ತದೆ, ಈ ಪರಿಸ್ಥಿತಿಯು ದ್ವಿ-ಸಾಂಸ್ಕೃತಿಕ ಅಸ್ಮಿತೆಯನ್ನು ರೂಪಿಸುವ ಫಲಿತಾಂಶವನ್ನು ನೀಡಬಹುದಾಗಿದೆ. ಅಂದರೆ, ತಮ್ಮ ಸಂಸ್ಕೃತಿ-ನಿರ್ದಿಷ್ಟ ಸ್ಥಳೀಯ ಅಸ್ಮಿತೆಯ ಜೊತೆಗೆ, ವ್ಯಕ್ತಿಗಳು ಜಾಗತಿಕ ಅಸ್ಮಿತೆಯೊಂದನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಜಾಗತಿಕ ಮಟ್ಟದಲ್ಲಿ ದೊರೆಯುವ ಮಾಹಿತಿ, ಘಟನೆಗಳು ಮತ್ತು ರೂಢಿಗಳೊಂದಿಗೆ ಸಂಬಂಧಿಸಿರಲು ಶಕ್ತರಾಗುತ್ತಾರೆ ಎಂದರ್ಥ. ಅಷ್ಟಲ್ಲದೆ, ಸ್ಥಳೀಯ ಸಂಸ್ಕೃತಿಗಳ ನಂಬಿಕೆಗಳು ಹಾಗೂ ರೂಢಿಗಳೇ ಬದಲಾಗುತ್ತಿವೆ ಮತ್ತು ಆ ಮೂಲಕ ಬಹುಸಂಸ್ಕೃತಿಯ ಜಗತ್ತನ್ನು ಮತ್ತು ಮಿಶ್ರ ಅಸ್ಮಿತೆಯ ಸಾಧ್ಯತೆಯನ್ನು ಸೃಷ್ಟಿಸುತ್ತಿವೆ. ಒಂದೆಡೆ, ಭಾರತೀಯ ಯುವಜನಾಂಗವು ದೇಶದ ತಂತ್ರಜ್ಞಾನದ ಕ್ರಾಂತಿಯ ಮುಂಚೂಣಿಯಲ್ಲಿದ್ದರೆ, ಮತ್ತೊಂದೆಡೆ, ಅವರು ಯೋಜಿತ(arranged) ವಿವಾಹಕ್ಕೆ ಆದ್ಯತೆ ಕೊಡುವುದನ್ನು ಮುಂದುವರಿಸಿದ್ದು, ಭಾರತೀಯ ಸಮಾಜದಲ್ಲಿ ಮಿಶ್ರ-

ಸಂಸ್ಕೃತಿಯ ಉದಾಹರಣೆಗಳು ನಿಚ್ಚಳವಾಗಿ ಕಂಡುಬರುತ್ತವೆ. ತನ್ನದೇ ಸಂಸ್ಕೃತಿಯಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳಿಗೆ ಹೊಂದಿಕೊಳ್ಳುವಲ್ಲಿನ ಕ್ಲಿಷ್ಟತೆಯಿಂದಾಗಿ ಅಸ್ಮಿತೆಯ ಗೊಂದಲವುಂಟಾಗಬಹುದು. ತನ್ನದೇ ಸಂಸ್ಕೃತಿಯು ಅಸಮರ್ಪಕವೆನಿಸಬಹುದು ಮತ್ತು ಅದೇ ಸಮಯದಲ್ಲಿ ಜಾಗತಿಕ ಸಂಸ್ಕೃತಿಗೆ ಸಂಬಂಧಿಸಿದಂತೆ ವ್ಯಕ್ತಿಯು ಅನುಭವಿಸುವ ತತ್ಸಂಬಂಧಿತ ಪರಕೀಯ ಭಾವನೆಯು ಆ ಮೂಲಕ ಸಂಸ್ಕೃತಿಗ್ರಹಣದ ಒತ್ತಡವನ್ನು ಸೃಷ್ಟಿಸಿ ಅಸ್ಮಿತೆಯ ಗೊಂದಲಕ್ಕೆ ಹಾದಿಯಾಗುತ್ತದೆ (ಆರ್ನೆಟ್ ೨೦೦೨; ಜೆನ್ಸನ್ ಮತ್ತು ಅರ್ನೆಟ್ ೨೦೧೨). ಭಾರತೀಯ ಹದಿಹರೆಯದವರ ಮೇಲಿನ ಸಂಶೋಧನೆಯು ಹುಡುಗಿಯರಲ್ಲಿ ಮತ್ತು ಹುಡುಗರಲ್ಲಿನ ದ್ವಿ-ಸಂಸ್ಕೃತಿಯ ಅಸ್ಮಿತೆಯನ್ನು ಮಾತ್ರ ಖಾತ್ರಿಪಡಿಸದೆ, ಸ್ವಾಸ್ಥ್ಯದೊಂದಿಗಿನ ಅದರ ಸಂಬಂಧವನ್ನು ಸಹ ತೋರಿಸಿಕೊಟ್ಟಿತು (ರಾವ್ ಮತ್ತು ಇತರರು ೨೦೧೩).

ಜಾಗತಿಕ ಬದಲಾವಣೆಗೆ ಯುವಜನಾಂಗವು ಎಷ್ಟರಮಟ್ಟಿಗೆ ದುರ್ಬಲವಾಗುತ್ತದೆಯೊ ಅಷ್ಟರಮಟ್ಟಿಗೆ ಅವರು ಹೊಂದಿಕೊಳ್ಳಬಲ್ಲವರಾಗಿರುತ್ತಾರೆ. ಹಾಗಾಗಿ, ಜಾಗತಿಕ ಜಗತ್ತು ಮುಂದಿಡುತ್ತಿರುವ ಅಸಂಖ್ಯಾತ ಅವಕಾಶಗಳ ಲಾಭವನ್ನು ಪಡೆದುಕೊಳ್ಳುವ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಉದಾಹರಣೆಗೆ, ಹೊಸ ಮಾಹಿತಿಯನ್ನು ಮತ್ತು ಸಂಪರ್ಕ ತಾಂತ್ರಿಕತೆಯನ್ನು ಉಪಯೋಗಿಸಲು ಬೇಕಾದ ಉತ್ತಮ ಮಾಹಿತಿ ಮತ್ತು ಕೌಶಲ್ಯಗಳನ್ನು ಕಿರಿಯ ವ್ಯಕ್ತಿಗಳು ಹೊಂದಿರುತ್ತಾರೆ. ಜಾಗತೀಕರಣವು ಹದಿಹರೆಯದವರ ಜೀವನದ ಸ್ಥಿತಿಗತಿಗಳಲ್ಲಿ-ಅದರಲ್ಲೂ ವಿಶೇಷವಾಗಿ ನಗರ ಪ್ರದೇಶದ ಆರ್ಥಿಕವಾಗಿ ಸ್ಥಿತಿವಂತರಾದ ಮಧ್ಯಮವರ್ಗದ ಜನರಲ್ಲಿ ಧನಾತ್ಮಕವಾದ ಗಮನಾರ್ಹ ಬದಲಾವಣೆಯನ್ನು ತಂದಿದೆ. ಇಂದಿನ ಜಾಗತಿಕ ಜಗತ್ತು ಬಹುವಿಧದ ಸಂಸ್ಕೃತಿಗಳನ್ನು ತಿಳಿದುಕೊಳ್ಳಲು ಸಾಕಷ್ಟು ಅವಕಾಶಗಳನ್ನು ಹದಿಹರೆಯದವರಿಗೆ ವೈಯಕ್ತಿಕವಾಗಿ ಅಥವಾ ಅಂತರ್ಜಾಲ ಅಥವಾ ದೂರದರ್ಶನದಂತಹ ಸಂಪರ್ಕ ತಂತ್ರಜ್ಞಾನದ ಮೂಲಕ ಒದಗಿಸುತ್ತಿದೆ (ಜೆನ್ಸನ್ ಮತ್ತು ಅರ್ನೆಟ್ ೨೦೧೨).

ಬೆಳೆಯುತ್ತಿರುವ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಂಪನ್ಮೂಲಗಳ ಅವಕಾಶವು ಮುಖ್ಯ. ಉದಾಹರಣೆಗೆ, ಅದು ಲಿಂಗ ಹಾಗೂ ಕುಟುಂಬದ ಸಮಾಜೋ-ಆರ್ಥಿಕ ಸ್ಥಾನಮಾನದಂತಹ ವಿಷಯಗಳಿಗೆ ಸಂಬಂಧಿಸಿದಂತೆ ಆಯ್ಕೆ ಹಾಗೂ ನಿರ್ಬಂಧಗಳನ್ನು ನಿರ್ಧರಿಸುತ್ತದೆ (ಮಾರ್ಟಿಮರ್ ಮತ್ತು ಲಾರ್ಸನ್ ೨೦೦೨). ಜಗತ್ತಿನಾದ್ಯಂತ, ಮತ್ತು ವಿಶೇಷವಾಗಿ ಅಭಿವೃದ್ಧಿಶೀಲ ಸಮಾಜಗಳಲ್ಲಿ ಜಾಗತೀಕರಣಗೊಳ್ಳುತ್ತಿರುವ ಜಗತ್ತಿನ ಹಲವಾರು ಅನುಕೂಲಗಳನ್ನು ಅನುಭವಿಸಲು ಆರ್ಥಿಕ ಸಂಪನ್ಮೂಲಗಳಿಲ್ಲದ ಯುವಜನರಿದ್ದಾರೆ. ಹಾಗಿದ್ದೂ ಕೂಡ ಅವರ ಸಾಂಸ್ಕೃತಿಕ ಅಸ್ಮಿತೆ ಹಾಗೂ ಸ್ಥಳೀಯ ಸಂಪ್ರದಾಯಗಳು ಅಪಾಯದಲ್ಲಿವೆ. ಯುವಜನಾಂಗದ ಜಾಗತೀಕರಣದೊಂದಿಗಿನ ಅನುಭವಕ್ಕೆ ಸಾಮಾಜಿಕ ವರ್ಗವು ಪ್ರಮುಖ ಮಧ್ಯವರ್ತಿಯಾಗಿದೆ. ಶಿಕ್ಷಣ ಮತ್ತು ಸಂಪತ್ತಿಗೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳು ಬಹಳವಾಗಿ ವ್ಯತ್ಯಾಸವಾಗುವುದರಿಂದ ಜಾಗತೀಕರಣವು ವಿಭಾಜನಗಳನ್ನು ಬಲಪಡಿಸುತ್ತದೆ. ಹೀಗೆ, ಯುವಜನರು ಹಾಗೂ ಜಾಗತೀಕರಣದ ಜಗತ್ತಿನ ನಡುವಿನ ಸಂಬಂಧವು ಸಂದಿಗ್ಧವಾಗಿದೆ (ವರ್ಲ್ಡ್ ಯೂತ್ ರಿಪೋರ್ಟ್ ೨೦೦೩, ೨೦೦೫).

ಪಾಲಕರು-ಹದಿಹರೆಯದವರ ಸಂಬಂಧವೂ ಸೇರಿದಂತೆ ಸಮುದಾಯದಲ್ಲಿ ಮತ್ತು ಕುಟುಂಬಗಳಲ್ಲಿ ಹದಿಹರೆಯದವರ ಅಂತರ್‌ವೈಯಕ್ತಿಕ ಒಡನಾಟಗಳ ಅನುಭವಗಳಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಲಾಗಿದೆ. ಪಾಲಕರು ಹದಿಹರೆಯದವರಿಗೆ ವಿಶೇಷವಾಗಿ ಅವರ ಶಿಕ್ಷಣಕ್ಕಾಗಿ, ಅದು ಸಾಮಾಜೀಕರಣದ ಸತ್ವಯುತವಾದ ಅಂಶ ಎನ್ನುವ ಗ್ರಹಿಕೆಯಿಂದ ಹೆಚ್ಚಿನ ಆರ್ಥಿಕ ಹೂಡಿಕೆಗಳನ್ನು ಮಾಡುತ್ತಿದ್ದಾರೆ. ಅತ್ಯುತ್ತಮವಾದುದನ್ನು ಒದಗಿಸಲು ಸಣ್ಣ ಕುಟುಂಬವನ್ನು ಹೊಂದುವುದರ ಕಡೆಗೆ ಒಲವು ಹೆಚ್ಚುತ್ತಿದೆ. ತಮ್ಮ ಹದಿಹರೆಯದವರ ದಿನನಿತ್ಯದ ಬದುಕಿನಲ್ಲಿ ಪಾಲಕರು ಹೆಚ್ಚು ತೊಡಗಿಸಿಕೊಳ್ಳುತ್ತಿದ್ದಾರೆ ಮತ್ತು ಅವರ ಚಟುವಟಿಕೆಗಳಿಗೆ ಹೆಚ್ಚು ಪರಿಚಿತರಾಗುತ್ತಿದ್ದಾರೆ. ಶಿಸ್ತನ್ನು ಕಲಿಸುವುದಕ್ಕೆ ಸಂಬಂಧಿಸಿದಂತೆ ಪಾಲಕರ ಅಧಿಕಾರ ಹಾಗೂ ನಿಯಂತ್ರಣವನ್ನು ಕಡಿಮೆ ಮಾಡುವುದರ ಕಡೆಗೆ ಮತ್ತು ಹೆಚ್ಚು ಪ್ರಜಾಸತ್ತಾತ್ಮಕ ಹಾಗೂ ಮುಕ್ತವಾದ

ಸಂಪರ್ಕದೊಂದಿಗೆ ಹದಿಹರೆಯದವರ ಅಗತ್ಯಗಳಿಗೆ ಸ್ಪಂದಿಸುವುದನ್ನು ಹೆಚ್ಚಿಸುವುದರ ಕಡೆಗೆ ಒಲವು ಹೆಚ್ಚುತ್ತಿದೆ. ಅದೇ ಸಮಯದಲ್ಲಿ ಪಾಲಕರು-ಹದಿಹರೆಯದವರ ದೃಷ್ಟಿಕೋನಗಳಲ್ಲಿ ತಲೆಮಾರುಗಳ ವ್ಯತ್ಯಾಸ ಸುಸ್ಪಷ್ಟವಾಗಿದ್ದು, ಅದರಿಂದಾಗಿ, ತಪ್ಪುಗ್ರಹಿಕೆ ಮತ್ತು ವ್ಯಕ್ತಿಗಳ ನಡುವಿನ ಪಾರಸ್ಪರಿಕ ಸಂಘರ್ಷಗಳನ್ನು ಹುಟ್ಟುಹಾಕುತ್ತಿದೆ (ಲಾರ್ಸನ್ ಮತ್ತು ಇತರರು ೨೦೦೨).

ಸಾಮಾನ್ಯವಾಗಿ, ಸಾಮಾಜಿಕ ಬದಲಾವಣೆಯು ವ್ಯಕ್ತಿಗಳು ಹಾಗೂ ಸಂಸ್ಥೆಗಳ ಮೇಲೆ ಬಹುವಿಧದ ಸಂಕೀರ್ಣವಾದ ಪ್ರಭಾವಗಳನ್ನು ಬೀರುತ್ತಿದೆ. ವಿಶೇಷವಾಗಿ, ವಿವಿಧ ರೂಪಗಳ ಬಹುಸ್ತರೀಯ ಸಾಮಾಜಿಕ ಸ್ವರೂಪಗಳೊಂದಿಗಿನ ಭಾರತೀಯ ಸಮಾಜದಲ್ಲಿ ಇದು ಸತ್ಯ. ಭಾರತದ ಹದಿಹರೆಯದವರ ಬಗ್ಗೆ ಏಕೈಕ ಚಿತ್ರಣದ ವ್ಯುತ್ಪನ್ನ(derive)ವು ಕಷ್ಟಸಾಧ್ಯವಾಗಿದ್ದು ಬದಲಿಗೆ ವಿವಿಧ ಪ್ರದೇಶಗಳ ಹಾಗೂ ಸಮಾಜೋ-ಆರ್ಥಿಕ ಸಂದರ್ಭಗಳನ್ನು ಪ್ರತಿನಿಧಿಸುವ "ನಿರಂತರವಾಗಿ ಬದಲಾಯಿಸುತ್ತಿರುವ ಚಿತ್ರಗಳು" ವ್ಯಕ್ತವಾಗುತ್ತವೆ (ವರ್ಮ ಮತ್ತು ಸರಸ್ವತಿ ೨೦೦೨, ಪು. ೧೦೫). ಬೆಳವಣಿಗೆಯ ನಿಟ್ಟಿನ ಸಾಂಪ್ರದಾಯಿಕ ಭಾರತೀಯ-ಹಿಂದೂ ಮಾದರಿಯಲ್ಲಿ ಮತ್ತು ಸಮಕಾಲೀನ ಸಂದರ್ಭದಲ್ಲಿ ಹದಿಹರೆಯವನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎನ್ನುವುದನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗುತ್ತದೆ.

**ಭಾರತೀಯ ಸಾಂಸ್ಕೃತಿಕ ಪರಿಸರದಲ್ಲಿ ಹದಿಹರೆಯ**

ಸಾಂಪ್ರದಾಯಿಕ ಭಾರತದಲ್ಲಿ ಹದಿಹರೆಯವನ್ನು ಹೇಗೆ ಅರ್ಥೈಸಲಾಗಿದೆ ಎಂಬುದನ್ನು ಈ ಭಾಗದಲ್ಲಿ ಚಿತ್ರಿಸಲಾಗಿದ್ದು, ನಂತರದದಲ್ಲಿ ಸಮಕಾಲೀನ ಭಾರತೀಯ ಸಂದರ್ಭದಲ್ಲಿ ಹದಿಹರೆಯವನ್ನು ಕುರಿತ ವಿವರಣೆಯನ್ನು ನೀಡಲಾಗಿದೆ.

**ಬೆಳವಣಿಗೆಯ ನಿಟ್ಟಿನ ಭಾರತೀಯ- ಹಿಂದೂ ಮಾದರಿಯ ಹದಿಹರೆಯ**

ಮಾನವ ಬೆಳವಣಿಗೆಯ ಹಿಂದೂ ಮಾದರಿಯಲ್ಲಿ ಒಂದು ಮಗುವು ಧರ್ಮಗ್ರಂಥಗಳ ಅಧ್ಯಯನ ಮತ್ತು ಅರ್ಥೈಸುವಿಕೆಗೆ ಸಮರ್ಥವಾದಾಗ ಮಾತ್ರ ಅವನನ್ನು/ಅವಳನ್ನು ವ್ಯಕ್ತಿಯನ್ನಾಗಿ ಪರಿಗಣಿಸಲಾಗುತ್ತದೆ. ಹಾಗಾಗಿ, ಬೆಳವಣಿಗೆಯ ಜೀವನ ಚಕ್ರದಲ್ಲಿ ಪ್ರಾರಂಭಿಕ ಹದಿಹರೆಯವನ್ನು ಮೊದಲ ಹಂತವೆಂದು ಪರಿಗಣಿಸಲಾಗುತ್ತದೆ. ಬಾಲ್ಯಾವಸ್ಥೆಯ ಅವಧಿಯನ್ನು ಸೂಚಿಸುವ ನಿರ್ದಿಷ್ಟ ಹಂತಗಳು ಮತ್ತು ವಿಧಿಗಳು ಇರುತ್ತವೆಯಾದರೂ, ಹಿಂದೂ ಲೋಕದೃಷ್ಟಿಯ ಪ್ರಕಾರ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಲು ಮತ್ತು ಅರ್ಥ ಮಾಡಿಕೊಳ್ಳಲು ಶಕ್ತರಾಗುವವರೆಗೆ ಚಿಕ್ಕ ಮಗುವೊಂದನ್ನು ವ್ಯಕ್ತಿ ಎಂದು ಪರಿಗಣಿಸಲಾಗುವುದಿಲ್ಲ. ಮಗುವು ಶಾಲೆಗೆ ಪ್ರವೇಶ ಪಡೆದು ಓದು ಮುಗಿಯವವರೆಗೂ ಅದನ್ನು ಮುಂದುವರಿಸುವ ಸಂದರ್ಭದಲ್ಲಿ, ಈ ಪ್ರಕ್ರಿಯೆಯನ್ನು ಬ್ರಹ್ಮಚರ್ಯದ ಅವಧಿಯಲ್ಲಿ ಕಲಿಕೆಯು ಪ್ರಾರಂಭಗೊಳ್ಳುವಾಗ ಪ್ರಾರಂಭಿಸಲಾಗುತ್ತದೆ. ತರಬೇತಿಗೆ ಮತ್ತು ವಯಸ್ಕ ಬದುಕಿನ ಕಾರ್ಯಗಳ ಜ್ಞಾನವನ್ನು ಗಳಿಸಲು "ಬ್ರಹ್ಮಚರ್ಯ"ವನ್ನು ಮುಖ್ಯವೆಂದು ಪರಿಗಣಿಸಲಾಗುತ್ತದೆ (ಕಾಕರ್ ೧೯೮೧). ಈ ಹಂತವು ಗುರುಗಳಿಂದ ಕಲಿಯುವ ಉದ್ದೇಶಕ್ಕಾಗಿ ಮತ್ತು ನಂತರದ ಹಂತಗಳಲ್ಲಿ ಆಧ್ಯಾತ್ಮಿಕ ಮೋಕ್ಷವನ್ನು ಪಡೆಯುವ ಉದ್ದೇಶಗಳಿಗೆ ಅಗತ್ಯವಾದ ಶುದ್ಧತೆಯನ್ನು ಸೂಚಿಸುವ ಬ್ರಹ್ಮಚರ್ಯೆಯ ಆಚರಣೆಯನ್ನು ಸಹ ಒಳಗೊಂಡಿರುತ್ತದೆ. ಉದಾಹರಣೆಗೆ, ಸಾಂಪ್ರದಾಯಿಕ ಭಾರತದಲ್ಲಿ ಹುಡುಗರನ್ನು (ಅಪರೂಪದ ಸಂದರ್ಭಗಳಲ್ಲಿ ಹುಡುಗಿಯರನ್ನು) ಬ್ರಹ್ಮಚರ್ಯದ ಹಂತದಲ್ಲಿ ಶಾಸ್ತ್ರ ಮತ್ತು ವೇದಗಳ (ಹಿಂದು ಧಾರ್ಮಿಕ ಗ್ರಂಥಗಳು) ಜ್ಞಾನವನ್ನು ಪಡೆಯಲು ಮತ್ತು ಯುದ್ಧದಂತಹ ಇತರ ಅವಶ್ಯಕ ಕಾರ್ಯಭಾರಗಳಲ್ಲಿ ಪಳಗಿಸಲು ಗುರುಕುಲ(ಗುರುವಿನ ಮನೆ)ಕ್ಕೆ ಕಳುಹಿಸಲಾಗುತ್ತಿತ್ತು. ಸಮಕಾಲೀನ ಭಾರತದಲ್ಲಿ ಇದನ್ನು ವಯಸ್ಕ ಅಸ್ಮಿತೆಯನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ವೃತ್ತಿಜೀವನದ ಗುರಿಗಳನ್ನು ಯಶಸ್ವಿಯಾಗಿ ಸಾಧಿಸಲುಹದಿ ಹರೆಯದವರನ್ನು ಸಜ್ಜುಗೊಳಿಸುವ ಇಂದಿನ ಶೈಕ್ಷಣಿಕ

ವ್ಯವಸ್ಥೆಗೆ ಹೋಲಿಸಬಹುದು. 'ಕಿಶೋರಾವಸ್ಥೆ' ಎನ್ನುವ ಪದಗುಚ್ಛವನ್ನು ಹರಯಕ್ಕೆ ಬಂದಿರುವ ಮಗುವನ್ನು ಮತ್ತು 'ಯುವಾವಸ್ಥೆ"ಯನ್ನು ಪ್ರಸ್ತಾವಿಸಲು ಬಳಸಲಾಗುತ್ತದೆ. ಜ್ಞಾನವನ್ನು ಗಳಿಸಿಕೊಳ್ಳುವುದು, ಚಾರಿತ್ರ್ಯವನ್ನು ರೂಪಿಸಿಕೊಳ್ಳುವುದು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು ಕಿಶೋರಾವಸ್ಥೆಯ ಗುರಿಯಾಗಿದೆ. ಬದುಕಿನ ಈ ಅವಧಿಯು ನೈತಿಕ ಬೆಳವಣಿಗೆಗೆ ಅತ್ಯಂತ ಪ್ರಮುಖವಾದುದು ಮತ್ತು ವೈಯಕ್ತಿಕ ಗುರಿಗಳನ್ನು ನಿರ್ಧರಿಸುವ ಹಾಗೂ ಅನುಸರಿಸುವ ಸಮಯ ಎಂದು ಭಾವಿಸಲಾಗಿದೆ (ಚಕ್ಕರತ್ ೨೦೦೫).

"ಸಾಮಾಜಿಕ-ಜಗತ್ತಿನಲ್ಲಿರುವ-ವ್ಯಕ್ತಿಯ ಬೆಳವಣಿಗೆಯ ಹಿಂದೂ ಮಾದರಿಯನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದ್ದು (ಸರಸ್ವತಿ ಮತ್ತು ಇತರರು ೨೦೧೧), ಅದಕ್ಕೆ ಅನುಗುಣವಾಗಿ ಭಾವನಾತ್ಮಕ ಬಂಧಗಳಿಂದ ಪ್ರತ್ಯೇಕಗೊಳ್ಳುವುದಕ್ಕಿಂತ ಅವನ್ನು ಸದೃಢಗೊಳಿಸಿಕೊಳ್ಳುವುದು (ಲಾರ್ಸನ್ ಮತ್ತು ಇತರರು ೨೦೦೩) ಹಾಗೂ ಸಂಬಂಧಾತ್ಮಕ ಕೌಟುಂಬಿಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು (ರೊಲಾಂಡ್ ೧೯೮೮) ಭಾರತದ ಹದಿಹರೆಯದವರ ವಿಕಾಸಾತ್ಮಕ ಕಾರ್ಯಭಾರದ ಗುರಿಯಾಗಿದೆ. ಅಧ್ಯಾಯ ೧ರಲ್ಲಿ ಚರ್ಚಿಸಿದಂತೆ, ಭಾರತದಲ್ಲಿ ವ್ಯಕ್ತಿತ್ವವು ಜೀವನದುದ್ದಕ್ಕೂ ತನ್ನ ರೂಪವನ್ನು ಬದಲಿಸಿಕೊಳ್ಳುತ್ತಲೇ ಅತ್ಯಂತ ಸಂಕೀರ್ಣ ಸಂದರ್ಭಗಳಲ್ಲಿ ವಿಕಾಸಗೊಳ್ಳುತ್ತದೆ, ಸಂಬಂಧಾತ್ಮಕ ಆಯಾಮವನ್ನು ಗೃಹಸ್ಥ ಅಥವಾ ಗೃಹಸ್ಥಾಶ್ರಮದ ಹಂತದವರೆಗೂ ಮೌಲ್ಯಯುತವಾಗಿ ಪರಿಗಣಿಸಲಾಗುತ್ತದೆ, ನಂತರದ ಬದುಕಿನಲ್ಲಿ ಆದ್ಯಾತ್ಮಿಕ ವ್ಯಕ್ತಿತ್ವಕ್ಕೆ ಒತ್ತು ನೀಡಲಾಗುತ್ತದೆ. ಪರಸ್ಪರಾವಲಂಬನೆಯು ಪ್ರಬಲ ವಿಕಾಸಾತ್ಮಕ ಚೌಕಟ್ಟುಗಳಲ್ಲಿ ಒಂದೆನಿಸಿದೆ. ಇದರೊಳಗೆ ಸ್ವಾಯತ್ತತೆಯನ್ನು ಪರಿಕಲ್ಪಿಸಲಾಗಿದೆ ಮತ್ತು ಕಾರ್ಯಗತಗೊಳಿಸಲಾಗಿದೆ. ಇಂದಿನ ಕಾಲದಲ್ಲಿ ಸಂಸ್ಕೃತಿ ಮತ್ತು ಸಂದರ್ಭದ ನಡುವಿನ ಕ್ರಿಯಾತ್ಮಕ ಹಾಗೂ ನಿರಂತರ ಪಾರಸ್ಪರಿಕ ಕ್ರಿಯೆಗಳು ಸಾಂಪ್ರದಾಯಿಕ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತಿವೆ.

**ಸಮಕಾಲೀನ ಭಾರತೀಯ ಸಮಾಜದಲ್ಲಿ ಹದಿಹರೆಯ**

ಭಾರತೀಯ ಸಮಾಜದಲ್ಲಿ "ಯುವ ಜನರು" ಅಥವಾ "ಯೌವನ" ಎನ್ನುವ ಪದಗುಚ್ಛಗಳು ಹದಿಹರೆಯದವರನ್ನು ಮತ್ತು ಯುವ ವಯಸ್ಕರನ್ನು ಸೂಚಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ, ಬದುಕಿನ ಒಂದು ಘಟ್ಟವಾಗಿ ಭಾರತದಲ್ಲಿ ಯೌವನವು ಮೂರು ಪ್ರಧಾನ ಕಾರಣಗಳಿಂದಾಗಿ ಸಾಕಷ್ಟು ಗಮನ ಸೆಳೆದಿದೆ. ಮೊದಲನೆಯದಾಗಿ, ೨೦೧೧ರ ದಶಕದ ಜನಗಣತಿಯ ಪ್ರಕಾರ ೧೩-೩೫ರ ವಯಸ್ಸಿನ ಯುವಜನರು ಭಾರತದ ಜನಸಂಖ್ಯೆಯ ಶೇಕಡ ೬೫ ಭಾಗದಷ್ಟಿದ್ದಾರೆ; ಎರಡನೆಯದಾಗಿ ಯುವಜನರು ಸರ್ವವ್ಯಾಪಿಯಾದ ಹೆಚ್ಐವಿ-ಏಡ್ಸ್ ರೋಗಕ್ಕೆ ಹೆಚ್ಚು ಬಲಿಪಶುಗಳಾಗುತ್ತಾರೆ ಎನ್ನುವ ಅಭಿಪ್ರಾಯ; ಮೂರನೆಯದಾಗಿ, ಯುವಜನರು, ರಾಷ್ಟ್ರದ ಅಭಿವೃದ್ಧಿಗೆ ಅಮೂಲ್ಯವಾದ ಮಾನವ ಸಂಪನ್ಮೂಲಗಳಾಗಿದ್ದಾರೆ ಮತ್ತು ಸಂಭಾವ್ಯ ಕೊಡುಗೆದಾರರಾಗಿದ್ದಾರೆ ಎನ್ನುವ ತಿಳುವಳಿಕೆ (ಭಾರತದ ಜನಗಣತಿ ೨೦೧೧; ಕಪಾಡಿಯಾ ಮತ್ತು ಭಂಗಾವ್ಕರ್ ೨೦೧೩). ರಾಷ್ಟ್ರೀಯ ಬೆಳವಣಿಗೆಗೆ ನೆರವಾಗುವಲ್ಲಿ ಈ ವಿಭಾಗವು ಮೌಲ್ಯಯುತ ಸಾಧನವಾಗಿದೆ ಎನ್ನುವ ನಿರ್ದಿಷ್ಟ ಕಾರಣಕ್ಕಾಗಿ ಬೆಳವಣಿಗೆಯ ಈ ಅವಧಿಯ ಮಹತ್ವವನ್ನು ಕೇವಲ ಶಿಕ್ಷಣ ತಜ್ಞರುಗಳು ಮಾತ್ರವಲ್ಲದೆ, ಅಥವಾ ವಿಶೇಷವಾಗಿ ರಾಷ್ಟ್ರದ ನೀತಿ ನಿರೂಪಕರು ಕೂಡ ಗುರುತಿಸಿದ್ದಾರೆ ಮತ್ತು ಒಪ್ಪಿದ್ದಾರೆ (ಸರಸ್ವತಿ ಮತ್ತು ಒಕೆ ೨೦೧೩). ಯುವಜನರ ಸ್ವಂತದ ಬೆಳವಣಿಗೆಗೆ ಮತ್ತು ಹಾಗೆ ಮಾಡುವುದರಿಂದ ದೇಶದ ಬೆಳವಣಿಗೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಈಗಿನ ಸರಕಾರವು ಯುವಜನರನ್ನು ಆವೃತಗೊಳ್ಳಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ೧೫-೨೯ರ ವಯಸ್ಸಿನವರು ಒಟ್ಟು ಯುವಜನರ ಜನಸಂಖ್ಯೆಯ ಶೇಕಡ ೨೭.೫ರಷ್ಟಿದ್ದಾರೆ (ನ್ಯಾಷನಲ್ ಯೂತ್ ಪಾಲಿಸಿ ೨೦೧೪). ಸಾಮಾಜಿಕ ಹಾಗೂ ಆರ್ಥಿಕ ವರ್ಗ, ಜಾತಿ, ಶಿಕ್ಷಣ ಮಟ್ಟ, ಲಿಂಗ ಮತ್ತು ಗ್ರಾಮೀಣ, ನಗರ, ಅಥವಾ ಬುಡಕಟ್ಟುಗಳ ಭೌಗೋಳಿಕ ಸ್ಥಾನದಲ್ಲಿರುವ ವ್ಯಾಪಕವಾದ ಅಸಮಾನತೆಯಿಂದಾಗಿ ಹದಿಹರೆಯವು ಹೆಚ್ಚಿನ ವೈವಿಧ್ಯತೆಯನ್ನು ಒಳಗೊಂಡಿದೆ.

ಅಂತಹ ವೈವಿಧ್ಯತೆಯು ಭಾರತದ ಹದಿಹರೆಯದವರನ್ನು ಕುರಿತ ಸಾಮಾನ್ಯೀಕರಣದ ಪ್ರಯತ್ನವನ್ನು ಕ್ಲಿಷ್ಟಗೊಳಿಸುತ್ತದೆ.

ವಯಸ್ಕರಿಂದ ಪ್ರತ್ಯೇಕವಾದ ಜಗತ್ತಿನಿಂದ ಚಿತ್ರಿಸಲ್ಪಟ್ಟಿದ್ದು, ಪ್ರಾಪ್ತವಯಸ್ಕತೆಯ ನಿಟ್ಟಿನ ಸಿದ್ಧತೆಯನ್ನೊಳಗೊಂಡ ಬೆಳವಣಿಗೆಯ ಒಂದು ವಿಶಿಷ್ಟ ಹಂತವಾಗಿ ಹದಿಹರೆಯವು ಇಪ್ಪತ್ತನೆ ಶತಮಾನದ ತಾಂತ್ರಿಕ ಹಾಗೂ ಕೈಗಾರಿಕಾ ಸಮಾಜಗಳ ಒಂದು ಸಾಂಸ್ಕೃತಿಕ ನಿರ್ಮಿತಿಯೆನಿಸಿದೆ (ಅರ್ನೆಟ್ ೨೦೦೨). ಇದಕ್ಕೆ ಪ್ರತಿಯಾಗಿ ಭಾರತದಂತಹ ಹಲವಾರು ಪಶ್ಚಿಮೇತರ ಸಮಾಜಗಳು–ಬಾಲ್ಯ-ಪ್ರೌಢಾವಸ್ಥೆಯ ಮುಂದುವರಿಕೆಯ ಲಕ್ಷಣಗಳಿಂದ ವಿವರಿಸಲ್ಪಟ್ಟಿದ್ದು, ತನ್ಮೂಲಕ, ಹದಿಹರೆಯದ ಒಂದು ವಿಶಿಷ್ಟವಾದ ಹಂತ ಅಥವಾ ಘಟ್ಟವನ್ನು ಅನುಪಸ್ಥಿತಗೊಳಿಸಿದೆ. ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯವರೆಗಿನ ಬದುಕಿನ ಕ್ರಮದಲ್ಲಿರುವ ಹೆಚ್ಚಿನ ಸಾಮ್ಯತೆ ಮತ್ತು ನಿರಂತರತೆ ಇದಕ್ಕೆ ಮುಖ್ಯ ಕಾರಣವಾಗಿದೆ. ಭಾರತದ ಸಮಾಜದಲ್ಲಿ ಹದಿಹರೆಯವು ಒಂದು ವಿಶಿಷ್ಟ ಹಂತವಾಗಿದೆಯೆ ಇಲ್ಲವೆ ಎಂಬ ಪ್ರಶ್ನೆಯನ್ನು ಕುರಿತ ಸರಸ್ವತಿ (೧೯೯೯) ಅವರ ಚರ್ಚೆಯು ಇದಕ್ಕೆ ಸಂಗತವಾದ ಅಂಶಗಳನ್ನು ಎತ್ತಿ ತೋರಿಸುತ್ತದೆ. ಪ್ರೌಢಾವಸ್ಥೆಗೆ ಸಾಮಾಜಿಕವಾಗಿ ಪರಿವರ್ತನೆಯಾಗುವ ಗಮನಿಸಬಹುದಾದ ಕೆಲವು ಗುರುತುಗಳು ಕಂಡುಬರುತ್ತವೆಯಾದರೂ, ಪಾಶ್ಚಾತ್ಯ ಸಮಾಜಗಳಿಗೆ ಸಾಮ್ಯತೆಯನ್ನು ಹೊಂದಿರುವ ಹದಿಹರೆಯದ ಒಂದು ವಿಶಿಷ್ಟ ಹಂತದ ಅಸ್ತಿತ್ವವು ಮುಖ್ಯವಾಗಿ ಮೇಲ್ವರ್ಗದ ಸಾಮಾಜಿಕ ವರ್ಗಗಳಲ್ಲಿನ ಇತ್ತೀಚಿನ ದೃಷ್ಟಿಗೋಚರ ಬೆಳವಣಿಗೆ ಎಂಬುದಾಗಿ ಅವರು ಪ್ರತಿಪಾದಿಸುತ್ತಾರೆ. ಅದೇ ರೀತಿಯಲ್ಲಿ ಕೌರ್ ಮತ್ತು ಇತರರು (೨೦೦೧) ಗಮನಿಸುವಂತೆ "...ಬಹುಸಂಖ್ಯಾತ ಭಾರತೀಯ ಮಕ್ಕಳಿಗೆ ಬಾಲ್ಯಾವಸ್ಥೆಯು ಮೊಟಕುಗೊಂಡಿರುತ್ತದೆ ಮತ್ತು ಹದಿಹರೆಯದ ಅನುಭವವು ತೀರ ಅಪರೂಪ" (ಪು. ೨೦೭).

ಸರಸ್ವತಿಯವರ ಪ್ರಕಾರ (೧೯೯೯), ಭಾರತೀಯ ಸಮಾಜದಲ್ಲಿ ಸಾಮಾಜಿಕ ವರ್ಗ ಮತ್ತು ಲಿಂಗವನ್ನು ಆಧರಿಸಿ ಬಾಲ್ಯ-ಪ್ರೌಢಾವಸ್ಥೆಯ ಮುಂದುವರಿಕೆ ಭಿನ್ನವಾಗಿರುತ್ತದೆ. ಕೆಳವರ್ಗಗಳಲ್ಲಿ ಮತ್ತು ಹುಡುಗಿಯರಲ್ಲಿ ಅದರ ಮುಂದುವರಿಕೆ ಹೆಚ್ಚಾಗಿರುತ್ತದೆಯೆಂಬುದು ಸುಸ್ಪಷ್ಟ. ಚಿಕ್ಕ ವಯಸ್ಸಿನಿಂದಲೂ ಹೆಣ್ಣುಮಕ್ಕಳಿಗೆ "ಒಳ್ಳೆಯ" ತಾಯಂದಿರಾಗುವಂತೆ ಮತ್ತು "ಒಳ್ಳೆಯ" ಹೆಂಡತಿಯರಾಗುವಂತೆ ಸಾಮಾಜೀಕರಣಗೊಳಿಸಲಾಗುತ್ತದೆ ಮತ್ತು ಅವರಿಗೆ ಒಡಹುಟ್ಟಿದವರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ಇಂತಹ ಮುಂದುವರಿಕೆಯ ನಡುವೆಯೂ ವಿವಾಹಕ್ಕೂ ಮೊದಲು, ದಾಂಪತ್ಯ ಕುಟುಂಬದ ಜವಾಬ್ದಾರಿಗಳನ್ನು ಹೊರಲು ಹುಡುಗಿಗೆ ಉತ್ತಮ ತರಬೇತಿ ನೀಡುವ ದೃಷ್ಟಿಯಿಂದ ಆಕೆಗೆ ಮನೆಕೆಲಸಗಳ ಹೆಚ್ಚುವರಿ ಜವಾಬ್ದಾರಿಯನ್ನು ಹೊರಲು ವಿಶೇಷವಾಗಿ ತರಬೇತಿ ನೀಡುವ ಸಮಯದಲ್ಲಿ, ಪರಿವರ್ತನೆಯ ಚಿಕ್ಕದೊಂದು ಘಟ್ಟವಿರುತ್ತದೆ. ಪಾರಂಪರಿಕ ವೃತ್ತಿಗಳಲ್ಲಿ ತೊಡಗಿರುವ ಕುಟುಂಬಗಳಲ್ಲಿ ಗಂಡುಮಕ್ಕಳಿಗೆ ಸಂಬಂಧಿಸಿದಂತೆ ಪರಿವರ್ತನೆಯ ಮುಂದುವರಿಕೆಯನ್ನು ವರ್ಮ (೨೦೦೦) ಅವರು ಸಹ ಎತ್ತಿ ತೋರಿಸಿದ್ದಾರೆ. ಹೆಚ್ಚು ಸ್ವಾತಂತ್ರ್ಯ, ಹೆಚ್ಚು ವಿರಾಮದ ಸಮಯ ಮತ್ತು ಮನೆಯ ಕೆಲಸಗಳಲ್ಲಿ ಅಷ್ಟಾಗಿ ತೊಡಗಿಕೊಳ್ಳದಿರುವಂತಹ ಸೌಲಭ್ಯಗಳೊಂದಿಗೆ ಗಂಡು ಮಗುವೆಂಬ ಕಾರಣಕ್ಕಾಗಿ ಗಂಡು ಮಕ್ಕಳಿಗೆ ಪುರುಷಪ್ರಧಾನ ಸಮಾಜದ ಸವಲತ್ತುಗಳಿದ್ದಾಗ್ಯೂ ಕೂಡ ಅವರು ಕುಟುಂಬಕ್ಕೆ ಬೆಂಬಲವಾಗಿ ಗಳಿಕೆಯನ್ನು ಆರಂಭಿಸುವ ಹೊರೆಯನ್ನು ಚಿಕ್ಕ ವಯಸ್ಸಿನಲ್ಲಿಯೆ ಹೊರಬೇಕಾಗುತ್ತದೆ. ಇದು ಹದಿಹರೆಯದ ಸಾಧ್ಯತೆಯನ್ನು ಕುಂದಿಸುವುದಷ್ಟೆ ಅಲ್ಲದೆ ಬಾಲ್ಯವನ್ನೂ ಮೊಟಕುಗೊಳಿಸುತ್ತದೆ.

ಭಾರತದ ನಗರ ಪ್ರದೇಶದ ಮಧ್ಯಮ ಮತ್ತು ಮೇಲ್ವರ್ಗದ ಸಾಮಾಜಿಕ ವರ್ಗಗಳಲ್ಲಿ ಬಾಲ್ಯ-ಪ್ರೌಢಾವಸ್ಥೆಯ ಮುಂದುವರಿಕೆ ದುರ್ಬಲಗೊಂಡಿದ್ದು, ಹದಿಹರೆಯದ ಘಟ್ಟದ ವೈಶಿಷ್ಟತೆಯು ಎದ್ದು ಕಾಣುತ್ತದೆ. ಸುರಳಿತ ಅಂಶಗಳು ಶಿಕ್ಷಣ ಮತ್ತು ವೃತ್ತಿಗೆ ಪೋಷಕರ ಪ್ರೋತ್ಸಾಹ, ಸಮವಯಸ್ಕರೊಂದಿಗಿನ ಪಾರಸ್ಪರಿಕ ಕ್ರಿಯೆಗಳಿಗೆ ಹೆಚ್ಚಿನ ಅವಕಾಶ, ಚಲನಶೀಲತೆಯ ವೃದ್ಧಿ, ಮತ್ತು ಗ್ರಾಹಕರ ವಸ್ತುಗಳ ಲಭ್ಯತೆಗಳನ್ನು ಒಳಗೊಂಡಿವೆ (ಸರಸ್ವತಿ ೧೯೯೯). ಪ್ರಬಲ ವಿಕಾಸಾತ್ಮಕ ಚೌಕಟ್ಟು, ಪರಸ್ಪರಾವಲಂಬನೆಗಳಲ್ಲಿ ಒಂದೆನಿಸಿದಾಗ್ಯೂ, ಸಂಸ್ಕೃತಿ ಮತ್ತು ಸಂದರ್ಭದ ನಡುವಿನ

ಕ್ರಿಯಾತ್ಮಕ ಮತ್ತು ಸುಸಂಗತ ಪಾರಸ್ಪರಿಕ ಕ್ರಿಯೆಗಳು ಸ್ವಾಯತ್ತತೆ ಮತ್ತು ಅಧಿಕಾರದ ಕಲ್ಪನೆಯನ್ನೊ ಒಳಗೊಂಡಂತೆ, ಸಾಂಪ್ರದಾಯಿಕ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತಿವೆ.

ಹೆಣ್ಣುಮಕ್ಕಳಿಗೆ ಸಾಂಪ್ರದಾಯಿಕ ಲಿಂಗಾಧಾರಿತ ಪಾತ್ರದ ತರಬೇತಿ ಮತ್ತು ನಿರ್ವಹಣೆಗೆ ಹೆಚ್ಚು ಒತ್ತು ನೀಡುವುದರೊಂದಿಗೆ ಲಿಂಗದ ವಿಷಯವು ಮುಖ್ಯ ಪಾತ್ರವನ್ನು ವಹಿಸುವುದು ಮುಂದುವರಿಯುತ್ತಿದೆ. ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಿಗೂ ಶಿಕ್ಷಣಕ್ಕೆ ಪ್ರೋತ್ಸಾಹ ಸಿಕ್ಕರೂ ಕೂಡ, ವೃತ್ತಿಯನ್ನು ರೂಪಿಸಿಕೊಳ್ಳಲು ಗಂಡುಹುಡುಗರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ (ಸರಸ್ವತಿ ೧೯೯೯). ಸಾಮಾನ್ಯವಾಗಿ, ಸಾಮಾಜಿಕ ವರ್ಗಗಳಾದ್ಯಂತ ಹುಡುಗಿಯರಿಗಿಂತ ಹುಡುಗರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಕೊಡಲಾಗುತ್ತದೆ. ಪ್ರಣಯ ಸಂಬಂಧಗಳಲ್ಲಿ ಹುಡುಗರಿಗೆ ಹೆಚ್ಚಿನ ನಮ್ಯತೆ(flexibility)ಯಿದ್ದು, ಹುಡುಗಿಯರ ನಿಟ್ಟಿನ ಎಲ್ಲೆಗಳನ್ನು ದೃಢವಾಗಿ ಅಚ್ಚೊತ್ತಲಾಗಿದೆ. ನಗರ ಮಧ್ಯಮ ವರ್ಗದ ಕುಟುಂಬಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಿಗೂ ಹೆಚ್ಚು ವಿರಾಮದ ಸಮಯವಿರುತ್ತದೆ, ಆದರೆ ಹುಡುಗಿಯರು ಮನೆಯಾಧಾರಿತ ಆಸಕ್ತಿಗಳು ಮತ್ತು ಹವ್ಯಾಸಗಳಲ್ಲಿ ಹೆಚ್ಚಾಗಿ ತೊಡಗಿದ್ದು, ಹುಡುಗರು ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಗಮನಿಸಲಾಗಿದ್ದು, ಅದು ಅವರಿಗೆ ಸ್ವಾಯತ್ತತೆಯನ್ನು ಹೊಂದುವ ಹೆಚ್ಚಿನ ಅವಕಾಶವನ್ನು ಒದಗಿಸುತ್ತದೆ (ವರ್ಮ ಮತ್ತು ಶರ್ಮ ೨೦೦೬). ತಾಯಂದಿರು ಶಿಕ್ಷಣ ಪಡೆದಿರುವ ವಿಭಕ್ತ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಕುಟುಂಬಗಳಲ್ಲಿನ ಅನುಭವವು ಹೆಚ್ಚು ಅನುಕೂಲಕರವಾಗಿರುತ್ತದೆ. ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯು ಭಾರತದಲ್ಲಿನ ನಗರ ಮಧ್ಯಮ ವರ್ಗದ ಕುಟುಂಬಗಳಲ್ಲಿ ಹೆಚ್ಚಿನ ಪ್ರಜಾಪ್ರಭುತ್ವೀಕರಣವನ್ನು ತರುತ್ತಿದೆ (ಲಾರ್ಸನ್ ಮತ್ತು ಇತರರು ೨೦೦೩).

ಭಾರತೀಯ ಸಮಾಜದಲ್ಲಿ ಹದಿಹರೆಯವನ್ನು ಪರಿಕಲ್ಪಿಸುವುದು ಮತ್ತು ವ್ಯಾಖ್ಯಾನಿಸುವಲ್ಲಿ ಸಾಮಾಜಿಕ ವರ್ಗವು ಒಂದು ಸಂಗತವಾದ ಅಂಶವಾಗಿರುತ್ತದೆ. ಜಾಗತಿಕ ಪ್ರಭಾವಗಳ ಸಂಕೀರ್ಣತೆಗಳು ಹಾಗೂ ಅವಕಾಶಗಳನ್ನು ಭಾರತದ ನಗರ ಪ್ರದೇಶದ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಭಾಗವೆನಿಸಿದ ಮೇಲ್ಮಧ್ಯಮ ವರ್ಗದ ಜನರಲ್ಲಿ ಉತ್ತಮವಾಗಿ ಗಮನಿಸಬಹುದು. ನಗರದಲ್ಲಿನ ಭಾರತೀಯ ಮಧ್ಯಮ ವರ್ಗದ ಒಂದು ಸಮಗ್ರ ನೋಟವನ್ನು ಅಧ್ಯಾಯ ೧ರಲ್ಲಿ ಕೊಡಲಾಗಿದೆ. ಈ ಮುಂದಿನ ಭಾಗದಲ್ಲಿ, ಹದಿಹರೆಯದವರ ಬದುಕು ನೆಲೆಗೊಂಡಿರುವ ನಿರ್ದಿಷ್ಟ ಸಂದರ್ಭದ ವ್ಯಾಖ್ಯಾನದೊಂದಿಗೆ ಗುಜರಾತಿನ ಬರೋಡಾದ ಮಧ್ಯಮ ವರ್ಗದ ವಿವರಣೆಯನ್ನು ನೀಡಲಾಗಿದೆ.

**ಗುಜರಾತಿನ ಬರೋಡಾದಲ್ಲಿ ನಗರ ಮಧ್ಯಮ ವರ್ಗ**

ಈ ಪುಸ್ತಕದಲ್ಲಿನ ಹದಿಹರೆಯವು ಗುಜರಾತಿನ ಬರೋಡಾದ ನಗರ ಮೇಲ್ಮಧ್ಯಮ ವರ್ಗದ ಸಂದರ್ಭವನ್ನು ಪ್ರತಿನಿಧಿಸುತ್ತದೆ. ಅತ್ಯಂತ ತೀವ್ರಗತಿಯಲ್ಲಿ ಬೆಳೆಯುತ್ತಿರುವ ರಾಜ್ಯಗಳಲ್ಲೊಂದಾದ ಗುಜರಾತ್ ತೀವ್ರ ಆರ್ಥಿಕ ಅಭಿವೃದ್ಧಿ, ವರ್ಧಿಸುತ್ತಿರುವ ಬಳಕೆದಾರನ ಹಿತರಕ್ಷಣೆ, ಮೇಲ್ಮುಖ ಚಲನಶೀಲತೆಗಳ ನಿಟ್ಟಿನಲ್ಲಿ, ಭಾರತದ ಒಂದು ಸೂಕ್ಷ್ಮ ರೂಪವಾಗಿದೆ. ಗುಜರಾತಿನ "ಬಂಗಾರದ ಮೊಗಸಾಲೆ"ಯ ಒಂದು ಭಾಗವೆಂದು ಪರಿಗಣಿಸಲ್ಪಟ್ಟಿರುವ ವಡೋದರ ಅಥವಾ ಬರೋಡಾ, ಗುಜರಾತಿನ ದೊಡ್ಡ ನಗರಗಳಲ್ಲಿ ಮೂರನೆ ಸ್ಥಾನದಲ್ಲಿದೆ ಮತ್ತು ಮಧ್ಯಮ ವರ್ಗದ ಪ್ರಗತಿಶೀಲ ಸಮೃದ್ಧಿಗೆ ಕಾರಣವಾದ ತನ್ನ ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಯಲ್ಲಿ ರಾಜ್ಯವನ್ನು ಪ್ರತಿಬಿಂಬಿಸುತ್ತದೆ. ಈ ನಗರದ ಜನಸಂಖ್ಯೆ ೧.೬೭೦,೮೦೬ (ಭಾರತದ ಜನಗಣತಿ ೨೦೧೧).

*ಸಂಸ್ಕಾರಿ ನಗರಿ*-ಸುಸಂಸ್ಕೃತ ನಗರವೆಂದು ತಿಳಿಯಲಾಗಿರುವ ಬರೋಡವನ್ನು ಗುಜರಾತಿನ ಸಾಂಸ್ಕೃತಿಕ ರಾಜಧಾನಿ ಮತ್ತು ಶೈಕ್ಷಣಿಕ ಕೇಂದ್ರ ಎಂದು ಗುರುತಿಸಲಾಗಿದೆ. ಬರೋಡಾದ ಹಿಂದಿನ ಮಹಾರಾಜ ಶ್ರೀ ಸಯ್ಯಾಜಿರಾವ್ ಗಾಯಕ್‌ವಾಡ್ ಅವರಿಂದ ೧೯೪೭ರಲ್ಲಿ ಸ್ಥಾಪಿತವಾದ ಬರೋಡಾದಲ್ಲಿನ ದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯದಲ್ಲಿ ಹಲವಾರು ಚಟುವಟಿಕೆಗಳು ಕೇಂದ್ರೀಕೃತಗೊಂಡಿವೆ. ಇಲ್ಲಿ ಪ್ರಸಿದ್ಧ

ಪಂಡಿತರುಗಳು ಹಾಗೂ ಕಲಾಕಾರರು ನೆಲೆಸಿದ್ದ ಕಾರಣ, ಐತಿಹಾಸಿಕವಾಗಿ ಈ ನಗರವು ಸಮೃದ್ಧ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪರಂಪರೆಯನ್ನು ಹೊಂದಿದೆ. ೧೯೬೦ರ ದಶಕದ ಪ್ರಾರಂಭದಲ್ಲಿ ಬರೋಡಾದ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹವು ದೊರೆತು, ಕಳೆದ ಕೆಲವು ವರ್ಷಗಳಿಂದ ಸದೃಢಗೊಂಡು ಭಾರತದ ಎಲ್ಲೆಡೆಗಳಿಂದ ಉದ್ಯಮಿಗಳನ್ನು ಆಕರ್ಷಿಸುವುದು ಮುಂದುವರಿದಿದೆ. ಇತ್ತೀಚಿನ ವರ್ಷಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ವಲಸೆಗಾರರ ಸಂಖ್ಯೆಯು ವೃದ್ಧಿಸುತ್ತಿರುವುದನ್ನು ಈ ನಗರದಲ್ಲಿ ಕಾಣಬಹುದಾಗಿದೆ. ಒಟ್ಟಾರೆಯಾಗಿ ಈ ನಗರವು ಒದಗಿಸುತ್ತಿರುವ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅವಕಾಶಗಳು ಮತ್ತು ಅನುಭವಗಳು ಜಗತ್ತಿನಾದ್ಯಂತ ಜನರನ್ನು ಆಕರ್ಷಿಸುವುದು ಮುಂದುವರಿದಿದೆ ಮತ್ತು ಆ ಮೂಲಕ ಇದು ತನ್ನ ವಿಶ್ವಪ್ರೇಮಿಯೆಂಬ ಲಕ್ಷಣವನ್ನು ನಿರ್ವಹಿಸುತ್ತಿದೆ. ಬರೋಡಾಕ್ಕೆ ಭೇಟಿ ನೀಡುವವರು ಮತ್ತು ಹೊಸಬರು ಬರೋಡಾದ ಸರಾಸರಿ ಜನರು ಮುಕ್ತ ಮನಸ್ಸಿನವರು ಹಾಗೂ ಸತ್ಕಾರಶೀಲರು ಎಂದು ಭಾವಿಸುತ್ತಾರೆ. ಗುಜರಾತಿ ಭಾಷೆಯು ಅಧಿಕೃತ ಭಾಷೆಯಾಗಿದ್ದರೂ ಕೂಡ ಹಿಂದಿ, ಮರಾಠಿ, ಮತ್ತು ಇಂಗ್ಲಿಷ್ ಭಾಷೆಯನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಹಿಂದೂ ಧರ್ಮವು ಬರೋಡಾದ ಪ್ರಮುಖ ಧರ್ಮವಾಗಿದ್ದು ಇಲ್ಲಿ ಶೇಕಡಾ ೮೫.೩೯ರಷ್ಟು ಹಿಂದೂ ಅನುಯಾಯಿಗಳಿದ್ದಾರೆ. ಬರೋಡದಲ್ಲಿ ಅಕ್ಷರತೆಯ ಸರಾಸರಿ ಪ್ರಮಾಣ ಗಣನೀಯ ಮಟ್ಟದಲ್ಲಿ ಅಂದರೆ ಶೇಕಡಾ ೯೦.೩೬ರಷ್ಟಿದೆ (ಭಾರತೀಯ ಜನಗಣತಿ ೨೦೧೧). ಶಿಕ್ಷಣಕ್ಕೆ ಮಹತ್ವವಿದ್ದು, ಬಹಳಷ್ಟು ಮಧ್ಯಮ ವರ್ಗದ ವ್ಯಕ್ತಿಗಳು ಸ್ನಾತಕ ಪದವಿಯನ್ನು ಪಡೆಯುವ ಸಾಧ್ಯತೆ ಇದೆ. ಮೇಲ್ಮಧ್ಯಮ ವರ್ಗದ ಕುಟುಂಬಗಳ ಬಹುಸಂಖ್ಯಾತ ಯುವಜನರು ಒಂದು ನಿಯಮವೆಂಬಂತೆ ಪ್ರಖ್ಯಾತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಓದುತ್ತಾರೆ. ನಂತರ ಅವರು, ಇತ್ತೀಚಿಗೆ ಸ್ಥಾಪಿತವಾಗಿದ್ದು, ಜನಪ್ರಿಯತೆಯನ್ನು ಗಳಿಸುತ್ತಿರುವ ಖಾಸಗಿ ವಿಶ್ವದ್ಯಾನಿಲಯಗಳಿದ್ದರೂ ಕೂಡ, ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿಯನ್ನು ಬಯಸುತ್ತಾರೆ. ಬರೋಡಾವು ಸುರಕ್ಷಿತ ನಗರ ಎನ್ನುವ ಹೆಗ್ಗಳಿಕೆಯನ್ನು ಪಡೆದಿದೆ. ಈ ಚಿತ್ರಣವು, ಬರೋಡಾವನ್ನು ಮಹಿಳೆಯರಿಗೆ ಅತ್ಯಂತ ಸುರಕ್ಷಿತ ನಗರವೆಂದು ನಿಯುಕ್ತಗೊಳಿಸಿರುವ ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೊ(NCRB)ದ ಇತ್ತೀಚಿನ ಕ್ರೈಮ್ ಇನ್ ಇಂಡಿಯ ೨೦೧೫ ಎಂಬ ವರದಿಯಿಂದ ಸ್ಥಿರೀಕರಿಸಲ್ಪಟ್ಟಿದೆ (National Crime Records Bureau ೨೦೧೬).

ಪಾಶ್ಚಾತ್ಯ ದೇಶಗಳೊಂದಿಗೆ, ಮುಖ್ಯವಾಗಿ ಅಮೆರಿಕ, ಬ್ರಿಟನ್ನಿನೊಂದಿಗೆ ಅತ್ಯುತ್ಸಾಹದ ಸಂಬಂಧವನ್ನು ಈ ನಗರವು ಹೊಂದಿದೆ. ಬರೋಡದ ಪ್ರತಿ ಮೂರು ಕುಟುಂಬಗಳಲ್ಲಿ ಒಂದು ಕುಟಂಬದ ಸದಸ್ಯರು ಇವೆರಡರಲ್ಲಿ ಯಾವುದಾದರೂ ಒಂದು ದೇಶದಲ್ಲಿ ಅಥವಾ ಇತರ ಪಾಶ್ಚಾತ್ಯ ದೇಶಗಳಲ್ಲಿ ಸಂಬಂಧಿಕರನ್ನು ಹೊಂದಿರುತ್ತಾರೆ. ಅನಿವಾಸಿ ಭಾರತೀಯರು ಅಥವಾ ಅನಿವಾಸಿ ಗುಜರಾತಿಗಳು ನಗರದ ಜನಸಂಖ್ಯೆಯ ಒಂದು ಭಾಗವೇ ಆಗಿದ್ದಾರೆ ಮತ್ತು ರೂಢಿಯ ಮಾತಿನಲ್ಲಿ, “ಅನಿವಾಸಿಗಳ ಕಾಲ” ಎಂದೇ ಜನಪ್ರಿಯವಾಗಿರುವ ಚಳಿಗಾಲದ ಸುತ್ತಮುತ್ತ ಬಹಳಷ್ಟು ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಅನಿವಾಸಿ ಸಂಬಂಧಿಕರು ಮತ್ತು ಸ್ನೇಹಿತರ ಭೇಟಿಯಲ್ಲಿ ಕೇಂದ್ರೀಕೃತವಾಗಿವೆ. ಯುವಜನರು ಉನ್ನತ ಶಿಕ್ಷಣಕ್ಕಾಗಿ ಹೊರ ದೇಶಕ್ಕೆ ಹೋಗಲು ಪ್ರಚೋದನೆ ನೀಡುವುದಕ್ಕೆ ಇರುವ ಕಾರಣಗಳಲ್ಲಿ ಬಹುಶಃ ಜಾಗತೀಕರಣ ಮತ್ತು ಅದರೊಟ್ಟಿಗೆ ಶಿಕ್ಷಣಕ್ಕೆ ನೀಡಿರುವ ಮಹತ್ವವೂ ಒಂದು. ಹಲವಷ್ಟು ಕುಟುಂಬಗಳು ಇಂತಹ ಆಶಯಗಳಿಗೆ ಪ್ರೋತ್ಸಾಹ ಮತ್ತು ಬೆಂಬಲ ನೀಡುತ್ತವೆ.

ಬರೋಡಾದ ಬಹಳಷ್ಟು ಮೇಲ್ಮಧ್ಯಮ ವರ್ಗದ ಕುಟುಂಬಗಳು “ಸಮಾಜಗಳು” ಅಥವಾ “ಕಾಲೊನಿಗಳು” ಎಂದು ಕರೆಯಲ್ಪಡುವ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಮನೆಗಳ ಸಮುಚ್ಚಯ ಅಥವಾ ಅಪಾರ್ಟ್ಮೆಂಟ್ ಕಟ್ಟಡಗಳಲ್ಲಿ ವಾಸಿಸುತ್ತಾರೆ. ಪ್ರಾತಿನಿಧಿಕ ಮಧ್ಯಮವರ್ಗದ ಕುಟುಂಬವು, ರೆಫ್ರಿಜಿರೇಟರ್, ದೂರದರ್ಶನ, ಮ್ಯೂಸಿಕ್ ಪ್ಲೇಯರ್ ಮತ್ತು ಗಾಳಿಕಾವಿಳಿಕ(air-cooler) ಹಾಗೂ ತೀರ ಇತ್ತೀಚೆಗೆ, ತೀವ್ರ ಬೇಸಿಗೆಯ ತಿಂಗಳುಗಳನ್ನು ನಿಭಾಯಿಸಲು ಹವಾನಿಯಂತ್ರಕಗಳನ್ನು ಒಳಗೊಂಡಂತೆ ಎಲ್ಲ ಸೌಲಭ್ಯಗಳೊಂದಿಗೆ ಸುಸಜ್ಜಿತವಾಗಿರುತ್ತದೆ. ಸಾಮಾನ್ಯವಾಗಿ, ಯುವಜನರು ತಮ್ಮದೇ ಆದ ಒಂದು ಕೋಣೆಯನ್ನು ಹೊಂದಿರುವುದು, ಕೆಲವೊಮ್ಮೆ ತಮ್ಮ

ಸಹೋದರ ಸಹೋದರಿಯರೊಂದಿಗೆ ಅದನ್ನು ಹಂಚಿಕೊಳ್ಳುವುದು, ಹೆಚ್ಚಾಗುತ್ತಿದೆ. ಕನಿಷ್ಠ ಎರಡು ವಾಹನಗಳನ್ನು, ಒಂದು ದ್ವಿ ಚಕ್ರ ವಾಹನ ಮತ್ತು ಒಂದು ಕಾರು (ಕೆಲವೊಮ್ಮೆ ಎರಡು ಕಾರುಗಳು) ಹೊಂದಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ವಿಶೇಷವಾಗಿ, ವಾರದ ಕೊನೆಯಲ್ಲಿ ಅಥವಾ ರಜಾ ದಿನಗಳಲ್ಲಿ ಕುಟುಂಬದವರು ವಿಹಾರಾರ್ಥವಾಗಿ ಹೋಟೆಲ್‌ಗಳಿಗೆ ಮತ್ತು ಚಲನಚಿತ್ರಗಳಿಗೆ ಹೋಗುವುದು ವಾಡಿಕೆ. ಬರೋಡಾ ಮಧ್ಯಮ ವರ್ಗದವರಲ್ಲಿ ಆಧುನಿಕತೆಯನ್ನು ಹೇಗೆ ಅರ್ಥೈಸಲಾಗುತ್ತದೆ ಎಂಬುದನ್ನು ವ್ಯಾನ್ ವೆಸ್ಸೆಲ್ (೨೦೦೧) ವಿವರಿಸುತ್ತಾನೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಚರ್ಚಿಸುವಾಗ "ಹಳೆಯ ಚಿಂತನೆಯ ಜನರು ಮತ್ತು "ಆದುನಿಕ ಚಿಂತನೆಯ ಜನರು" ಎನ್ನುವ ವಿಭಜನೆಯನ್ನು ಜನರು ಸೂಚಿಸುತ್ತಾರೆ (ಪು. ೧೦೪) ಯೋಚಿಸದೆ ಸಂಪ್ರದಾಯವನ್ನು ಪಾಲಿಸುವ ಜನರನ್ನು ಹಳೆಯ ಚಿಂತನೆಯವರು ಎನ್ನಲಾಗುತ್ತದೆ. ಮತ್ತು ಅವರನ್ನು ವಿವರಿಸಲು "ಆರ್ಥೋಡಾಕ್ಸ್(ಶಾಸ್ತ್ರಾನುಸಾರಿ)" ಅಥವಾ "ನ್ಯಾರೊ ಮೈಂಡೆಡ್(ಸಂಕುಚಿತ ಬುದ್ಧಿಯ)" ಎಂಬ ಆಂಗ್ಲ ಪದಗುಚ್ಛಗಳನ್ನು ಬಳಸಲಾಗುತ್ತದೆ. ಯುವ ಬರೋಡಿಗರಿಗೆ, ಆಧುನಿಕ ದೃಷ್ಟಿಕೋನವು, "ಹಳೆಯ ಕಾಲದ" ಸಂಪ್ರದಾಯವನ್ನು ತ್ಯಜಿಸಿದ ಲಿಂಗ ಮತ್ತು ಜಾತಿಯ ಆದರ್ಶಗಳನ್ನು ಸೂಚಿಸುತ್ತದೆ. ಇದು ನಮ್ಯತೆಯನ್ನು, ಕಾರ್ಯಸಾಧ್ಯತೆ ಮತ್ತು ಬದಲಾಗುತ್ತಿರುವ ಕಾಲಕ್ಕೆ ಸಮಂಜಸವೆನಿಸುವ ಬದುಕನ್ನು ಪ್ರತಿನಿಧಿಸುತ್ತದೆ. ಈ ಪುಸ್ತಕದಲ್ಲಿ ಚಿತ್ರಿಸಲಾಗಿರುವ ಹದಿಹರೆಯದವರು ಮತ್ತು ಕುಟುಂಬದವರು ಅಂತಹ ಮಧ್ಯಮ ವರ್ಗದ ಕುಟುಂಬಗಳನ್ನು ಪ್ರತಿನಿಧಿಸುತ್ತಾರೆ.

ಪರಾಮರ್ಶನಗಳು:


Athavale, U., Kapadia, S., & Gala, J. (2016). *Views of young adults on social norms related to romantic relationships*. Unpublished master's dissertation. The Maharaja Sayajirao University of Baroda.

Albert, I., Trommsdorff, G., & Mishra, R. (2004). Parenting and adolescent attachment in India and Germany. In G. Zheng, K. Leung, & J. G. Adair (Eds.), *Perspectives and progress in contemporary cross-cultural psychology: Selected papers from the seventeenth international congress of the international association for cross-cultural psychology* (pp. 97–108). Retrieved from http://ebooks.iaccp.org/xian/PDFs/3_4Albert.pdf.

Anandalakshmy, S., & Bajaj, M. (1981). Childhood in the weavers' community in Varanasi: Socialization for adult roles (pp. 31–38). In D. Sinha (Ed.), *Socialization of the Indian child.* New Delhi: Concept.

Arnett, J. J. (1999). Adolescent storm and stress, reconsidered. *The American Psychologist, 54*(5), 317–326. doi:10.1037/0003-066X.54.5.317.

Arnett, J. J. (2000). Emerging adulthood: A theory of development from the late teens through the twenties. *American Psychologist, 55*(5), 469.

Arnett, J. J. (2002). The psychology of globalization. *American Psychologist, 57*(10), 774–783. doi:10.1037//0003-066X.57.10.774.

Arnett, J. J. (2006). Emerging adulthood: Understanding the new way of coming of age. In J. J. Arnett & J. L. Tanner (Eds.), *Emerging adults in America: Coming of age in the 21st century* (pp. 1–19). Washington, DC: American Psychological Association.

Bekker, M. H., & Van Assen, M. A. (2006). A short form of the autonomy scale: Properties of the autonomy-connectedness scale (ACS-30). *Journal of Personality Assessment, 86*(1), 51–60. doi:10.1207/s15327752jpa8601_07.

Booth, M. (2002). Arab adolescents facing the future: Enduring ideals and pressures to change. In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 207–242). Cambridge: Cambridge University Press.

Brown, B. B., & Larson, R. W. (2002). The kaleidoscope of adolescence. Experiences of the world's youth at the beginning of the 21st century. In B. B. Brown, R. W. Larson, and T. S. Saraswathi (Eds.), *The world's youth: Adolescence in eight regions of the globe* (pp. 1–20). Cambridge: Cambridge University Press.

Brown, B. B., Larson, R. W., & Saraswathi, T. S. (2002). *The world's youth: Adolescence in eight regions of the globe*. Cambridge: Cambridge University Press.

Census of India. (2011). *Government of India, Ministry of Home Affairs.* Retrieved from http://www.census2011.co.in/census/city/338-vadodara.html.

Chakkarath, P. (2005). What can Western psychology learn from indigenous psychologies? Lessons from Hindu psychology. In W. Friedlmeier, P. Chakkarath, & B. Schwarz (Eds.), *Culture and human development: The importance of cross-cultural research to the social sciences* (pp. 31–51). New York: Psychology Press.

Chao, R. K. (1994). Beyond parental control and authoritarian parenting style: Understanding Chinese parenting through the cultural notion of training. *Child Development, 65*(4), 1111–1119. doi:10.2307/1131308.

Chao, R. K. (2000). The parenting of immigrant Chinese and European American mothers: Relations between parenting styles, socialization goals, and parental practices. *Journal of Applied Developmental Psychology, 21*(2), 233–248.

Chen, X., & Chen, H. (2010). Children's socio-emotional functioning and adjustment in the changing Chinese society. In R. K. Silbereisen & X. Chen (Eds.), *Social change and human development: Concept and results* (pp. 209–226). New Delhi: Sage.

Collins, W. A., & Steinberg, L. (2006). Adolescent development in interpersonal context. In W. Damon & N. Eisenberg (Eds.), *Handbook of child psychology, Vol. 4: Socioemotional processes* (pp. 1003–1067). New York: Wiley.

Crockett, L. J. (1997). Cultural, historical, and subcultural contexts of adolescence: Implications for health and development. *Faculty Publications, Department of Psychology.* Paper 244. Retrieved from http://digitalcommons.unl.edu/psychfacpub/244.

Dube, L. (1998). *Women and kinship: Comparative perspective on gender in South and South-East Asia*. New Delhi: Vistaar Publications.

Fuligni, A. J. (1998). Authority, autonomy, and parent–adolescent conflict and cohesion: A study of adolescents from Mexican, Chinese, Filipino, and European backgrounds. *Developmental Psychology, 34*(4), 782.

Fuligni, A. J., & Zhang, W. (2004). Attitudes toward family obligation among adolescents in contemporary urban and rural China. *Child Development, 75*(1), 180–192.

Gardiner, H. W., Mutter, J. D., & Kosmitzki, C. (1998). *Lives across cultures: Cross-cultural human development*. New York: Allyn & Bacon.

Georgas, J., Poortinga, Y. H., Berry, J. W., van de Vijver, F. J. R., & Kagitcibasi, C. (2006). Family portraits from 30 countries: An overview. In J. Georgas, J. W. Berry, J. R. van de Vijver, C., Kagitcibasi, & Y. H. Poortinga (Eds.), *Families across cultures: A 30-nation psychological study* (pp. 90–99). New York: Cambridge University Press.

Goossens, L. (2006). The many faces of adolescent autonomy: Parent-adolescent conflict, behavioral decision-making, and emotional distancing. In S. Jackson & L. Goossens (Eds.), *Handbook of adolescent development* (pp. 135–153). New York: Psychology Press.

Greenfield, P. M., Keller, H., Fuligni, A., & Maynard, A. (2003). Cultural pathways through universal development. *Annual Review of Psychology, 54*(1), 461–490.

Grotevant, H. D., & Cooper, C. R. (1986). Individuation in family relationships. *Human Development, 29*(2), 82–100.

Harkness, S., & Super, C. M. (2002). Culture and parenting. In M. H. Bornstein (Ed.), *Handbook of parenting, Vol. 2: Biology and ecology of parenting* (2 ed., pp. 253–280). Mahwah, NJ: Lawrence Erlbaum Associates.

Havas Worldwide. (2011). Millennials: The challenger generation Vol. 11. *Prosumer Reports Series*. Retrieved from havasworldwide.com/prosumer-report.

Jensen, L. A. (2011). Navigating local and global worlds: Opportunities and risks for adolescent cultural identity development. *Psychological Studies, 56*(1), 62–70. doi: http://doi.org/10.1007/s12646-011-0069-y.

Jensen, L. A., & Arnett, J. J. (2012). Going global: New pathways for adolescents and emerging adults in a changing world. *Journal of Social Issues, 68*(3), 473–492. doi:10.1111/j.1540-4560.2012.01759.x.

Jensen, L. A., & Dost-Gözkan, A. (2015). Adolescent-parent relations in Asian Indian and Salvadoran immigrant families: A cultural-developmental analysis of autonomy, authority, conflict, and cohesion. *Journal of Research on Adolescence, 25*(2), 340–351. doi:10.1111/jora.12116.

Jensen, L. A., Arnett, J. J., & McKenzie, J. (2011). Globalization and cultural identity. *Handbook of identity theory and research* (pp. 285–301). New York: Springer.

Kagitcibasi, C. (1996). *Family and human development across cultures: A view from the other side*. Hillsdale, NJ: Lawrence Erlbaum.

Kagitcibasi, C. (2002). A model of family change in cultural context. *Online Readings in Psychology and Culture, 6*(3), 1.

Kagitcibasi, C. (2013). Adolescent autonomy-relatedness and the family in cultural context: What is optimal? *Journal of Research on Adolescence, 23*(2), 223–235.

Kagitcibasi, C., & Yalin, C. (2015). Family in adolescence: Relatedness and autonomy across cultures. In L. A. Jensen (Ed.), *The Oxford handbook of human development and culture: An interdisciplinary perspective* (pp. 410–424). New York: Oxford University Press.

Kahn, R., & Kellner, D. (2006). *Global youth culture*. Retrieved from https://pages.gseis.ucla.edu/faculty/kellner/essays/globyouthcult.pdf.

Kakar, S. (1981). (2nd ed). *The inner world: A psychoanalytic study of childhood in India*. New Delhi: Oxford University Press.

Kapadia, S., & Bhangaokar, R. (2013). *Imageries of youth as a life stage in India*. In G. Misra (Vol. Ed.), XIII (3), *Psychology and psychoanalysis* (pp. 219–254). In D. P. Chattopadhyaya (Gen. Ed.), *History of science, philosophy and culture in Indian civilization*. New Delhi: Center for Studies in Civilization.

Kapadia, S., & Miller, J. (2005). Parent-adolescent relationships in the context of interpersonal disagreements: View from a collectivist culture. *Psychology and Developing Societies, 17*(1), 33–50.

Kärtner, J., Keller, H., Lamm, B., Abels, M., Yovsi, R. D., & Chaudhary, N. (2007). Manifestations of autonomy and relatedness in mothers' accounts of their ethnotheories regarding child care across five cultural communities. *Journal of Cross-Cultural Psychology, 38*(5), 613–628.

Kaur, B., Menon, S., & Konantambigi, R. (2001). Child and adolescent development research. In J. Pandey (Ed.), *Psychology in India revisited—Developments in the discipline* (Vol. 1, pp. 163–227). New Delhi: Sage.

Kuhar, M., & Reiter, H. (2013). Toward a concept of parental authority in adolescence. *CEPS Journal: Center for Educational Policy Studies Journal, 3*(2), 135–155.

Larson, R. W., Jensen, L., Kang, H., Griffith, A., & Rompala, V. (2012). Peer groups as a crucible of positive value development in a global world. In G. Trommsdorff & X. Chen (Eds.), *Values, religion, and culture in adolescent development* (pp. 164–187). New York, NY: Cambridge University Press.

Larson, R. W., & Tran, S. P. (2014). Invited commentary: Positive youth development and human complexity. *Journal of Youth and Adolescence, 43*(6), 1012–1017. doi: http://doi.org/10.1007/s10964-014-0124-9.

Larson, R., Verma, S., & Dworkin, J. (2001). Adolescents' family relationships in India: The daily lives of Indian middle class teenagers. In J. J. Arnett (Ed.), *Readings on adolescence and emerging adulthood* (pp. 133–141). Abington, MA: Prentice Hall.

Larson, R. W., Wilson, S., Brown, B. B., Furstenberg, F. F., Jr., & Verma, S. (2002). Changes in adolescents' interpersonal experiences: Are they being prepared for adult relationships in the twenty-first century. *Journal of Research Adolescence, 12*(1), 31–68.

Larson, R., Verma, S., & Dworkin, J. (2003). Adolescence without family disengagement: The daily family lives of Indian middle class teenagers. In T. S. Saraswathi (Ed.), *Cross-cultural perspectives in human development theory, research and application* (pp. 258–286). New Delhi: Sage.

Lerner, R. M., & Steinberg, L. (2004). The scientific study of adolescent development: Past, present and future. In R. M. Lerner & L. Steinberg, (Eds.). *Handbook of adolescent psychology* (2nd ed., pp 1–12). Hoboken, NJ: John Wiley.

Lerner, R. M. (2006). Developmental science, developmental systems, and contemporary theories of human development. In In R. M. Lerner (Ed.), *Theoretical models of human development, Vol. 1: Handbook of child psychology* (6th ed., pp. 1–17). Hoboken, NJ: Wiley.

Marbell, K. N. (2014). *Encouraging autonomy in a collectivist culture: Examining parental autonomy support in Ghana and the moderating effect of children's self-construal.* Retrieved from http://gradworks.proquest.com/3642806.pdf.

Maria, M. S. (2002). Youth in Southeast Asia: Living within the continuity of tradition and the turbulence of change. In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 171–206). Cambridge: Cambridge University Press.

Markus, H. R., & Lin, L. R. (1999). Conflictways: Cultural diversity in the meanings and practices of conflict. In D. Prentice & D. Miller (Eds.), *Cultural divides: Understanding and overcoming group conflict* (pp. 302–333). New York: Russell Sage Foundation.

McElhaney, K. B. & Allen, J. P. (in press). Sociocultural perspectives on adolescent autonomy. In P. Kerig, M. Schulz, & S. T. Hauser (Eds.), *Adolescence and beyond*. Oxford: Oxford University Press.

Mead, M. (1928). *Coming of age in Samoa.* New York: William Morrow and Company.

Miller, J. G. (2003). Culture and agency: Implications for psychological theories of motivation and social development. *Nebraska Symposium on Motivation, 49,* 59–99.

Mortimer, J. T., & Larson, R. W. (2002). *The changing adolescent experience: Societal trends and the transition to adulthood* (pp. 1–17). New York: Cambridge University Press. http://doi.org/10.1017/CBO9780511613913.

Muss, R. E., & Porton, H. D. (1990). *Adolescent behavior and society: A book of readings.* Fairfield, PA: McGraw-Hill.

National Crime Records Bureau (NCRB). (2016). *Crime in India 2015 statistics.* New Delhi: Ministry of Home Affairs, Government of India.

National Youth Policy (2014). New Delhi: Ministry of Youth Affairs and Sports, Government of India.

Nsamenang, A. B. (2002). Adolescence in sub-Saharan Africa: An image constructed from Africa's triple inheritance. In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 61–104). Cambridge: Cambridge University Press.

Nsamenang, A. B. (2011). The culturalization of developmental trajectories. In L. A. Jensen (Ed.), *Bridging cultural and developmental approaches to psychology: New syntheses in theory, research, and policy*. Oxford: Oxford University Press. doi:10.1093/acprof:oso/9780195383430.003.0011.

Nugent, R. (2006). *Youth in a global world*. Retrieved from www.prb.org/pdf06/YouthInAGlobalWorld.pdf.

Phinney, J. S., Kim-Jo, T., Osorio, S., & Vilhjalmsdottir, P. (2005). Autonomy and relatedness in adolescent-parent disagreements ethnic and developmental factors. *Journal of Adolescent Research, 20*(1), 8–39. doi:10.1177/0743558404271237.

Phinney, J. S., Ong, A., & Madden, T. (2000). Cultural values and intergenerational value discrepancies in immigrant and non-immigrant families. *Child Development, 71*(2), 528–539.

Pinquart, M., & Silbereisen, R. (2005). Understanding social change in conducting research on adolescence. *Journal of Research on Adolescence, 15*(4), 395–406. doi:10.1111/j.1532-7795.2005.00104.x.

Rao, M. A., Berry, R., Gonsalves, A., Hastak, Y., Shah, M., & Roeser, R. W. (2013). Globalization and the identity remix among urban adolescents in India. *Journal of Research on Adolescence, 23*(1), 9–24. doi:10.1111/jora.12002.

Roland, A. (1988). *In search of self in India and Japan: Toward a cross-cultural psychology*. Princeton, NJ: Princeton University Press.

Roth, J. L., & Brooks-Gunn, J. (2003). What exactly is a youth development program? Answers from research and practice. *Applied Developmental Science, 7*(2), 94–111.

Saraswathi, T. S., & Dutta, R. (1988). *Invisible boundaries. Grooming for adult roles*. New Delhi: Northern Book Centre.

Saraswathi, T. S. (1999). Adult-child continuity in India: Is adolescence a myth or an emerging reality? In T.S. Saraswathi (Ed.), *Culture, socialization and human development: theory, research, and application in India* (pp. 213–232). New Delhi: Sage.

Saraswathi, T. S., Mistry, J., & Dutta, R. (2011). Reconceptualizing lifespan development through a Hindu perspective. In L. A. Jensen (2011). *Bridging cultural and developmental approaches to psychology: New syntheses in theory, research, and policy* (pp. 276–299). USA: Oxford University Press.

Saraswathi, T. S., & Oke, M. (2013). Ecology of adolescence in India. *Psychological Studies, 58* (4), 353–364.

Schlegel, A. (2011). *Human development and cultural transmission. Anthropologischer Anzeiger, 68*(4), 457–470. doi:10.1127/0003-5548/2011/0155.

Schlegel, A., & Barry, H., III. (1991). *Adolescence: An anthropological inquiry*. New York: Free Press.

Schlegel, A., & Barry, H., III. (2015). Leaving childhood: The nature and meaning of adolescents transition rituals. In L. A. Jensen, (Ed.). *The Oxford handbook of human development and culture: An interdisciplinary perspective* (pp. 327–340). New York: Oxford University Press.

Schlegel, A., & Hewlett, B. L. (2011). Contributions of anthropology to the study of adolescence. *Journal of Research on Adolescence, 21*(1), 281–289. doi:10.1111/j.1532-7795.2010.00729.x.

Scholte, J. A. (2002). *What is globalization? The definitional issue—Again* (CSGR Working Paper No. 109/02). United Kingdom: Centre for the Study of Globalization and Regionalization, University of Warwick.

Sinha, D. (1986). *Psychology in a third world country. The Indian experiences*. New Delhi: Sage.

Smetana, J. G. (1988). Adolescents' and parents' conceptions of parental authority. *Child Development, 59*(2), 321–335. doi:10.2307/1130313.

Soenens, B., Vansteenkiste, M., Lens, W., Luyckx, K., Goossens, L., Beyers, W., et al. (2007). Conceptualizing parental autonomy support: Adolescent perceptions of promotion of independence versus promotion of volitional functioning. *Developmental Psychology, 43*(3), 633–646. doi:10.1037/0012-1649.43.3.633.

Steinberg, L., & Silverberg, S. (1986). The vicissitudes of autonomy in early adolescence. *Child Development, 57,* 841–851.

Steinberg, L., & Morris, A. S. (2001). Adolescent development. *Journal of Cognitive Education and Psychology,* 2(1), 55–87.

Stevenson, H. W., & Zusho, A. (2002). Adolescence in China and Japan: Adapting to a changing environment. In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 141–170). Cambridge: Cambridge University Press.

Trommsdorff, G., &Kornadt, H. J. (2003). Parent-child relations in cross-cultural perspective. In L. Kuczynski (Ed.), *Handbook of dynamics in parent-child relations* (pp. 271–306). Sage. http://dx.doi.org/10.4135/9781452229645.n14.

Valsiner, J. (2000). *Culture and human development: An introduction*. London: Sage.

Verma, S. (2000). The Indian social reality of passage to adulthood. *ISSBD Newsletter,* 2(37), 6–9.

Verma, S., & Sharma, D. (2006). Cultural dynamics of family relations among Indian adolescents in varied contexts. In K. H. Rubin & O. B. Chung (Eds.), *Parental beliefs, parenting, and child development in cross-cultural perspective* (pp. 185–205). New York: Psychology Press.

Verma, S., & Saraswathi, T. S. (2002). Adolescence in India: Street urchins or Silicon Valley millionaires? In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 105–140). Cambridge: Cambridge University Press.

Welti, C. (2002). Adolescents in Latin America: Facing the future with skepticism. In B. B. Brown, R. W. Larson, & T. S. Saraswathi (Eds.), *The world's youth: Adolescence in eight regions of the globe* (pp. 276–306). Cambridge: Cambridge University Press.

Van Wessel, M. (2011). Cultural contractions and intergenerational relations: the construction of selfhood among middle class youth in Baroda. In H. Donner (Ed.), *Being middle class in India: A way of life* (pp. 100–116). New York: Routledge.

World Youth Report 2003. (2004). United Nations, No. E.03.IV.7 Retrieved November 11, 2016 from http://www.un.org/esa/socdev/unyin/documents/worldyouthreport.pdf.

World Youth Report. (2005). *Young people today, and in 2015*. Retrieved from http://www.youthpolicy.org/library/documents/world-youth-report-2005-young-people-today-and-in-2015/.

Yau, J., & Smetana, J. G. (1996). Adolescent-parent conflict among Chinese adolescents in Hong Kong. *Child Development, 67*(3), 1262–1275.

Yau, J., & Smetana, J. (2003). Adolescent-parent conflict in Hong Kong and Shenzhen: A comparison of youth in two cultural contexts. *International Journal of Behavioral Development, 27*(3), 201–211.

Yeh, K. H., Liu, Y. L., Huang, H. S., & Yang, Y. J. (2007). Individuating and relating autonomy in culturally Chinese adolescents. In J. Liu, C. Ward, A. Bernardo, M. Karasawa, & R. Fischer (Eds.), *Casting the individual in societal and cultural contexts* (pp. 123–146). Korea: Kyoyook-Kwahak-Sa Publishing.

Yeh, K. H., Bedford, O., & Yang, Y. J. (2009). A cross-cultural comparison of the coexistence and domain superiority of individuating and relating autonomy. *International Journal of Psychology, 44*(3), 213–221.

Zimmer-Gembeck, M. J., & Collins, W. A. (2003). Autonomy development during adolescence. In G. R. Adams & M. Berzonsky (Eds.), *Blackwell handbook of adolescence* (pp. 175–204). Oxford: Blackwell Publishers.

Zimmer-Gembeck, M. J., Madsen, S. D., & Hanisch, M. (2011). Connecting the intrapersonal to the interpersonal: Autonomy, voice, parents, and romantic relationships in emerging adulthood. *European Journal of Developmental Psychology, 8*(5), 509–525. doi:10.1080/17405629.2011.567061.